ಪ್ರತಿಭೆ

ಪ್ರೊ. ಬಿ. ಎಚ್. ಶ್ರೀಧರ್

ಬೆಲೆ ರೂ. 5/-

ಪ್ರಬಂಧ ಸಂಕಲನ

ಪ್ರತಿಭೆ

—ಬಿ. ಹೆಚ್. ಶ್ರೀಧರ

ರವೀಂದ್ರ ಪುಸ್ತಕಾಲಯ,
ಸಾಗರ-ಕಾರ್ಗಲ್, ಶಿವಮೊಗ್ಗ ಜಿಲ್ಲೆ

ಬೆಲೆ: ರೂ. 5/-

ಪ್ರಬಂಧ ಸಂಕಲನ

ಪ್ರತಿಭೆ

ಶ್ರೀ ಬಿ. ಎಚ್. ಶ್ರೀಧರ

ರವೀಂದ್ರ ಪುಸ್ತಕಾಲಯ, ಕಾರ್ಗಲ್ - ಸಾಗರ

ಪ್ರಥಮ ಮುದ್ರಣ 1978

1000 ಪ್ರತಿಗಳು

ಬೆಲೆ: ಸಾದಾ ರೂ. 4-00
ಕ್ಯಾಲಿಕೊ ರೂ. 7-00

ಮುದ್ರಣ: ಶಾರದಾ ಛಾಪಖಾನೆ, ಮಂಗಳೂರು

ಪೂಜ್ಯ ಶ್ರೀ ಬಿ. ಎಚ್. ಶ್ರೀಧರ ಎಂ.ಎ. (ಪ್ರಿನ್ಸಿಪಾಲರು) ಅವರ ಈ ಪ್ರಬಂಧಗಳು ಈ ಮುಂಚಿತವಾಗಿ ಅಲ್ಲಿ—ಇಲ್ಲಿ ಮುದ್ರಿತವಾದವು. "ಪ್ರತಿಭೆ" ಎಂಬ ಸಂಕಲನದಲ್ಲಿ ಪ್ರಕಟಿಸಲು ಅನುಮತಿ—ಸಹಕಾರ, ಸಲಹೆ ಪ್ರೋತ್ಸಾಹ ವಿತ್ತ ಅವರಿಗೆ ನಾನು ಸದಾ ಆಭಾರಿಯಾಗಿರುವೆ. ಈ ಸಂಕಲನದ ಪ್ರಬಂಧಗಳನ್ನು ಓದುವುದರಿಂದ "ವಿರಾಟ್ ಸ್ವರೂಪ" ದರ್ಶನವಾಗದಿದ್ದರೂ, ಪ್ರಬಂಧಾಕಾಂಕ್ಷಿಗಳಿಗೆ ನಿರಾಶೆಯನ್ನು ಮಾತ್ರ ನೀಡಲಾರವು ಎಂಬ ಭರವಸೆ ಇದೆ. ಇತ್ತೀಚಿನ ದಿನಗಳ "ಪ್ರಗತಿ"ಯ ಮಾಪನದಲ್ಲಿ ಇದನ್ನು ಅಳೆಯುವದಕ್ಕಿಂತ "ಕಾಲ" ದ ದೃಷ್ಟಿಯಿಂದ ನೋಡುವುದು ಉಚಿತ. ಏಕೆಂದರೆ, ಈ ಪ್ರಬಂಧಗಳಲ್ಲಿ ಸಾರ್ವಕಾಲಿಕ ಸತ್ಯಗಳು ಸಾಕಷ್ಟಿವೆ.

ನಮ್ಮ ಪ್ರಕಾಶನದ ಪ್ರಥಮ "ಪ್ರಬಂಧ" ಸಂಕಲನವಿದು. ಉಚಿತ—ಅನುಚಿತವನ್ನು ಸದಾ ವಾಚಕರು ತಿಳಿಸಿ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥನೆ.

ಮುದ್ರಣ - ಸಲಹೆ - ಸಹಕಾರವಿತ್ತ ಲೇಖಕ, ಮಿತ್ರವೃಂದ ಮತ್ತು ಕಾಸು ಕೊಟ್ಟು ಕೊಂಡ ಅಭಿಮಾನಿ—ಇವರೆಲ್ಲರಿಗೂ ಅಭಾರಿ.

—ಪ್ರಕಾಶಕ

ಅರಿಕೆ

"ಪ್ರತಿಭೆ" ಎಂಬ ಈ ಪ್ರಬಂಧ ಸಂಕಲನದಲ್ಲಿ ಕೆಲ ಸಾಹಿತ್ಯ ಪ್ರಕಾರಗಳ ತರ್ಕಶುದ್ಧ ಲಕ್ಷಣಗಳನ್ನು ಹೇಳಲು ಪ್ರಯತ್ನಿಸಲಾಗಿದೆ. ಪಾಶ್ಚಾತ್ಯವೆಲ್ಲವೂ ಆಧುನಿಕವೆಂದೂ, ಆಧುನಿಕವೆಲ್ಲವೂ ತರ್ಕಶುದ್ಧವೆಂದೂ ಭಾವಿಸುವ ಅಪ್ರಶಸ್ತ ಭಾವನೆಯನ್ನು ತೊಡೆದುಹಾಕಿ ವಿಚಾರಶುದ್ಧತೆಗೆ ಒಂದೇ ಒಂದು ನಿಕಷವಾದ ತಾರ್ಕಿಕ ಸಾಮಂಜಸ್ಯವನ್ನು ಹಿಡಿದು "ಕಾವ್ಯಸೂತ್ರ"ವನ್ನು ಬರೆಯಲು ಪ್ರೇರಕಗಳಾದ ಪ್ರಬಂಧಗಳಲ್ಲಿ ಕೆಲವನ್ನು ಇಲ್ಲಿ ಆಯ್ದು ಕೊಡಲಾಗಿದೆ.

ವಿಮರ್ಶೆಯು ಸರ್ಜನಾತ್ಮಕವೆಂದು ಸಾಹಿತ್ಯ ಕೃತಿಯ ಸಾಲಿಗೆ ಅದನ್ನು ಸೇರಿಸುವುದಾದರೆ, ಯಾವುದನ್ನು ಅದಕ್ಕೆ ಸೇರಿಸದೆ ಬಿಡಲು ಕಾರಣ ಸಿಕ್ಕೀತು ? ವಿಮರ್ಶೆಯು ಸಾಹಿತ್ಯಿಕವಾದ ವಿಚಾರ, ತರ್ಕ, ಬೌದ್ಧಿಕ ವಾದ, ಪ್ರತಿವಾದ ಗುಣ-ದೋಷಗಳ ವಿವರಣೆ ಎಂಬುದು ವಿವೇಕ. ಆದುದರಿಂದ ಈ ಪ್ರಬಂಧಗಳು ಸರ್ಜನಾತ್ಮಕವೆಂಬ ಕಲಾಪ್ರಧಾನಕೃತಿಗಳಲ್ಲ. ಸಾಹಿತ್ಯವೊಂದು ಕಲೆ; ಅದರ ಸ್ವರೂಪದಲ್ಲಿ ಅಡಕವಾಗುವ ವಿವಿಧ ಅಂಗಗಳ ಪರಿಚಯುವನ್ನು ಸ್ಪಷ್ಟವಾಗಿ ಮಾಡಿಕೊಡಲು ಈ ಪ್ರಬಂಧಗಳು ಹೊರಟಿವೆ. ಕರ್ನಾಟಕದ ಪ್ರಸಿದ್ಧ ಪ್ರಗತಿಪರ ಪತ್ರಿಕೆಗಳ ವಿಶಿಷ್ಟ ಸಂಚಿಕೆಗಳಲ್ಲಿ ಇವು ಆಗಲೇ ಪ್ರಕಟವಾಗಿರುವುದರಿಂದ ಅವುಗಳಿಗೆ ಆದಕ್ಕಾಗಿ ಈ ಪ್ರಬಂಧಕಾರನು ಕೃತಜ್ಞನಾಗಿದ್ದಾನೆ.

"ರಸವತ್ (ಸೌಂದರ್ಯವತ್)" ಎನ್ನಿಸದ ಯಾವುದೂ ಕಲಾಕೃತಿಯಲ್ಲ. ಕೃತಿಯೊಂದರ ಅಂಗೋಪಾಂಗಗಳ ಜೋಡನೆಯ ಕ್ರಮವು ಸಂವಿಧಾನ. ಅದು ವಸ್ತುಸಂವಿಧಾನ, ಪಾತ್ರಸಂವಿಧಾನ, ಭಾವ (ರಸ) ಸಂವಿಧಾನ. ಕಾವ್ಯವು ಸಾಹಿತ್ಯ, ರಸವು ಕಾವ್ಯಾರ್ಥ ಅಥವಾ ಇಡಿಯ ಧ್ವನಿ ಇಲ್ಲವೇ ತಾತ್ಪರ್ಯ. ಇಡಿ ಕೃತಿಯೊಂದು ರಸ ಪ್ರತಿಮೆ. ಅದು ಸದೃಶಾನುಭವವನ್ನು ರಸಿಕನಲ್ಲಿ ಮೂಡಿಸಿದಾಗ ಸಫಲವಾಗುವುದು. ಅಂಗೋಪಾಂಗಗಳಲ್ಲಿ ಒಂದೊಂದರ ಬೇರೆ ವಿವರಗಳ ಸಂಯೋಜನೆಯು ರೀತಿ ಅಥವಾ ಶೈಲಿ. ಸಾಹಿತ್ಯದಲ್ಲಿದು ಪದ, ವಾಕ್ಯ, ವಾಕ್ಯೋಚ್ಚಯ, ಪ್ರಕರಣ ಮತ್ತು ಕೃತಿಗಳ ರಚನಾ ವಿಧಾನಕ್ಕೆ ಅನ್ವಯಿಸುತ್ತದೆ. ನಾದ, ಅರ್ಥ, ಕಾಲಮಾನಗಳು ಪದಾಂಗಗಳು. ಶಾಸ್ತ್ರೇತರ (ವಿಜ್ಞಾನೇತರ) ವಾದುದೆಲ್ಲವೂ ಕಾವ್ಯ ಅಥವಾ ಸಾಹಿತ್ಯ; ಇವೆರಡೂ ವಾಙ್ಮಯದ ಮಹಾವಿಭಾಗಗಳು.

ಯಾವ ಸಾಹಿತ್ಯಕೃತಿಯೂ ಓದುಗನ ದೃಷ್ಟಿಯಿಂದ ಪರಾನುಭವದ ಅಭಿವ್ಯಕ್ತಿಯಲ್ಲ. 'ಗ್ರಂಥಗತ ಅನುಭವ ಚಿತ್ರಗಳನ್ನು ಆತ್ಮಸಾತ್ ಮಾಡಿ

ಕೊಂಡಾಗಲೇ ಅವನ ಓದು ಸಾರ್ಥಕ. ಆದುದರಿಂದ ಭಾವಗೀತವು ಕವಿಭಾವಗಳ ಗೀತವಲ್ಲ.' ನಾಟಕವು ಒಟ್ಟಿನಲ್ಲಿ ಪಾತ್ರಭಾವಗಳ ಪ್ರಕಟಣೆಯಲ್ಲ. ಪರಾಪರಭೇದಜ್ಞಾನವು ರಸಾನುಭವದ ಕಾಲದಲ್ಲಿರದು. ಆದುದರಿಂದ ಕೃತಿ ಸಮೀಕ್ಷೆಯು ಯಾವಾಗಲೂ ಅದನ್ನು ಓದಿ, ಕೇಳಿ ಅಥವಾ ಕರಡು ಅನುಭವ ಪಡೆದ ಮೇಲೆ ಓದುಗ ಅಥವಾ ವಿಮರ್ಶಕ ಹೇಳುವ ಸ್ವಾರಸ್ಯ - ಅಸ್ವಾರಸ್ಯಗಳ ಅಂಶಗಳ ಕಥನವನ್ನೇ ಪ್ರಧಾನಾಂಗವನ್ನಾಗಿ ಉಳ್ಳದ್ದು. ವಿಚಾರಮಯವಾಗಿದ್ದರೂ ಕಾವ್ಯತಾತ್ಪರ್ಯದ ರೂಪದಲ್ಲಿ ಹೃದಯದಲ್ಲಿ ರಸ ಪ್ರೇರಣೆಯನ್ನು ಬಲವಾಗಿ ಮಾಡಿದರೆ ಅಂಥ ಒಂದು ಕೃತಿ ಸಾಹಿತ್ಯಕೃತಿಯೇ. ಪ್ರತಿಯೊಂದು ಅಭಿಪ್ರಾಯವೂ ಪ್ರತಿದಿನ ಅಥವಾ ಪ್ರತಿವರ್ಷ ಬದಲಾಗುತ್ತದೆ ಎಂಬುದು ಅರ್ಥವಿಲ್ಲದ ದುರಾಗ್ರಹ. ಹಾಗೇ ಎಲ್ಲ ಅಭಿಪ್ರಾಯಗಳೂ ಅಜರಾಮರ ಎಂಬುದೂ ಪ್ರಮಾಣವಿಲ್ಲದ ಅಭಿಪ್ರಾಯ, ನಮ್ಮ ಭೂಮಿಗೆ ಸೂರ್ಯನೊಬ್ಬನೇ ಎಂಬಂತಹ ಅಭಿಪ್ರಾಯಗಳು ಸ್ಥಿರ. ಅಂಥವುಗಳನ್ನು ಚರ ಎಂಬುದು ಹುಚ್ಚು. ಸಾಹಿತ್ಯ ವಿಮರ್ಶೆಯಲ್ಲಿಯೂ ಈ ನ್ಯಾಯವಿದೆ. ಇದನ್ನರಿಯದವರು ಬಹುಸಂಖ್ಯಾತರಾಗುತ್ತ ಹೋಗುವುದು ನಾಗರಿಕತೆಯ ಅಧಃಪಾತದ ಚಿಹ್ನೆ. ತರ್ಕಶಾಸ್ತ್ರದ ಅಬಕಡಗಳನ್ನರಿಯದವನು ವಿಚಾರಜೀವಿ ಎನ್ನಿಸಿಕೊಳ್ಳುವುದು ಸಾಧ್ಯವಿಲ್ಲ—ವಿಚಾರವಂತರ ಸಮಾಜದಲ್ಲಿ ಆ ಈ ಅವಿಚಾರಜೀವಿಗಳ ದೆಸೆಯಿಂದ ಸಾಹಿತ್ಯ ವಿಮರ್ಶೆಗಳ ಪ್ರಪಂಚದಲ್ಲಿ ಕೆಲವೊಮ್ಮೆ ತಜ್ಞಮನ್ಯ ಅಜ್ಞರಿಗೆ ಗೊಂದಲ ಉಂಟಾಗುವುದು. ಅಂಥವರು ಗೊಂದಲಕ್ಕೆ ಮುಗ್ಧರನ್ನು ಬಲಿಗೊಡುವರು. ಈ ದುರಂತದಿಂದ ನಿಷ್ಪಕ್ಷಪಾತಿಗಳಾದ ಸಭ್ಯ ರಸಿಕರನ್ನು ದೂರವಿಡುವ ಕೆಲಸ ಸಾಹಿತ್ಯಶಿಕ್ಷಕನದು. ಈ ಕೆಲಸ ಚೆನ್ನಾಗಿ ನಡೆದಾಗ ಒಂದು ಜನಾಂಗದಲ್ಲಿ ಪಕ್ವವಾದ ಸಾಹಿತ್ಯಾಭಿರುಚಿ ಬೆಳೆದು ಜೀವನ ಸಾಫಲ್ಯದ ಮುಖ್ಯವಾದ ಸಾಂಸ್ಕೃತಿಕ ಸಾಧನವು ಸಾಮಾನ್ಯರ ಕೈಗೆ ಸಿಕ್ಕಿದಂತಾಗುವುದು.

ಸಾಹಿತ್ಯಕೃತಿಗಳ ಸತ್ವ ಮತ್ತು ಸ್ವರೂಪಗಳನ್ನಾಧರಿಸಿ ಕೃತಿಜಾತಿ ವಿಭಜನೆ ಮಾಡುವದು ಬುದ್ಧಿವಂತರಿಗೆ ಸಹಜ. ಪ್ರಕಾರವಿಭಾಜಕವಾದ ಲಕ್ಷಣಗಳನ್ನು ಗುಣವೆಂದು ಗಣಿಸುವಾಗ ಓದುಗರಿಗೆ ಅನವಶ್ಯಕವಾಗಿ ಗೊಂದಲ ಉಂಟಾಗುವಂತೆ ಮಾಡುವುದು ಅಪ್ರಶಸ್ತ. ಕೆಲ ಇಂಗ್ಲಿಷ್ ಮೇಷ್ಟ್ರುಗಳು ಹೊಸಗನ್ನಡ ಸಾಹಿತ್ಯವು ಇಂಗ್ಲಿಷ್ ಸಾಹಿತ್ಯದ ಗುಲಾಮನೆಂದು ಸಾರಿ ತರ್ಕಶುದ್ಧವಲ್ಲದ ಮತ್ತು ಕನ್ನಡದ ಸಾಹಿತ್ಯಕೃತಿವಿಕಾಸದ ಐತಿಹಾಸಿಕ - ಸಾಂಸ್ಕೃತಿಕ ಸಂಗತಿಗಳ ಆಧಾರವಿಲ್ಲದ ಕೃತಿಜಾತೀಯ ವಿಭಜನೆ ಮಾಡಿದ್ದಕ್ಕೆ (1) ನವೋದಯ

(2) ಪ್ರಗತಿಶೀಲ, (3) ರೊಮ್ಯಾಂಟಿಕ್, (4) ನವ್ಯ ಎಂಬ ಹೆಸರುಗಳು ಉದಾಹರಣೆಗಳು. ಅವುಗಳಲ್ಲೂ ಉತ್ತರೋತ್ತರ ವರ್ಗವು ಉತ್ತಮತರ ಎಂದು ಪ್ರಚಾರಕ್ಕಿಳಿದದ್ದು ಅಶುದ್ಧ, ಅವೈಜ್ಞಾನಿಕ. ಅರಸಾತ್ಮಕವಾದ ವಿಚಾರ ಅಥವಾ ವೈಚಾರಿಕ ದೃಷ್ಟಿಕೋನ ಎಂದೂ ಸಾಹಿತ್ಯಜಾತಿಯ ವಿಭಜನೆಗೆ ಒಳ್ಳೆಯ ಒರೆಗಲ್ಲಾಗದು. ಹಾಗೇ ಕಾವ್ಯಭಣಿತಿಯ ವೈವಿಧ್ಯವೂ ವೈಚಿತ್ರ್ಯವೂ ಕಾವ್ಯಜಾತಿ ವರ್ಗೀಕರಣಕ್ಕೆ ನಿಕಷಗಳಾಗಲಾರವು: ಮೊದಲನೆಯದು ಕಾವ್ಯಗತವಾದ ವಸ್ತುವಿನ ಸ್ವರೂಪದ್ದಾದರೆ, ಎರಡನೆಯದು ರೀತಿಯ ಅಥವಾ ಶೈಲಿಯ ಉಪಾಂಗವೆನ್ನಿಸುವಂಥದು.

1. ವಾಙ್ಮಯ

- ಸಾಹಿತ್ಯ ಅಥವಾ ಕಾವ್ಯ
  - ಗದ್ಯ
  - ಪದ್ಯ
  - ಮಿಶ್ರ
    - ದೃಶ್ಯ
    - ಶ್ರವ್ಯ (ಚಂಪು)
- ಶಾಸ್ತ್ರ ಅಥವಾ ವಿಜ್ಞಾನ

ಕಾವ್ಯ

- 2. ಕಥನ
  - ಕಥೆ
    - ಸಣ್ಣಕಥೆ
    - ದೊಡ್ಡಕಥೆ
  - ಕಾದಂಬರಿ
  - ಮಹಾಕಾವ್ಯ
  - ಖಂಡಕಾವ್ಯ (ಭಾವಗೀತ)
- ವರ್ಣನ
- ವಿವರಣ
- ವಿಚಾರ
- ಸಂವಾದ

3. ವರ್ಣನಪ್ರಧಾನ

- ವಸ್ತುವರ್ಣನ
- ಪಾತ್ರವರ್ಣನ
- ಭಾವವರ್ಣನ
- ಪರಿಸರ ವರ್ಣನ

4. ವಿವರಣಪ್ರಧಾನ

- ವಸ್ತು ಸಮರ್ಥನ
- ಪಾತ್ರ ಸಮರ್ಥನ
- ಭಾವಸಮರ್ಥನ
- ಪರಿಸರ ಸಮರ್ಥನ

5. ವಿಚಾರ ಪ್ರಧಾನ

- ತತ್ತ್ವ ವಿಚಾರ
- ವ್ಯವಹಾರವಿಚಾರ

6. ಸಂವಾದಪ್ರಧಾನ

- ಸುಕುಮಾರ ಪ್ರಯೋಗ (ಸದಂತ)
- ಆವಿದ್ಧ ಪ್ರಯೋಗ (ದುರಂತ)

ತಿಳಿದು ಕೊಳ್ಳಲು ಸುಲಭವಾಗುವ ಈ ಜಾತಿ - ವರ್ಗಗಳಲ್ಲಿ ಜಗತ್ತಿನ ಯಾವ ಭಾಷೆಯ ಯಾವ ಸಾಹಿತ್ಯಕೃತಿಯನ್ನು ಬೇಕಾದರೂ ಅಡಕಗೊಳಿಸಬಹುದು. ವಿಲಾಸ ಬುದ್ಧಿಯಿಂದ ರೂಢಿಗೆ ಬಂದ ಜಾತಿನಾಮ - ವರ್ಗನಾಮಗಳನ್ನು ಆಯಾ ಕೃತಿಯ ಸತ್ತ್ವ ಹಾಗೂ ಸ್ವರೂಪಗಳನ್ನು ಗಮನಿಸಿ ಈ ಶೀರ್ಷಿಕೆಗಳಲ್ಲಿ ಯುಕ್ತವಾದವುಗಳೊಳಗೆ ಸೇರಿಸಿಕೊಂಡರೆ ಸಾಹಿತ್ಯವಿದ್ಯಾರ್ಥಿಗೆ ಗೊಂದಲ ಕಡಿಮೆಯಾದೀತೆಂದು ನನ್ನ ಅನುಭವನಿಷ್ಠವಾದ ಸೂಚನೆ. ಭಾವವೆಂದರೆ ಇಲ್ಲಿ ರಸದ ಪೂರ್ವರೂಪ (ಈಸ್ತೆಟಿಕ್ ಮೂಡ್) ; ಲೋಕದಲ್ಲದೇ ಭಾವನೆ.

ವಾಕ್ಯೋಚ್ಚಯಗಳ ಸಂಘಟನೆಯು ರೂಪವನ್ನೂ ಭಾವ ಅಥವಾ ರಸವು ಸತ್ತ್ವವನ್ನೂ ನಿದರ್ಶಿಸುತ್ತವೆ. ವಸ್ತುವು ವಿಷಯ; ಪಾತ್ರಗಳು ಸಾಹಿತ್ಯದಲ್ಲಿ ಬರುವ (ಕೃತಿಗತ) ವ್ಯಕ್ತಿಗಳು. ಶುದ್ಧವಾದ ತಾತ್ತ್ವಿಕ ವಿಚಾರ, ಸಾಮಾಜಿಕ

ವಿಚಾರ, ಚಾರಿತ್ರಿಕ ವಿಚಾರ, ಬೌದ್ಧಿಕ ಸಿದ್ಧಾಂತದ ವಿಚಾರ, ರಾಜಕೀಯ ಮತವಿಚಾರ, ವಿಜ್ಞಾನದ ವಿಚಾರಗಳನ್ನು ನಿಕಷಗಳನ್ನಾಗಿ ತೆಗೆದುಕೊಂಡು ಕಾವ್ಯಜಾತಿಯ ವಿಭಜನೆ ಮಾಡುವುದು ರಸಶಾಸ್ತ್ರದ ದೃಷ್ಟಿಯಿಂದ ಅಪ್ರಯೋಜಕ, ರಸಿಕರಿಗೆ ಅನುಪಕಾರಕ. ಹಾಗೇ ಪ್ರತೀಕ (ಸಂಕೇತ) ಪ್ರಧಾನ. ಪ್ರತಿಮಾ (ಅಲಂಕಾರ) ಪ್ರಧಾನ ಎಂದು ಮುಂತಾಗಿ ಭಣಿತಿವೈಚಿತ್ರ್ಯವನ್ನಾಧರಿಸಿ ವರ್ಗೀಕರಿಸುವುದೂ ರಸದೃಷ್ಟಿಗೆ ಅಸಂಬದ್ಧ. ಧಾರ್ಮಿಕ - ತಾತ್ವಿಕ ಕಾವ್ಯಗಳೆಂಬ ವಿಭಜನೆಯೂ ಕಾವ್ಯದ ರಸವತ್ತೆಯೆಂಬ ಯೋಗ್ಯತೆಯ ನಿಕಷಕ್ಕೆ ನೇರವಾಗಿ ಸಂಬಂಧಿಸದು; ಅದರಲ್ಲಿರುವುದು ವಿಚಾರ (ಬೌದ್ಧಿಕ ಕಲ್ಪನೆ); ವಿಚಾರ ವೈವಿಧ್ಯದ ಒರೆಗಲ್ಲು ಕಾವ್ಯಜಾತಿಗೆ ಅಪ್ರಸ್ತುತ. ಶಾಸ್ತ್ರಜಾತಿಗೆ ಅದೊಂದೇ ವಿಭಾಜಕ ನಿಯಮ.

ಈ ಸವ್ಯವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಗ್ರಂಥದಲ್ಲಿ ವಿಲಾಸರೂಪವಾದ ಕಾವ್ಯಪ್ರಕಾರಗಳಲ್ಲಿ ಕೆಲವನ್ನೂ ಕಾವ್ಯಾಂಗಗಳಲ್ಲಿ ಕೆಲವನ್ನೂ ಬಿತ್ತರಿಸಲು ಪ್ರಯತ್ನಿಸಲಾಗಿದೆ. ಮಿತ್ರರಾದ ಶ್ರೀ ದಂತಿ ಅವರ ಆಮಂತ್ರಣ ಈ ಯತ್ನಕ್ಕೆ ಕಾರಣ. 10ನೆಯ ಶತಮಾನದಿಂದ 20ನೆಯ ಶತಮಾನದ ವರೆಗೆ ನಡೆದು ಬಂದ ಕನ್ನಡ ಸಾಹಿತ್ಯ ವಿಮರ್ಶೆಯ ಸತತ ಪರಂಪರೆಯ ವಿವಿಧ ಮಟ್ಟಗಳೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ತಾರ್ಕಿಕವಾಗಿ ವಿಶ್ಲೇಷಿಸಿ "ಕಾವ್ಯಸೂತ್ರ"ಕ್ಕೆ ಪೂರಕವಾಗಲೆಂದು ಈ ಪ್ರಬಂಧಗಳನ್ನು ಪ್ರಕಟಿಸಲಾಗಿದೆ. ವಿಚಾರಗಳ ಗೊಂದಲದಲ್ಲಿ ಸಾಹಿತ್ಯರಸಿಕತೆಯು ಬತ್ತಿಹೋಗಿ ಬಾಯಾರಿದ ಗಂಟಲಿನ ಹೊಸ ತಲೆಮಾರಿಗೆ ಕೆಲಮಟ್ಟಿಗಾದರೂ ಇದು ತಣಿವನ್ನಿತ್ತೀತೆಂಬ ಭರವಸೆಯಿಂದ ಈ ಕೃತಿಯನ್ನು ಓದುಗರೆದುರಿಟ್ಟು ಸಮ್ಮನಾಗುತ್ತೇನೆ.

ಈ ಸಂಕಲನವನ್ನು ಪ್ರಕಟಿಸಿದ ರವೀಂದ್ರ ಪುಸ್ತಕಾಲಯಕ್ಕೆ ಸದಾ ನಾನು ಶುಭ ಕೋರಂತ್ತೇನೆ.

ಶಿರಸಿ, **ಬಿ. ಎಚ್. ಶ್ರೀಧರ,**

15–5–1978 (ನಿವೃತ್ತ ಪ್ರಿನ್ಸಿಪಾಲ್, ಎಂ. ಜಿ. ಸಿ. ಆರ್ಟ್ಸ್ ಕಾಲೇಜು)

ಸಂಕಲನದ ವಿವರ

ಇಂದಿನ
ಕನ್ನಡ ಪ್ರಬಂಧಗಳು

[47ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಣಿಪಾಲ, ಡಿಶಂಬರ 27, 28, 29—1960]

ಭಾರತೀಯ ವಿಮರ್ಶೆಯಲ್ಲಿ ವಾಙ್ಮಯವನ್ನು ಶಾಸ್ತ್ರ ಮತ್ತು ಕಾವ್ಯ ಅಥವಾ ಸಾಹಿತ್ಯ ಎಂದು ಮೊದಲು ವಿಭಜಿಸಿಕೊಂಡು. ಆನಂತರ ಕಾವ್ಯವನ್ನು ಗದ್ಯ, ಪದ್ಯ, ಮಿಶ್ರ ಎಂದು ಮೂರು ವಿಧವಾಗಿ ವರ್ಗೀಕರಿಸುವುದು ರೂಢಿ. ಮಿಶ್ರಸಾಹಿತ್ಯದಲ್ಲಿ ನಾಟಕಾದಿ ರೂಪಕ ಮತ್ತು ಚಂಪು ಎಂದು ಉಪವಿಭಾಗ ಗಳಿವೆ. ಅನೇಕ ಪ್ರಸ್ಥಾನಗಳನ್ನು ದಾಟಿ ಬಂದ ಅಲಂಕಾರ ಶಾಸ್ತ್ರದಲ್ಲಿಂದು ವ್ಯಾಪಕಾರ್ಥದಲ್ಲಿ ರಸ ಅಥವಾ ಸೌಂದರ್ಯ ಎಂಬುದೇ ಕಾವ್ಯಜಾತಿಯ ಆತ್ಮ ಎಂಬುದನ್ನು ಒಪ್ಪಲಾಗುತ್ತದೆ.

ಪ್ರಬಂಧವೆಂದರೆ ವಿಶಾಲಾರ್ಥದಲ್ಲಿ Any literary composition ಯಾವುದಾದರೊಂದು ವಾಙ್ಮಯ ಕೃತಿ ಎಂಬುದು ಪರಂಪರಾಗತ ಅರ್ಥ. ಈ ಅರ್ಥವಲ್ಲಿ ವಿಚಾರ ಪ್ರಧಾನವಾದ ಶಾಸ್ತ್ರ ಮತ್ತು ಭಾವ ಪ್ರಧಾನವಾದ ಲಲಿತ ವಾಙ್ಮಯ, ಸಾಹಿತ್ಯ ಅಥವಾ ಕಾವ್ಯ ಎಂಬೆರಡೂ ಅಡಕವಾಗುತ್ತವೆ.

ಛಂದಸ್ಸು ಗದ್ಯ - ಪದ್ಯಗಳ ಶರೀರಭೇದಕ್ಕೆ ನಿಕಷ ಎಂದು ಸಂಸ್ಕೃತ - ಕನ್ನಡ ಅಲಂಕಾರಿಕರ ಮತ, ಏಕೆಂದರೆ ರಮಣೀಯತೆ, ಚಾರುತ್ವ ಅಥವಾ ರಸವೆಂಬುದು ಸಾಹಿತ್ಯ ಸಾಮಾನ್ಯವಾದ ಆತ್ಮ. ಅದು ಕೇವಲ ಪದ್ಯದ ಸೊತ್ತಲ್ಲ. ಈ ದೃಷ್ಟಿ ಯಿಂದ ಗದ್ಯದಲ್ಲಿ ಬರೆದ ಕತೆ - ಕಾದಂಬರಿಗಳೂ ಪದ್ಯ ಕಾವ್ಯದಷ್ಟೇ ರಸ್ಯಮಾನತೆ ಯುಳ್ಳವಾಗುತ್ತವೆ. ಅವುಗಳನ್ನು ಇಂಗ್ಲೀಷಿನಲ್ಲಿ Poetic ಎಂದೇ ವರ್ಣಿಸ ಬೇಕಾಗುವುದಲ್ಲದೆ Prosaic ಎಂದು ಬಣ್ಣಿಸಲಾಗುವುದಿಲ್ಲ.

ಆದರಿಂದು ಆಂಗ್ಲರೀತಿಯಂತೆ ಗದ್ಯ- ಪದ್ಯಗಳ ಶಕ್ತಿ ಹಾಗೂ ಗುರಿಗಳನ್ನು ಪ್ರತ್ಯೇಕಿಸಿ ಹೇಳುವುದು ಅಲ್ಲಲ್ಲಿ ಕಂಡುಬರುತ್ತಿದೆ. ಈ ದಾರಿ ಹಿಡಿದಾಗ ಎಲ್ಲ ಬಗೆಯ ಗದ್ಯಗಳ ಆತ್ಮವೂ ಕೇವಲ ರಸ ಎನ್ನಲಾಗುವುದಿಲ್ಲ. ಏಕೆಂದರೆ ಅಂಥ ಕೆಲವು ಗದ್ಯಗಳಲ್ಲಿ ಶಾಸ್ತ್ರೀಯ. ವೈಜ್ಞಾನಿಕ ಅಥವಾ ನೈತಿಕ ವಿಚಾರಗಳೇ ಪ್ರಧಾನವಾಗಿ ಬರುವುದುಂಟು. ಈ ಹೊಸ ಆವರಣದಲ್ಲಿ ಪ್ರಬಂಧವೆಂಬ ವರ್ಗಕ್ಕೆ ಕತೆ - ಕಾದಂಬರಿಗಳು ಸೇರುವುದಿಲ್ಲ. ವಿಚಾರೇತರವಾದ ಪ್ರಧಾನಾಂಗ ವೆನಿಸುವ ರಸ ಅಥವಾ ಭಾವ ಉಳ್ಳ ಪ್ರಬಂಧಗಳಲ್ಲಿ ವಿಡಂಬನೆ, ಕಲ್ಪನಾವಿಲಾಸ,

ಸಾಮಾನ್ಯ ಹಾಸ್ಯ, ಪ್ರವಾಸ ವರ್ಣನೆ, ವ್ಯಕ್ತಿಚಿತ್ರ, ಚಾರಿತ್ರಪರಿಚಯ, ಲಘು ವಿಚಾರ ಲಹರಿ ಅಥವಾ ಹರಟೆ, ಸಾಮಾನ್ಯವಾದ ಸಾಹಿತ್ಯಪರಿಚಯ, ವಿಶಿಷ್ಟ ಕೃತಿಯ ಮೆಚ್ಚಿಗೆ ಮುಂತಾದವು ಬರುತ್ತವೆ. ಶಾಸ್ತ್ರೀಯ ವಿಚಾರಸಾಹಿತ್ಯದಲ್ಲಿರ ಬೇಕಾದ ಸ್ಪಷ್ಟವಾದ ತಾರ್ಕಿಕ ಬಿಗಿ ಇವುಗಳಲ್ಲಿ ಇರುವುದಿಲ್ಲ. ಆದರೂ ಇವು ಗಳಲ್ಲಿ ಅಸ್ಫುಟವಾಗಿ ತರ್ಕಶುದ್ಧವಾದ ಸುಸಂಬದ್ಧ ಯೋಜನೆ ಇದ್ದೇ ಇರುತ್ತದೆ. ಆ ಯೋಜನೆ ರಸ್ಯಮಾನತೆಯ ಸಾಮಾನ್ಯ ನಿಯಮಗಳಿಂದ ಬದ್ಧವಾದುದು. ಗದ್ಯಬಂಧದಲ್ಲಿರುವುದರಿಂದ ಇವುಗಳ ಇಡಿಯು ಏಕ ಕಲ್ಪನಾ ಪರಿಮಿತವಾದ ಬಿಡಿಭಾಗಗಳೆನಿಸುವ ಉಪಚ್ಛೇದಗಳಿಂದ ಕೂಡಿರುತ್ತದೆ. ಈ ಅಂಶವು ಉಭಯ ಸಾಮಾನ್ಯವೆನ್ನಬಹುದು. ಏಕೆಂದರೆ ವಿಚಾರ ಪ್ರಧಾನ ಪ್ರಬಂಧದ ಉಪಕ್ರಮ ಉಪನ್ಯಾಸ - ಉಪಸಂಹಾರಗಳೂ ಉಪಚ್ಛೇದಾದಿ - ವಿಭಜನೆಗೊಳಪಟ್ಟೇ ರಚಿತ ವಾಗಿರುತ್ತವೆ.

'ಅಪದಃ ಪದಸಂತಾನೋ ಗದ್ಯಂ ತದಪಿ ಗದ್ಯತೇ.' ಪಾದ ನಿಯಮ ಗಳಿಲ್ಲದೆ ಪದಬದ್ಧವಾದ ಸಾಹಿತ್ಯ ವಿಭಾಗವನ್ನು ಗದ್ಯವೆನ್ನುವುದು ರೂಢಿ. ಅದರಲ್ಲಿ ಭಾವಾನುಬಂಧ ಅಥವಾ ರಾಗಬಂಧ ಇಲ್ಲದ ಕಲ್ಪನೆಗಳ ಹೆಣಿಗೆ ಇರು ತ್ತದೆ. Idea ಅಥವಾ ಕಲ್ಪನೆ ಎಂದುದು ಜ್ಞಾನಾನುಭವಸಂಪನ್ನವಾದ ಮನಸ್ಸಿನ ಪುತ್ರ. ಅದು ಸಾಹಿತ್ಯದಲ್ಲಿ ಸಾರ್ಥಕವಾದ ಶಬ್ದಗಳಿಂದ ಸಂಕೇತಿಸಲ್ಪಡುತ್ತದೆ. ಗದ್ಯ-ಪದ್ಯಗಳ ಚುಟುಕಗಳು ಅನಿಬದ್ಧವೆನಿಸಿದರೆ, ಒಂದೇ ಒಂದು ಪ್ರಧಾನ ರಸ ಅಥವಾ ವಿಚಾರ ಸೂತ್ರದಿಂದ ಸಂಗತವಾದವು ನಿಬದ್ಧವೆನಿಸುತ್ತವೆ.

'ಅವನು ಕವಿಕಟ್ಟಿದನು' ಎಂಬಂತಹ ಮಾಡಿನಲ್ಲಿ ಕಂಡುಬರುವ 'ಕಟ್ಟು' ಎಂಬುದು ಬಂಧ ಅಥವಾ Dictionನ್ನು ಹೇಳುತ್ತದೆ. ಗದ್ಯದ ಪದಸಂತಾನದ ಓಟವು ಪದ್ಯದ ಓಟದಂತೆಯೇ ಸಮಬಂಧದಲ್ಲಿ ಸಾಗಬೇಕು. ವರ್ಣಗಳ ಅಥವಾ ಅಕ್ಷರಗಳ ಯುಕ್ತವಾದ ಸಂಯೋಗದಿಂದ ಹೇಗೆ ಅರ್ಥವತ್ತಾದ ಪದ ಅಥವಾ ಶಬ್ದ ಹುಟ್ಟುವುದೋ ಹಾಗೇ ಪದಗಳ ಕ್ರಮಬದ್ಧವಾದ ನಾದದ ಹಾಗೂ ಅರ್ಥದ ಪರಿಣಾಮಕತೆಯು ಬಂಧದಿಂದ ಉಂಟಾಗುತ್ತದೆ. ಯುಕ್ತವಾದ ಬಂಧವು ಮೂರು ವಿಧ: ಮೃದು, ಸ್ಫುಟ, ಮಧ್ಯಮ—ಎಂದು.

"ಗದ್ಯ ಪದ್ಯಗಳ ಭೇದವು ತಾಳ ಲಯಗಳ ಅಂತರದಲ್ಲಿದೆ. ಗದ್ಯವು ನಡೆದರೆ ಪದ್ಯವು ಕುಣಿಯುತ್ತದೆ. ಗದ್ಯ ಕಾವ್ಯದಲ್ಲಿ ವಸ್ತುವಿನ ಮಹತ್ವವು ಹೆಚ್ಚಾಗಿದೆ. ಗದ್ಯದ ಬಿಗುವು ಪದ್ಯದ ಬಿಗುವಿಗಿಂತ ಕಡಿಮೆಯಾದುದು. ಗದ್ಯದ ತಾಳಲಯವು ಸ್ವತಂತ್ರವಾದುದು, ಸ್ವಚ್ಛಂದವಾದುದು. ಅದನ್ನು

ಅಳೆಯುವುದು ಎಂತಹ ಮಾತು! ಗದ್ಯವು ಹಾಡಲರಿಯದು. ಗದ್ಯವು ಬಯಲು ಸೀಮೆಯಾದರೆ ಪದ್ಯವು ಮಲೆನಾಡು. ವ್ಯವಹಾರ, ಶಾಸ್ತ್ರ, ನೀತಿ, ಇತಿಹಾಸ ಮುಂತಾದುವು ಗದ್ಯವನ್ನು ಬಳಸುವ ಜ್ಞಾನವಿಭಾಗಗಳು. ಶ್ರೇಷ್ಠ ಗದ್ಯವು ಕೇವಲ ಪದ್ಯಾತ್ಮಕವಾಗಲಿ ನಿರ್ಣಾಯಕವಾಗಲಿ ಇರಬೇಕೆಂದು ಹೇಳಲಾಗುವುದಿಲ್ಲ. ಗದ್ಯದ ಅನಂತ ಪ್ರಯೋಗಗಳನ್ನೂ ಪ್ರಕಾರಗಳನ್ನೂ ಇನ್ನೂ ಕಂಡುಹಿಡಿಯಬೇಕಾಗಿದೆ" ಎಂಬುದು ಆಧುನಿಕ ವಿಚಾರಿಗಳಾದ ಗೋಕಾಕರ ಬರಹದಲ್ಲಿದೆ.

"ಕನ್ನಡ ಗದ್ಯ 9ನೆಯ ಶತಮಾನದ ದುರ್ವಿನೀತಾದಿಗಳಲ್ಲಿ ಅದೃಶ್ಯ ಸರಸ್ವತಿಯಾಗಿ ಪಂಪಾದಿಗಳ ಚಂಪೂ ಕಾವ್ಯದಲ್ಲಿ ಪದ್ಯಗಳ ಸಾಟಿಯಾಗಿ ವಡ್ಡಾರಾಧನೆ ಚಾವುಂಡರಾಯ ಪುರಾಣಗಳಲ್ಲಿ ಸ್ವತಂತ್ರರೂಪವಡೆದು ಹರಿಹರನಲ್ಲಿ ಮಹಾಭಿಷಿಕ್ತವಾಯಿತೆಂದು ಹೇಳಬಹುದು"—ಎಂದಿದ್ದಾರೆ ಐತಿಹಾಸಿಕವಾಗಿ ಗೋರೂರು ರಾಮಸ್ವಾಮಿ ಅಯ್ಯಂಗಾರರು. ಈ ಪಟ್ಟಿಯಲ್ಲಿರುವ ಮೈಲುಗಲ್ಲುಗಳೊಂದಿಗೆ ಬಸವೇಶ್ವರ, ಅಕ್ಕಮಹಾದೇವಿ, ಕೆಂಪುನಾರಾಯಣ, ಮುದ್ದಣರನ್ನೂ ಸೇರಿಸಬಹುದು. ಹೊಸಗನ್ನಡದ ಗಣ್ಯ ಪದ್ಯಕಾರರೂ ನಾಟಕಕಾರರೂ ಸಾಕಷ್ಟು ಗದ್ಯಗಳನ್ನು ಬರೆದಿದ್ದಾರೆ. ಕತೆ-ಕಾದಂಬರಿಗಳಂತೂ ಶುದ್ಧ ಗದ್ಯಗಳೇ ಆಗಿರುವುದು ಸ್ಪಷ್ಟ.

ಗದ್ಯವೂ ಕಾವ್ಯ ಅಥವಾ ಸಾಹಿತ್ಯ. ಪದ್ಯವೂ ಹಾಗೇ ಎಂಬುದು ನಮ್ಮ ಪರಂಪರಾಗತವಾದ ಶುದ್ಧ ವಿಚಾರ. ಆದುದರಿಂದ ಅವುಗಳಲ್ಲಿಯ ಭೇದವು ಆತ್ಮಸ್ಥವೆನ್ನುವುದು ಅಪಾಯಕರ. ಅವುಗಳ ಭೇದವಿರುವುದು ಶರೀರದಲ್ಲಿ ಎಂದರೆ ಎಲ್ಲರಿಗೂ ಸ್ವಯಂವೇದ್ಯವಾಗುತ್ತದೆ. ಗದ್ಯಕ್ಕೆ ಛಂದೋಬಂಧವಿಲ್ಲ; ಭಾಷಾಬಂಧವಷ್ಟೇ. ಪ್ರಬಂಧವೆಂದರೆ ಮೂಲತಃ ಗದ್ಯ-ಪದ್ಯಗಳೆರಡನ್ನೂ ಒಳಗೊಳ್ಳುತ್ತದೆ. ಅದರ ಅರ್ಥವ್ಯಾಪ್ತಿಯನ್ನು ಕಿರಿದು ಮಾಡುತ್ತಾ ಹೋದಾಗ ಗದ್ಯವೆಂದಾಗುತ್ತದೆ ಮತ್ತು ಸಂಕ್ಷೇಪಿಸಿದಾಗ ಗದ್ಯನಿಬಂಧ ಎಂದಾಗುತ್ತದೆ. ಕೆಲವರು ಹರಟೆಯನ್ನು ಈ ಹ್ರಸ್ವಾರ್ಥದ ಪ್ರಬಂಧದ ಕಕ್ಷೆಯಲ್ಲಿ ವರ್ಗೀಕರಿಸುತ್ತಾರೆ. ಆದರೆ ಗೊಡ್ಡು ಹರಟೆಯನ್ನು ಯಾವ ದೃಷ್ಟಿಯಿಂದಲೂ ಪ್ರಬಂಧದ ವರ್ಗಕ್ಕೆ ಸೇರಿಸಲು ಬರಲಾರದು. ಭಾಷಣ, ಹರಟೆ, ಪ್ರಬಂಧ ಎಂದು ಕರೆಯಲ್ಪಡುವ ಸತ್ಕೃತಿಗಳಲ್ಲಿ ಸಾಮಾನ್ಯ ಲಕ್ಷಣಗಳಿಂದು ಅನೇಕ ಕಡೆ ಕಂಡು ಬರಬಹುದು. ಆದರೆ ಕಥೆಗೂ ಸಣ್ಣಕತೆಗೂ ಎಂಥ ಭೇದವಿದೆಯೋ ಅಂಥ ಭೇದವೇ ಶುದ್ಧವಾದ ಪ್ರಬಂಧಕ್ಕೂ ಮಿಕ್ಕ ಎರಡು ಬಗೆಯ ಕೃತಿಗಳಿಗೂ ನಡುವೆ

ಇದೆ. ವಿಚಾರ ಪ್ರಧಾನವಾದ ಭಾಷಣ, ಅಂತರ್ಯೋಜನೆಯುಳ್ಳ ಹಾಗೂ ಪ್ರಧಾನತಃ ವಿಚಾರ ಮಿಶ್ರಿತವಾದ ಭಾವಾವೇಶವುಳ್ಳ ಲೇಖನ ಅಥವಾ ಭಾಷಣ ಮತ್ತು ವಿಮರ್ಶಾತ್ಮಕವಾದ ಮುನ್ನುಡಿ - ಹಿನ್ನುಡಿಗಳು ಪ್ರಬಂಧ ಸ್ವರೂಪವವೇ ಆಗಿರುತ್ತವೆ. ಏಕೆಂದರೆ ಪ್ರೌಢ ವಿದ್ಯಾರ್ಥಿಗಳಿಂದ ಇಂದು ಪರೀಕ್ಷೆಯಲ್ಲಿ ಎಷ್ಟೋ ವಿಷಯಗಳಲ್ಲಿ Essay type of answer ಪ್ರಬಂಧ ಸ್ವರೂಪದ ಉತ್ತರವನ್ನು ನಿರೀಕ್ಷಿಸಲಾಗುತ್ತದೆ. ಅಂದರೆ ಹೆಚ್ಚಾಗಿ ಅಂಥ ಉತ್ತರಗಳು ಕೇವಲ ಕಥನಗಳಾಗಿರದೆ, ಉದಾಹರಣೆಗಾಗಿ ಮಾತ್ರ ಕಥಾಸಂದರ್ಭಗಳ ಸಾರ ವನ್ನು ಅಗತ್ಯವಿದ್ದಲ್ಲಿ ಒಳಗೊಂಡು, ವಿವರಣ - ಸಮರ್ಥನ - ವಿವೇಚನ ಅಥವಾ ವಿಶ್ಲೇಷಣ ಮತ್ತು ನಿರ್ಣಯಗಳತ್ತ ನಡೆಯಬೇಕೆಂಬ ಎಂದು ಅಭಿಪ್ರಾಯ. ಆದರಿವು ವಿಮರ್ಶಾತ್ಮಕ ಪ್ರಬಂಧಗಳೆನ್ನಿಸುವುವಲ್ಲದೆ, ಲಲಿತಪ್ರಬಂಧಗಳೆನ್ನಿಸವು.

ಇಂಥ ಪ್ರಬಂಧವಾವುದೂ ಅತಿ ದೀರ್ಘವಾಗಿರದು; ಅತಿ ಹ್ರಸ್ವವಾ ಗಿಯೂ ಇರಲಾರದು. ಆದರೆ ಇಂತಿಷ್ಟೇ ಎಂಬ ಪುಟಪರಿಮಿತಿಯನ್ನು ಯಾರೂ ನಿರ್ದೇಶಿಸಿ ಪ್ರಬಂಧ ಲಕ್ಷಣವನ್ನು ಹೇಳಲಾರರು. ಪ್ರಬಂಧಕ್ಕೆ ವಸ್ತುಭೇದವಿಲ್ಲ. ಆದರೆ ವಸ್ತುವಿಭಜನೆಯ ಕ್ರಮಗತಿ ಅನಿವಾರ್ಯವಾದುದು. ವಿವಾದಪ್ರಧಾನ ವಾದ ಪ್ರಬಂಧವು ಒಂದು ಮುಖ್ಯ ನಿಗಮನ ಅಥವಾ ನಿರ್ಣಯವನ್ನು ಇಲ್ಲವೆ ಒಂದು ಸಿದ್ಧಾಂತವನ್ನು ಉದ್ದೇಶವನ್ನಾಗಿ ಇಟ್ಟುಕೊಂಡರೆ, ಭಾವಪ್ರಧಾನವಾದ ಲಲಿತಪ್ರಬಂಧವು ಪ್ರಧಾನಭಾವ ಅಥವಾ ಪ್ರಧಾನರಸ ಎಂಬ ಉದ್ದೇಶದಿಂದ ಇಡಿಯಾಗಿ ನಿಯಂತ್ರಿಸಲ್ಪಟ್ಟಿರುತ್ತದೆ. ಈ ಇಬ್ಬಗೆಯ ಪ್ರಬಂಧದಲ್ಲೂ ಉದ್ದೇಶ ವಿಸ್ಮೃತಿ, ಅಪ್ರಸ್ತುತ ಪ್ರಲಾಪ, ಭಾವಗಳ ಅಥವಾ ವಿಚಾರಗಳ ಅನನುಕ್ರಮ ಮತ್ತು ಅಸಂಗತಿ ಅಥವಾ ವ್ಯಾಹತಿ ಬರಲಾರದು. ವಿಚಾರ ಪ್ರಧಾನವಾದ ಪ್ರಬಂಧದ ಉತ್ತಮ ರೂಪವೆಂದರೆ ತರ್ಕ ಅಥವಾ ವಾದ: ಪ್ರತಿಪಾದ್ಯ-ಪ್ರತಿಪಾದಕ ಸಂಬಂಧವನ್ನು ಸ್ಪಷ್ಟವಾಗಿ ಹೆಜ್ಜೆ ಹೆಜ್ಜೆಗೂ ತೋರಿಸುವ ಘನ ಪ್ರಬಂಧ. ಶಾಸ್ತ್ರಗ್ರಂಥಗಳೆಲ್ಲಾ ಈ ನಡೆಯವು. ಸುಮಾರು 300ರ ಸನಿಹ ವನ್ನು ಮುಟ್ಟುವ ಮುಟಿನೆಯ ಒಂದು ಅಂಶದ ಕಿರೀಟಾಕೃತಿಯ ಪುಟಗಳುಳ್ಳ "ಸಂಸ್ಕೃತ ನಾಟಕ" ಎಂಬ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಯಂತಹ ಪ್ರಬಂಧಗಳು ಇಂದು ಕನ್ನಡದಲ್ಲಿ ಪ್ರಕಟವಾದ ಒಳ್ಳೆಯ ವಿಮರ್ಶಾತ್ಮಕ ಮಹಾ ಪ್ರಬಂಧಗಳೆನ್ನಬಹುದು.

ಪ್ರಬಂಧ ಸಂಕಲನಗಳಲ್ಲಿ ಕಂಡುಬರುವ ಯಾವ ಒಂದು ಪ್ರಬಂಧವೂ "ಸಂಸ್ಕೃತ ನಾಟಕ"ದಷ್ಟು ದೀರ್ಘವಾಗಿರುವುದಿಲ್ಲ. ಅವೆಲ್ಲಾ ಅಂಥ ಹತ್ತು.

ಇಪ್ಪತ್ತು ಅಥವಾ ಮೂವತ್ತು ಪುಟಗಳಷ್ಟಿದ್ದರೆ ಹೆಚ್ಚು. ಮುಗಳಿಯವರ "ಸಾಹಿತ್ಯೋಪಾಸನೆ" ಯು ಅಂಥ ಒಂದು ವಿಮರ್ಶಾತ್ಮಕ ಪ್ರಬಂಧ ಸಂಕಲನ. ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರ "ಸಾಹಿತ್ಯ ಮತ್ತು ಜೀವನ ಕಲೆ" ಎಂಬುದೂ ಅಂಥದೇ ಒಂದು ಸಂಕಲನ. ಡಿ. ವಿ. ಜಿ. ಅವರ "ಸಾಹಿತ್ಯ ಶಕ್ತಿ." ಬೇಂದ್ರೆಯವರ "ಸಾಹಿತ್ಯ ಮತ್ತು ವಿಮರ್ಶೆ" ಮುಂತಾದವುಗಳಲ್ಲದೆ, ಅನೇಕ ಮಹನೀಯರಿಗರ್ಪಿಸಿದ ಸಂಭಾವನಾ ಗ್ರಂಥಗಳೂ ಉಕ್ತರೀತಿಯ ಪ್ರೌಢ ಪ್ರಬಂಧಗಳ ಮಾಲೆಗಳಾಗಿವೆ.

ವಿಚಾರ, ವಿಮರ್ಶೆ, ವಿವೇಚನೆ. ವಿಶ್ಲೇಷಣೆ ಅಥವಾ ಚರ್ಚೆ ಪ್ರಧಾನವಾಗಿರುವ ಪ್ರಬಂಧಗಳಿಂದು ಸರಿಯಾದ ಸ್ವರೂಪಸಿದ್ಧಿಯನ್ನು ಹೊಂದಿರುವುದು ಕಡಿಮೆ. ಹೀಗಾಗಲು ಬರಹಗಾರರ ಹಾಗೂ ಓದುಗರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಇತಿಮಿತಿಗಳೂ ಜ್ಞಾನಾನುಭವಗಳ ಅತಿಭೇದಗಳೂ ಬೇಡವಾದಷ್ಟು ಹೆಚ್ಚಾಗಿರುವುದೇ ಕಾರಣ. ಹೊಸಗನ್ನಡವಿಂದು ಶಾಸ್ತ್ರೀಯ ಪ್ರಬಂಧಶೈಲಿಯನ್ನು ಹೊಸದಾಗಿ ರೂಪಿಸಿಕೊಳ್ಳಬೇಕಾಗಿದೆ. ಏಕೆಂದರೆ ಸಂಸ್ಕೃತಕ್ಕಿದ್ದಂತೆ ಇದಕ್ಕೆ ಅಂಥ ಪರಂಪರೆಯಿಲ್ಲ. ಇದ್ದಷ್ಟು ಪರಂಪರೆಯನ್ನು ಉಳಿಸಿಕೊಂಡು ಹೋಗುವ ಪ್ರವೃತ್ತಿಯು ಇಂದಿನ ಹಲವಾರು ಲೇಖಕರಲ್ಲಿ ಕಂಡುಬಂದಿಲ್ಲ. "ಸಾಹಿತ್ಯ ಮತ್ತು ವಿಮರ್ಶೆ"ಯಲ್ಲಿ ಶ್ರೀ ಬೇಂದ್ರೆಯವರು ಇಂಥ ಒಂದು ಪ್ರವೃತ್ತಿಯನ್ನು ಎತ್ತಿ ಹೇಳಿದ್ದು ಈ ಕೆಳಗಿನಂತಿದೆ:

"ನಮ್ಮಲ್ಲಿ ಅರ್ಥಕ್ಕಿಂತ ಶಬ್ದದ ಬಗ್ಗೆ ಬಡಿದಾಟ ಹೆಚ್ಚು. ಸಾಹಿತ್ಯ ಶಾಸ್ತ್ರ ಚರ್ಚೆಯಲ್ಲಿ 'ಕಾಮೆಡಿ', 'ಟ್ರ್ಯಾಜೆಡಿ'ಗಳು ಎಬ್ಬಿಸಿದ ಗೊಂದಲವು ಈ ಬಗೆಯದು. ಯಾವುವೊಂದು ಭಾಷೆಯೊಳಗಿನ ಯಾವುದೇ ಸುಸಂಸ್ಕೃತ ಶಬ್ದದ ಜಾತಿವ್ಯಾಪ್ತಿ (Denotation) ಮತ್ತು ಗುಣವ್ಯಾಪ್ತಿ (Cennotation) ಗೆ ಪೂರ್ಣವಾಗಿ ಸರಿಹೋಗುವ ಶಬ್ದವು ಮತ್ತೊಂದು ಭಾಷೆಯಲ್ಲಿ ದೊರೆಯುವುದು ಅಸಾಧ್ಯವೇ ಆಗಿದೆ. ಉದಾಹರಣೆ— ಯೋಗ. ಭಕ್ತಿ, ರಸ. ಧರ್ಮ. Love, Romance, Lyric, Religion, ಹೀಗಿದ್ದೂ ನಾವು ಮರುಳರಂತೆ ಈ ಕೊಳ್ಳಿ ದೆವ್ವಗಳ ಬೆನ್ನುಹತ್ತಿ ಅಡ್ಡಹಾದಿಗೆ ಬಿದ್ದು ಒದ್ದಾಡುತ್ತೇವೆ. 'ಮನೆಯ ದೇವರು ಮಣ್ಣುಮುಕ್ಕುವಾಗ ಹೊರವೂರ ದೆವ್ವವು ಹೋಳಿಗೆ ಬೇಡುತ್ತಿತ್ತು' ಎಂಬಂತೆ ನಮ್ಮ ಸಾಹಿತ್ಯ ಶಾಸ್ತ್ರದೊಳಗಿನ ಶಬ್ದಗಳು ನಮ್ಮ ಅಜ್ಞಾನದ ಮೂಲಕ ಜುಗುತಿನ್ನುತ್ತಿರುವಾಗ ಪರಭಾಷೆಯೊಳಗಿನ ಶಬ್ದಗಳಿಗೆ ಸರಿಯಾದ ಪ್ರತಿಶಬ್ದಗಳು ನಮ್ಮಲ್ಲಿಲ್ಲವಲ್ಲ — ಎಂದು ನಮ್ಮ ಪೀಕಲಾಟ.

ಸುಕುಮಾರ ಪ್ರಯೋಗ ಮತ್ತು ಆವಿದ್ಧಪ್ರಯೋಗ ಎಂಬೀ ಪದಗಳು ನಮ್ಮ ಉಪೇಕ್ಷೆಗೀಡಾಗಿವೆ. . . . . . ಈ ಮಾತುಗಳ ಜೀರ್ಣೋದ್ಧಾರವಾಗಬಾರದೇಕೆ? ಈ ಶಬ್ದ ದೈವತಗಳಿಗೆ ನಮ್ಮ ನೂತನ ವಿಮರ್ಶೆಯು ಸಂಸ್ಕಾರವನ್ನು ಕೊಟ್ಟರೆ ನಮಗೆ ಈಗ ಬೇಕಾಗಿರುವ ಅರ್ಥವನ್ನೇ ಅವು ಕೊಡಲು ಸಮರ್ಥವಾಗಿವೆ."

ಪರಂಪರಾಗತವಾದ ಭಾಷೆ. ಸಾಹಿತ್ಯ ಮತ್ತು ಶಾಸ್ತ್ರಗಳ ಅಭ್ಯಾಸದ ಬಗ್ಗೆ ಅನಾಸ್ಥೆ ನಮ್ಮಲ್ಲಿ ಹೆಚ್ಚಾಗುತ್ತ ಬಂದುದೇ ಮೇಲೆ ಹೇಳಿದಂಥ ಫಜೀತಿಗೆ ಕಾರಣ. "ನೈಷಧಂ ವಿದ್ವದೌಷಧಂ" ಎಂಬ ಗಾದೆ ಹುಟ್ಟುವಷ್ಟರ ಮಟ್ಟಿನ ಕಠಿನ ಭಾಷಾಶೈಲಿ ಸಂಸ್ಕೃತದಲ್ಲೂ ಕನ್ನಡದಲ್ಲೂ ಹಿಂದೆ ಬೆಳೆದಿತ್ತೆಂಬುದು ನಿಜ. ಆದರೆ ಅಷ್ಟು ಕಠಿನವಲ್ಲದ. 'ಮೃದು ಮಧ್ಯಮತನು' ಉಳ್ಳ 'ಹಿತ - ಮಿತ - ಮೃದುವಚನ' ರೂಪದ. ಲಕ್ಷ್ಮೀಶ ಮತ್ತು ಕುಮಾರವ್ಯಾಸರ ನಡುಗನ್ನಡ ಶೈಲಿಯಲ್ಲಿ ಕಾಣುವ ಭಾಷಾ ಪ್ರೌಢಿಯ ಪರಿಚಯವೂ ಇಲ್ಲದ ನಮ್ಮ ಇಂದಿನ ಪದವೀಧರರನೇಕರು ತಮಗೆ ಹೇಗೋ ರೂಢಿಗೆ ಬಂದಿರುವ ಕನ್ನಡವಷ್ಟೇ ಹೊಸಗನ್ನಡ, ಅದಕ್ಕೂ ಹೆಚ್ಚು ಕನ್ನಡ ಜ್ಞಾನವು ಶುಷ್ಕಪಂಡಿತರಿಗಷ್ಟೇ ಮೀಸಲು — ಎಂದು ನಂಬಿ ಹಟದಿಂದ ಪ್ರಚಾರಮಾಡುತ್ತ ಬಂದಿರುವುದು ನಮ್ಮಲ್ಲಿ ಇನ್ನೂ ವಿಚಾರ ಸಾಹಿತ್ಯವು ಹರಿತವೂ ನಿಷ್ಕೃಷ್ಟವೂ ಸ್ಪಷ್ಟವೂ ಆದ ಶೈಲಿಯನ್ನು ರೂಪಿಸಿಕೊಳ್ಳಲಾರದೆ ಉಳಿಯಲು ಕಾರಣವಾಗಿದೆ.

ಪರಂಪರೆಯ ಸರಿಯಾದ ಜ್ಞಾನವಿಲ್ಲದೆ ಹೊಸ ಪ್ರಯೋಗಕ್ಕೆಳಸುವ ಯಾವ ಬರೆಹಗಾರನೂ ಸರಿಯಾದ ಸಾಹಿತ್ಯೋಪಾಸಕನೆನ್ನಿಸಲಾರ. ಹಳೆಯದರ ಅಂಧಾನುಕರಣ ಎಷ್ಟು ನಿಂದ್ಯವೋ ಪರಂಪರೆಯ ತಳಪಾಯವಿಲ್ಲದ ಹೊಸ ಗೃಹನಿರ್ಮಾಣವೂ ಅಷ್ಟೇ ಎಂಬುದನ್ನು ವಿಚಾರಪ್ರಧಾನವಾದ ಹೊಸ ಪ್ರಬಂಧಗಳನ್ನು ಬರೆವವರು ಅರಿತುಕೊಳ್ಳುವುದು ಪ್ರಬಂಧ ಶೈಲಿಯ ಹೊಸ ಪಾಕವ ಹದವನ್ನು ಗೊತ್ತುಮಾಡಲು ಅಗತ್ಯ. ವಾಚಕ ಮಹಾಶಯರಾದರೂ ತಮ್ಮ ಕನ್ನಡ ಜ್ಞಾನವನ್ನು ಬೆಳೆಸಿಕೊಳ್ಳುವುದು ವಿಚಾರಶಕ್ತಿಯ ಬೆಳವಣಿಗೆಗೆ ಅಗತ್ಯ ಎಂಬುದನ್ನು ಅರಿತು ಆಚರಿಸುತ್ತ ಹೋಗುವುದು ಅವಶ್ಯಕ. ಇಲ್ಲವಾದರೆ ಇಂದು ಎಲ್ಲೆಲ್ಲೂ ನಡೆಯುವ "ಸುಲಭ ಸಾಹಿತ್ಯ ಸರ್ಕಸ್ಸು" ಎಂದೂ ಜಗನ್ಮಾನ್ಯವಾಗಬಹುದಾದ ವಿಚಾರ ಪ್ರಧಾನ ಕನ್ನಡ ಪ್ರಬಂಧಗಳನ್ನು ಹಡೆಯಲಾರದು.

ವಿಚಾರಪ್ರಧಾನ ಪ್ರಬಂಧಗಳಲ್ಲಿ ಲಲಿತಶೈಲಿಯನ್ನೇ ಒಮ್ಮೆ ಬಳಸಿದರೂ ಅರ್ಥಹೀನತೆ, ಶಬ್ದಹೀನತೆ, ವ್ಯರ್ಥಾಲಾಪ. ಪುನರುಕ್ತಿ, ಸಂದಿಗ್ಧತೆ. ಅಪಕ್ರಮ.

ದೇಶ-ಕಾಲ-ಕಲಾ-ಲೋಕ-ನ್ಯಾಯಾಗಮಗಳ ವಿಪರ್ಯಸ್ತ ಮಂಡನ, ಪ್ರತಿಜ್ಞಾ ಹಾನಿ, ಹೇತ್ವಾಭಾಸ, ಪೂರ್ವಾಪರ ಸಮನ್ವಯದ ಅಭಾವ ಮುಂತಾದ ದೋಷ ಗಳು ಬರದಂತೆ ನೋಡಿಕೊಳ್ಳಬೇಕು. ಇಂಗ್ಲೀಷಿನಲ್ಲಿ ಓದಿದಾಗ ಸುಲಭವೆಂದು ತೋರುವ ಎಷ್ಟೋ ಉತ್ತಮವಾದ ವಿಚಾರ ಪ್ರಧಾನ ಪ್ರಬಂಧಗಳನ್ನು ಅಷ್ಟೇ ಖಚಿತವಾದ, ಅನ್ಯೂನ - ಅನತಿರಿಕ್ತವಾಕ್ಯಗಳುಳ್ಳ ಶೈಲಿಯಿಂದ ಕನ್ನಡಕ್ಕೆ ಭಾಷಾಂತರಿಸಿದರೆ ಪೆಡಸಾಗಿ ತೋರುವುದೇಕೆ? ಹಳ - ನಡುಗನ್ನಡಗಳಲ್ಲಿ ಪ್ರಾಥಮಿಕ ದರ್ಜೆಯ ತರ್ಕಶಾಸ್ತ್ರದ ಪಠ್ಯಗಳೂ ರಚಿತವಾಗಿ ರೂಢಿಗೆ ಬಾರದೆ ಇರುವುದರಿಂದ, ಈ ಕೊರತೆಯನ್ನಿಂದು ತುಂಬಿಕೊಳ್ಳಲೇ ಬೇಕಾಗಿದೆ. ಅದಕ್ಕೆ ಶಾಸ್ತ್ರಶುದ್ಧವಾಗಿ ಬರೆದ ಹೊಸಗನ್ನಡ ವಿಚಾರಪ್ರಧಾನ ಪ್ರಬಂಧವೊಂದರ ಅಪರಿಹಾರ್ಯವಾದ ಪೆಡುಸುತನವನ್ನು ಕಂಡು ರೇಗುವುದರ ಬದಲು ಓದುಗನು ತನ್ನ ಭಾಷಾಜ್ಞಾನ - ವಿಷಯಜ್ಞಾನಗಳ ಬೆಳವಣಿಗೆ ಅದರಿಂದಲೇ ಸಾಧ್ಯ ಎಂಬುದನ್ನು ಮನಗಂಡು ಆ ಶೈಲಿಯಲ್ಲಿ ತನ್ನ ಮನಸ್ಸಿಗೆ ಸಂಸ್ಕಾರ ಕೊಟ್ಟು ಕೊಳ್ಳಬೇಕು.

ರಸ-ಭಾವೋಚಿತವಾದ ಬಂಧಗಳ ಸಮನ್ವಿತವಾದ ವಿಶಿಷ್ಟ ಪದಸಂಘಟನಾ ಪದ್ಧತಿಯೇ ರೀತಿ ಅಥವಾ ಶೈಲಿ. 'ಯಥಾ ವಸ್ತು ತಥಾ ರೀತಿಃ' ಎಂಬಂತೆ ಪ್ರಬಂಧವೊಂದರ ವಸ್ತುವಿನ ಸ್ವರೂಪವು ಅದರ ಶೈಲಿಯ ಔಚಿತ್ಯವನ್ನು ನಿರ್ಣ ಯಿಸಲು ಪ್ರಧಾನ ಕಾರಣವಾಗುತ್ತದೆ.

ಹವೆಯನ್ನು ಹೇಗೆ ಶೀತ, ಉಷ್ಣ, ಸಮಶೀತೋಷ್ಣ ಎಂಬಂದಾಗಿ ವಿಂಗಡಿಸುವರೋ ಹಾಗೇ ಭಾವಗೀತವನ್ನು ಅಥವಾ ಭಾವಪ್ರಧಾನ ಪ್ರಬಂಧ ವನ್ನು ಮಧುರ, ಓಜಸ್ವಿ ಮತ್ತು ಪ್ರಸನ್ನ ಎಂಬುದಾಗಿ ಮೂರು ವಿಧವಾದ ಭಾವಭಂಗಿಗಳುಳ್ಳದ್ದನ್ನಾಗಿ ವಿಂಗಡಿಸಬಹುದು. ಸಾಹಿತ್ಯ ಪ್ರಬಂಧದ ಶರೀರ ಹಾಗೂ ಆತ್ಮಗಳ ಲೋಕಪ್ರಸಿದ್ಧ ಗುಣಗಳನ್ನು ಕೌಟಿಲ್ಯ ಕೂಡ ತನ್ನ ಅರ್ಥ ಶಾಸ್ತ್ರದಲ್ಲಿ ಅರ್ಥಕ್ರಮ, ಸಂಬಂಧ, ಪರಿಪೂರ್ಣತೆ, ಮಾಧುರ್ಯ, ಔದಾರ್ಯ ಮತ್ತು ಸ್ಪಷ್ಟತ್ವ ಎಂದು ಹೇಳಿದ್ದುಂಟು. ಇವುಗಳಲ್ಲಿ ಕೊನೆಯ ಮೂರು ಪ್ರಬಂಧದ ಪ್ರಧಾನವಾದ ಭಾವದ ಅಥವಾ ರಸದ ಗುಣಗಳು. ಪ್ರಬಂಧದ ಪ್ರಧಾನ ಭಾವವನ್ನು ಅಥವಾ ರಸವನ್ನು ಪ್ರಕಟಿಸಲು ತಕ್ಕ ಶಬ್ದಾರ್ಥರೂಪದ ಶರೀರ Form ಅದಕ್ಕಿರಬೇಕಾದುದು ಸಹಜ.

ಇಂದು ನಮ್ಮ ಕೈಗೆ ಸಿಗುವ ಉತ್ತಮ ಲಲಿತ ಪ್ರಬಂಧಗಳಲ್ಲಿ ಕೆಲವನ್ನಿಲ್ಲಿ ನೆನೆಯುವುದಾದರೆ, ಶ್ರೀಗಳಾದ ಪಡುಕೋಣೆ ರಮಾನಂದ ರಾವ್, ಎ. ಎನ್.

ಮೂರ್ತಿರಾವ್, ಪು. ತಿ. ನರಸಿಂಹಾಚಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದವರು ಕಣ್ಣೆದುರಾಗುತ್ತಾರೆ. ಅವರ ಲಲಿತಪ್ರಬಂಧಗಳೂ ಇತರ ಅನೇಕ ಲೇಖಕ ಮಿತ್ರರ ಲಘು ಪ್ರಬಂಧಗಳೂ ಸಾಕಷ್ಟು ಚೆನ್ನಾಗಿ ಬಂದಿವೆ. ಅವುಗಳ ವಾಚನವೂ ಇನ್ನಷ್ಟು ಜನಪ್ರಿಯವಾಗಬೇಕಾಗಿದೆ.

ಲಲಿತಪ್ರಬಂಧವು ಶುದ್ಧವಾದ ಸಾಹಿತ್ಯ. ರಸ-ಭಾವಾದಿಗಳ ಸೂತ್ರಕ್ಕೆ ಒಳಪಡುವ ಗದ್ಯಕಾವ್ಯ. ಆದುದರಿಂದ ಇವರ ಗದ್ಯಶೈಲಿಗೆ ಸ್ಫುಟವಾಗಿ ಮನೋಹರವಾದ ಗುಣಗಳಿರುವುದು ಸ್ವಾಭಾವಿಕ. ಓದುಗನ ಮನೋರಂಜನೆಯನ್ನು ಮಾಡುತ್ತಲೇ ಸಾಗುವುದು ಅದಕ್ಕೆ ನಿತ್ಯನಿಯಮ. ವಸ್ತುವಿವರಣೆಯಲ್ಲಿಯೂ ಅದು ಎಷ್ಟೋ ವೇಳೆ ಛಂದೋಬಂಧವಿಲ್ಲದ ಪದ್ಯವೆನಿಸಿದರೂ ಎನಿಸೀತು. 'ಈಚಲು ಮರದಡಿಯಲ್ಲಿ' ಎಂಬ ಪು. ತಿ. ನ. ಬರೆದಂತಹ (ಸ್ವಚ್ಛಂದ ಚಿಂತನವನ್ನು ಕಲ್ಪನಾವಿಲಾಸದೊಡನೆ ಚಿತ್ರಿಸುವ) ಪ್ರಬಂಧವು ತತ್ತ್ವ ಗಾಂಭೀರ್ಯವನ್ನಿಟ್ಟುಕೊಂಡೇ ಲಲಿತಗತಿಯಲ್ಲಿ ಸಾಗುವುದು ಗಮನಾರ್ಹವಾಗಿದೆ.

ಮೃದುಹಾಸ್ಯದೊಡನೆ ವಸ್ತುವಿನ್ಯಾಸಕ್ಕೆ ತೊಡಗುವ ಲಲಿತ ಪ್ರಬಂಧಗಳಲ್ಲಿ ಹರಟೆಗಳು ಗಣ್ಯ. ಕೆಲವು ಹರಟೆಗಳಲ್ಲಿ ಕುಟುಕುವ ಹಾಸ್ಯ ನಮನಮವೆ ಸಂಕಟವೂ ಸುಳಿಯಿತೇ. ಬಳ್ಳಾರಿಯ ಬೀಚಿ, ನಾಡಿಗೇರ ಗೋವಿಂದರಾಯ, ನಾ. ಕಸ್ತೂರಿ ಮುಂತಾದ ಹಾಸ್ಯಕಾರರ ಪ್ರಬಂಧಗಳ ಲಾಲಿತ್ಯವು ವಿಶೇಷರೀತಿಯದೆನ್ನಬಹುದು. ಶ್ರೀ ಎಸ್. ವಿ. ರಂಗಣ್ಣನವರು ಬರೆದ 'ವಿಡಂಬನ' ಎಂಬ ಕಿರುಹೊತ್ತಿಗೆಯು ವಿಚಾರಪ್ರಧಾನವಾಗಿರುವುದರ ಜೊತೆಗೇ ಲಾಲಿತ್ಯಗುಣದಿಂದ ಕೂಡಿದೆ. ಶ್ರೀಗಳಾದ ತಲಚೇರಿ ರಂಗರಾಯ, ವಿ. ಜಿ. ಭಟ್ಟ, ಆರ್. ಬಿ. ಕುಲಕರ್ಣಿ ಮುಂತಾದವರ ಪ್ರಬಂಧಗಳಲ್ಲಿ ಹಾಸ್ಯದ ಖಾರ ಹಾಗೂ ಚಮತ್ಕಾರಗಳೆರಡೂ ಕಂಡುಬರುತ್ತವೆ.

'ವಾಲ್ಮೀಕಿಯ ರಾಮ ಮತ್ತು ವ್ಯಾಸನ ಕೃಷ್ಣ' ಎಂದು ರಾ. ಭ. ಹಾಸಣಗಿಯವರು ಬರೆದ ಹಾಗೆ ಕಾವ್ಯಗಳಲ್ಲಿ ಬರುವ ಪಾತ್ರಗಳ ಸೌಂದರ್ಯವನ್ನು ಹೃದಯಂಗಮವಾಗಿ ಮಾಡಿಕೊಡುವ ವಿಮರ್ಶಾತ್ಮಕ ಪ್ರಬಂಧಗಳೂ ಇವೆ. 'ಕರ್ಣನ ಮೂರು ಚಿತ್ರಗಳು' ಎಂಬುದು ಅವುಗಳಗೊಂದು ವೈಶಿಷ್ಟ್ಯಪೂರ್ಣವಾದ ಉದಾಹರಣೆಯೆಂದು ಇಲ್ಲಿ ತೆಗೆದುಕೊಳ್ಳಬಹುದು. ಜೀವನಚರಿತ್ರೆಗೂ ಪಾತ್ರಚಿತ್ರಣಕ್ಕೂ ಸಾಧಾರಣ ಗುಣಗಳಿದ್ದರೂ ಜೀವನಚರಿತ್ರೆಯ ವ್ಯಾಪ್ತಿ ಹೆಚ್ಚಿನದು ಮತ್ತು ಒಮ್ಮೊಮ್ಮೆ ಅದು ವಿವರಣೆಯದರಷ್ಟು ವಿಮರ್ಶಾತ್ಮಕವಾಗಿ

ಇರದೆಯೂ ಇರಬಹುದು. ಆದರೆ ವ್ಯಕ್ತಿಚಿತ್ರಗಳನ್ನು ಕೊಡುವ ಪ್ರೌಢ ಪ್ರಬಂಧಗಳನ್ನು ಪಾತ್ರಚಿತ್ರಣದ ಪ್ರಬಂಧಗಳ ಪಂಕ್ತಿಗೆ ನಿರಾಯಾಸವಾಗಿ ಸೇರಿಸಬಹುದು.

ಇವುಗಳಲ್ಲದೆ ತಾತ್ವಿಕ, ನೈತಿಕ, ಸಾಮಾಜಿಕ ವಿಷಯಗಳನ್ನು ವಿಮರ್ಶಿಸುವ, ಚಿತ್ರಿಸುವ ಅಥವಾ ಬೋಧಿಸುವ ಪ್ರಬಂಧಗಳೂ ಹೊಸಗನ್ನಡದಲ್ಲಿ ಬಂದಿವೆ. ಶಿರಸಿಯಿಂದ ಹೊರಟ 'ಅಮರಪ್ರಭೆ' ಎಂಬ ಲೇಖನ ಸಂಗ್ರಹದಲ್ಲಿ ಇಂಥ ಪ್ರಬಂಧಗಳನ್ನು ಕಾಣಬಹುದು. 'ಏಕೀಕರಣದ ಕೈಪಿಡಿ' ಎಂಬ ಸಂಕಲನದಲ್ಲಿ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಬಂಧಗಳು ಪ್ರಕಟವಾಗಿವೆ.

ಇದುವರೆಗಿನ ಕನ್ನಡ ಗದ್ಯ ಪ್ರಬಂಧಗಳ ನೆಲೆ, ಬೆಲೆ, ತೂಕಗಳನ್ನು ಮಾಡುವುದಕ್ಕೆ ಎರಡು ಮಾರ್ಗಗಳಿವೆ: (1) ಜಗತ್ತಿನ ಅತ್ಯಂತ ಪ್ರೌಢಭಾಷೆಗಳಲ್ಲಿಯ ಅತ್ಯುತ್ತಮ ಪ್ರಬಂಧಗಳೊಡನೆ ಹೋಲಿಸಿ ನೋಡುವುದು. (2) ವಸ್ತುಭೇದವನ್ನು ಅವಲಂಬಿಸಿ ಕನ್ನಡ ಪ್ರಬಂಧಗಳನ್ನು ವರ್ಗೀಕರಿಸಿ, ಒಂದೊಂದು ವರ್ಗದಲ್ಲಿಯ ಪ್ರಬಂಧಗಳನ್ನು ಆ ವರ್ಗದಲ್ಲಿಯೇ ಪರಸ್ಪರ ಹೋಲಿಸಿ ನೋಡುವುದು. ಹೀಗೆ ಹೋಲಿಸುವಾಗ ಭಾಷಾಭೇದ ಮತ್ತು ವಿಷಯ ನಿರ್ದಿಷ್ಟ ಶೈಲಿ ಭೇದಗಳನ್ನು ಅವು ಆಯಾ ವೈಶಿಷ್ಟ್ಯದ ಔಚಿತ್ಯವನ್ನು ಪ್ರಾಥಮಿಕ ಮಟ್ಟವನ್ನಾಗಿ ತೆಗೆದುಕೊಳ್ಳಬಹುದು. ಅನಂತರ ಅವುಗಳ ಪ್ರಬಂಧ ಗುಣಗಳಾದ ಕಥನಕೌಶಲ, ವರ್ಣನಾಚಾತುರ್ಯ ವಿವರಣಪ್ರೌಢಿ ಮತ್ತು ವಿಚಾರಕ್ರಮದ ಶುದ್ಧತೆಗಳ ದೃಷ್ಟಿಯಿಂದ ಒಂದನ್ನೊಂದು (ತಮ್ಮ ತಮ್ಮ ಸಹಜ ವೈಶಿಷ್ಟ್ಯದೊಡನೆ ಉಳಿದೇ) ಎಷ್ಟರ ಮಟ್ಟಿಗೆ ಮೀರುವುವು? ಎಂಬುದನ್ನು ಅಳೆಯುವುದು ಯೋಗ್ಯವಾದೀತು.

ಮೊದಲನೆಯ ಮಾರ್ಗವನ್ನಯಮಾಡಿ ಒಂದು ಆಂಗ್ಲ ಮತ್ತು ಒಂದು ಕನ್ನಡ ಪ್ರಬಂಧವನ್ನು ಹೋಲಿಸ ಹೊರಟೆವೆಂದುಕೊಳ್ಳೋಣ. ಆಗ ತೆಗೆದು ಕೊಳ್ಳುವ ಆಂಗ್ಲ ಹಾಗೂ ಕನ್ನಡ ಪ್ರಬಂಧಗಳ ವಿಷಯ ಜಾತಿ, ಅದರ ಪ್ರತಿಪಾದನೆಯ ಲಘುತ್ವ ಅಥವಾ ಗುರುತ್ವ ಮತ್ತು ವಿಷಯ ಸಹಜವಾದ ಶೈಲಿಭೇದ— ಇವುಗಳಲ್ಲಿ ಮೂಲತಃ ಸಾಮ್ಯವಿರುವಂತೆ ಆಯ್ದುಕೊಳ್ಳಬೇಕು. ಆ ಮೇಲೆ ಆಂಗ್ಲಭಾಷಾ ಸಹಜವಾದ ಪ್ರಯೋಗಶುದ್ಧಿಯ ಪ್ರಾಥಮಿಕ ಮಟ್ಟದ ಸಾಮ್ಯವನ್ನೂ ನೋಡಿ, ಹೋಲಿಕೆಗೆ ತೆಗೆದುಕೊಳ್ಳಬಹುದೇ ? ಎಂದು ವಿಚಾರಿಸಬೇಕು. ಇಷ್ಟಾದ ಮೇಲೆ — ಅಂದರೆ ಈ ಎರಡುಬಗೆಯ ಸಾಮ್ಯವಿರುವ ಹಾಗೆ ನೋಡಿದ ಬಳಿಕ – ಭಿನ್ನ ಭಾಷೆಗಳ ಎರಡು ಪ್ರಬಂಧಗಳನ್ನು ಉಕ್ತ ಪ್ರಬಂಧ ಗುಣ ಅಥವಾ

ಸಾಹಿತ್ಯಸೌಂದರ್ಯ ಇಲ್ಲವೆ ಶೈಲಿರುಚಿ ಎಂಬ ಮಾನದಂಡದಿಂದ ಅಳೆದು, ಎರಡರಲ್ಲಿ ಯಾವುದು ಹೆಚ್ಚು ಉತ್ತಮ ಎಂಬುದನ್ನು ಅಂದಾಜಿಸುವುದು ನ್ಯಾಯವಾಗುತ್ತದೆ. ಇಂಥ ನಿರ್ಣಯಕ್ಕೆ ಕುಳಿತುಕೊಳ್ಳುವ ಕರ್ತನು ಪ್ರಥಮತಃ ಸಾಹಿತ್ಯಸಾಮಾನ್ಯವಾದ ಗುಣಗಳ ವೈವಿಧ್ಯವನ್ನೂ ತಾರತಮ್ಯವನ್ನೂ ಅದರ ಆತ್ಮವನ್ನೂ ಆಳವಾಗಿ ಅಳವಡಿಸಿಕೊಂಡವನಾಗಿರಬೇಕು. ಗಣ್ಯ ಭಾಷಾಸಾಹಿತ್ಯ ಕೃತಿಗಳಲ್ಲಿಯ ಉತ್ತಮ, ಮಧ್ಯಮ, ಅಧಮ ಎಂಬ ವರ್ಗೀಕರಣದ ಮೂಲ ಸೂತ್ರವನ್ನು ಅನುಭವತಃ ಕಂಡುಕೊಂಡವನಾಗಿರಬೇಕು.

ಎರಡನೆಯ ಮಾರ್ಗದನ್ವಯ ಮಾಡುವಾಗಲಾದರೂ ರಸಾತ್ಮಕ ಅಥವಾ ರಸಪ್ರಧಾನ ಪ್ರಬಂಧವನ್ನು ರಸಪ್ರಧಾನವಾದ ಪ್ರಬಂಧದೊಡನೆಯೂ ವಿಚಾರ ಪ್ರಧಾನವಾದ ಪ್ರಬಂಧವನ್ನು ಅಥವಾ ವೈಜ್ಞಾನಿಕ ಇಲ್ಲವೆ ತಾತ್ವಿಕ ನಿರ್ಣಯ ವನ್ನು ಉದ್ದೇಶವನ್ನಾಗಿ ಇಟ್ಟುಕೊಂಡ "ಪ್ರಬಂಧ"ವನ್ನು ಆ ಜಾತಿಯ ಇನ್ನೊಂದರೊಡನೆಯೂ ಹೋಲಿಸಬೇಕು. ಇಲ್ಲವಾದರೆ ವಿಪರೀತ, ವಿಸಂಗತ, ವಿಕಟ ಎನಿಸುವ ಮೂಲ್ಯಮಾಪನದೋಷ ಉಂಟಾಗುತ್ತದೆ. ಕಥನಪ್ರಧಾನ, ವರ್ಣನಾಪ್ರಧಾನ, ವಿವರಣಪ್ರಧಾನ, ವಿವೇಚನಾಪ್ರಧಾನ ಎಂಬೀ ಜಾತಿಗಳಲ್ಲಿ ಆಯಾ ಜಾತಿಯ ಪ್ರಬಂಧಗಳನ್ನೇ ಹೋಲಿಕೆಗಾಗಿ, ತುಲನೆಗಾಗಿ ಆರಿಸಿಕೊಳ್ಳ ಬೇಕು. ಮೊದಲಿನೆರಡು ಜಾತಿಗಳಲ್ಲಿ ಸಾಹಿತ್ಯ ಸೌಂದರ್ಯವು ತುಲನೀಯ ವಾದರೆ, ಎರಡನೆಯ ಎರಡು ಜಾತಿಗಳಲ್ಲಿ ವಿಚಾರದ ಕ್ರಮಬದ್ಧತೆ, ಸ್ಪಷ್ಟತೆ ಮತ್ತು ಸಂದರ್ಭಸಹಜವಾದ ತಾತ್ವಿಕ ನ್ಯಾಯವಂತಿಕೆ—ಎಂಬೀ ಗುಣಗಳು ತುಲನೀಯವಾಗುತ್ತವೆ. ಮೊದಲನೆಯದು ಸೌಂದರ್ಯತರ್ಕದಿಂದ ಬದ್ಧ ವಾದರೆ, ಎರಡನೆಯ ವರ್ಗದ್ವಯವು ತರ್ಕಸೌಂದರ್ಯಬದ್ಧ—ವಸ್ತುನಿಷ್ಠ, ಪ್ರಮಾಣಸಿದ್ಧ, ನಿರ್ಣಯಮುಖವಾದ, ವಿವೇಚನಾತ್ಮಕ ಎನಿಸುವ ವಿವರಣ— ಕೌಶಲಪ್ರಧಾನ. ಈ ಪ್ರಧಾನ್ಯವನ್ನು ಅಲ್ಲಗಳೆದು ಸಂಮಿಶ್ರವಾಗಿ ಹರಿದುಬಂದ ಪ್ರಬಂಧವರ್ಗವೂ ಸಿಕ್ಕಬಹುದು. ಅಂಥಲ್ಲಿ ಸೂಕ್ಷ್ಮ ಪರಿಶೀಲನೆಯಿಂದ ಆ ಜಾತಿಯ ಪ್ರಬಂಧದ್ವಯದ ಉಭಯೋದ್ದೇಶ—ಸಾಧನೆಯನ್ನೇ ತುಲನೆಮಾಡ ಬೇಕು. ಎರಡೂ ಗುರಿಗಳನ್ನು ಅಂಥ ಒಂದು ಜೊತೆಯು ಸಮಸಾಮರ್ಥ್ಯ ದಿಂದ ಸಾಧಿಸಿದೆಯೋ ಅಥವಾ ಅದರಲ್ಲಿ ಒಂದು ಗುರಿಗಾಗಿ ಇನ್ನೊಂದನ್ನು ಅಂಶತಃ ಅಥವಾ ಪೂರ್ಣವಾಗಿ ಬಲಿಕೊಟ್ಟಿದೆಯೋ ? ಎಂಬುದನು ಗೊತ್ತು ಮಾಡಬಹುದು. ಈ ಪರಿಶೀಲನೆಯಲ್ಲಿ ಉದ್ದೇಶಗಳೆರಡನ್ನೂ ಸಮಸಾಮರ್ಥ್ಯ ದಿಂದ ಸಾಧಿಸಿದ ಪ್ರಬಂಧವು ಉತ್ತಮವೆಂದೆನಿಸುತ್ತದೆ.

ಕನ್ನಡ ಪ್ರಬಂಧಕಾರರು ಮುಟ್ಟಿದ ವಸ್ತುಗಳಿಗಿಂತ ಮುಟ್ಟದಿರುವ ವಸ್ತು ವೈವಿಧ್ಯಗಳು ಹೆಚ್ಚಾಗಲು ಕನ್ನಡಿಗರ ಜೀವನದಲ್ಲಿ ಅಂದಿನಿಂದ ಇಂದಿನವರೆಗೂ ಕನ್ನಡೇತರ ಭಾಷೆಗಳು ಗಣ್ಯತೆಯನ್ನು ಪಡೆದದ್ದು ಪ್ರಧಾನ ಕಾರಣ. ಹಿಂದಿನ ನಾಗರಿಕತೆಯಲ್ಲಿ ಸಂಸ್ಕೃತಜ್ಞನಿಗೇ ರಾಜಕೀಯ - ಸಾಮಾಜಿಕ ವಲಯಗಳಲ್ಲಿ ಅಗ್ರಸ್ಥಾನವಿತ್ತು. ಈಗ ಆಂಗ್ಲಜ್ಞನಿಗೇ ಉಕ್ತವೃತ್ತಗಳಲ್ಲಿ ಹೆಚ್ಚಿನ ಮನ್ನಣೆ ಇದೆ. "ಕನ್ನಡದ ಮನೆಯಲ್ಲಿ ಕನ್ನಡತಿ ಯಜಮಾನಿ, ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ" ಎಂದು ಪ್ರಸ್ತುತ ಭಾಷಣಕಾರಣ (ಹೈದರಾಬಾದಿನ) 27ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉತ್ತರಾವಧಿಯಲ್ಲಿ ಉದ್ಗರಿಸಿದು ಇನ್ನೂ ಆಚರಣೆಯ ಹಾದಿಯನ್ನು ಕಾಯುತ್ತದೆ. ಸರಕಾರ, ದೇವ, ಧರ್ಮ, ಉಚ್ಚ ಶಿಕ್ಷಣ, ವಿಜ್ಞಾನಗಳಿಗೆ ಸಂಬಂಧಿಸಿದ ವ್ಯವಹಾರಗಳು ಕನ್ನಡೇತರ ಭಾಷೆಯಲ್ಲೇ ಸಾಗುವುದು ಅನಿವಾರ್ಯವೆನಿಸುವುದಾದರೆ ಕನ್ನಡ ಪ್ರಬಂಧಕಾರ ಕನ್ನಡದಲ್ಲಿ ಮುಟ್ಟದೆ ಬಿಡುವ ವಸ್ತುಗಳ ಸಂಖ್ಯೆ ಎಂದೂ ಕಡಿಮೆಯಾಗದು. ಜೀವನದ ಪ್ರವಾಹದ ಮೇಲೆಯೇ ಸಾಹಿತ್ಯನೌಕೆ ಸಾಗಬೇಕಾಗಿರುವುದರಿಂದ ಅಲ್ಲಿ ಸಲುವ ಮರ್ಯಾದೆ ಇಲ್ಲಿಯೂ ಸಲ್ಲಬೇಕಾಗುತ್ತದೆ.

ಕನ್ನಡಿಗನ ಜೀವನದಲ್ಲಿ ಉಚ್ಚ ಮಟ್ಟದ ಶೈಕ್ಷಣಿಕ, ನ್ಯಾಯಾಂಗೀನ, ಕಾರ್ಯಾಂಗೀಣ ಮತ್ತು ಶಾಸನಾಂಗೀನ ವ್ಯವಹಾರಗಳೆಲ್ಲವೂ ಕನ್ನಡವಾಗದೆ, ಆತನ ಉಚ್ಚ ವಿಚಾರ ಹಾಗೂ ಉನ್ನತ ಭಾವನೆಗಳ ಪ್ರಕಟನಮಾಧ್ಯಮವು ಕನ್ನಡವಾಗದು. ಕನ್ನಡ ಪ್ರಬಂಧಕಾರನೂ ಮೊದಲು ಎಲ್ಲರಂತೆಯೇ ಒಬ್ಬ ಕನ್ನಡ ಪ್ರಜೆ, ಕನ್ನಡ ಕೌಟುಂಬಿಕ, ಕನ್ನಡರಾಜ್ಯದ ಉದ್ಯೋಗ - ವ್ಯವಹಾರಗಳಲ್ಲಿ ನಿಷ್ಠ. ಆದುದರಿಂದ ಆತನ ಜೀವನದ ಈ ಭಾಗವನ್ನು ಕನ್ನಡವು ಆಮೂಲಾಗ್ರ ವಾಗಿ ಆಕ್ರಮಿಸದೆ ಅವನ ದೃಷ್ಟಿ ಎಂದೂ ಸ್ವಾಭಾವಿಕವಾಗಿ ಕನ್ನಡಪ್ರಬಂಧದ ವಸ್ತುವೈವಿಧ್ಯವನ್ನು ಹೆಚ್ಚಿಸುವಲ್ಲಿ ವಿಸ್ತಾರವಾಗದು. ಕನ್ನಡದಲ್ಲಿ ವಿವಿಧ ವಿಚಾರ ಅಥವಾ ವಿಚಿತ್ರ ರಸದರ್ಶನಗಳನ್ನು ಮಾಡಿಕೊಳ್ಳಬೇಕೆಂಬ ವಾಚಕ ವರ್ಗವಿಲ್ಲವೆಂಬುದನ್ನರಿತ ಯಾವ ಪ್ರಬಂಧಕಾರನೂ, ಕೇವಲ ಕಸರತ್ತಿಗಾಗಿ, ಯಾರೂ ಈ ವರೆಗೆ ತೆಗೆದುಕೊಂಡು ಶಾಸ್ತ್ರೀಯ ವಿವರಗಳೊಡನೆ ಸಲಕ್ಷಣವಾಗಿ ಬರೆಯದಿರುವ ಪ್ರಬಂಧಗಳನ್ನು ಬರೆಯಲು ಯೋಚಿಸನು, ಯೋಜಿಸನು. ಇದು ಸಾಮಾನ್ಯ ನ್ಯಾಯ. ವಿಶಿಷ್ಟ ಅನುಕೂಲ, ಬುದ್ಧಿಮತ್ತೆ, ಸ್ಫೂರ್ತಿ, ಭಾಷಾ ಪ್ರೇಮಗಳಿಂದ ಕೂಡಿದ ಕನ್ನಡ ಪ್ರಬಂಧಕಾರರ ಮಾತು ಬೇರೆ, ಅಂಥವರು ತೀರಾ ವಿರಳ. ವ್ಯಾವಹಾರಿಕ ಜೀವನದ ಮಾನಸಿಕ ಸಂಸ್ಕಾರದ ಕನ್ನಡೇತರ

ಅಂಶದ ಲಂಕೆಯನ್ನು ಸುಟ್ಟು, ಅಲ್ಲಿರುವ ಸುಪ್ರಬಂಧ ರೂಪದ ಸೀತೆಯನ್ನು ಜಗತ್ತಿಗೆ ಎತ್ತಿತೋರಿಸುವ ಸಾಹಸವನ್ನು ಒಬ್ಬಿಬ್ಬರು ಎಲ್ಲಾದರೂ ಹೇಗಾದರೂ ಮಾಡುವುದು ಯಾವಾಗಲಾದರೂ ಸಂಭವ—ಅಷ್ಟೆ. ಆದುದರಿಂದ ಕನ್ನಡ ಪ್ರಬಂಧಕಾರನಿಂದು ತನ್ನ ಕನ್ನಡ ಪ್ರಜಾಧರ್ಮದ ಬಲದಿಂದ ಕನ್ನಡ ನಾಡಿನ ಎಲ್ಲಾ ವ್ಯವಹಾರವೂ ಕನ್ನಡದಲ್ಲೇ ಆಗುವಂತೆ ಪ್ರಯತ್ನಿಸಿ ಸಿದ್ಧಿ ಹೊಂದಬೇಕು. ಇಲ್ಲವಾದರೆ ಮಸೀದೆಯಲ್ಲಿ ವಾಸಮಾಡುತ್ತಾ ಗೋಕುಲಾಷ್ಟಮಿಯ ವ್ರತವನ್ನು ಮಾಡಲಾಗಲಿಲ್ಲವಲ್ಲಾ ಎಂದು ಚಿಂತಿಸುವ ಹಿಂದು ಮತೀಯನಂತಾದೀತು! ಆವರಣ ಸಂಪೂರ್ಣವಾಗಿ ಕನ್ನಡವಾದಾಗಲೇ ಅನ್ಯತ ಜೀವಿಯ ಮನದ ಎಲ್ಲ ಸ್ತರಗಳ ಕ್ರಿಯೆಗಳೂ ಕನ್ನಡ ಮಾಧ್ಯಮವನ್ನು ಬಳಸಿಯಾವು. ಅಲ್ಲಿಯ ವರೆಗೆ ಸಾಮಾನ್ಯ ಕನ್ನಡ ಪ್ರಬಂಧಕಾರನ ದೃಷ್ಟಿ ವಿಸ್ತಾರವಾಗುವ ವೇಗವು ಅತಿ ಮಂದವಾಗಿಯೇ ಉಳಿದೀತು!

ಒಳ್ಳೆಯ ಅಥವಾ ಉತ್ತಮ ಪ್ರಬಂಧ ಎಂದರೆ ಏನು? ಉದ್ದೇಶವೇ ವಿಮರ್ಶೆಯ ಮಾನದಂಡವಾದುದರಿಂದ-ರಸವು ಮತ್ತು ತರ್ಕಶುದ್ಧ, ಶ್ರುತಿಶುದ್ಧ ವಿಜ್ಞಾನಶುದ್ಧ ಅಥವಾ ಅನುಭವಶುದ್ಧ ಎನಿಸುವ ನಿರ್ಣಯವು ಉದ್ದೇಶವಾಗಿರುವಾಗ, ಆಯಾ ಉದ್ದೇಶವನ್ನು ಹೃದಯಂಗಮವಾಗಿ ಮತ್ತು ಬುದ್ಧಿಂಗಮವಾಗಿ ಸಾಧಿಸುವ ಪ್ರತಿಪಾದನಾ ರಚನೆ ಯಾವುದರಲ್ಲಿದೆಯೋ ಅದು ಉತ್ತಮ ಪ್ರಬಂಧ ಎನ್ನಬೇಕು. ಭಾವದ ಅಥವಾ ರಸದ ಪ್ರತಿಪಾದನೆಯಲ್ಲಿ ಇಡೀ ಪ್ರಬಂಧವು ತೋರಿಸುವ ರಸಧ್ವನಿಶಕ್ತಿಯೇ ಉತ್ತಮಿಕೆಯ ಕುರುಹು. ವಿಜ್ಞಾನ, ತತ್ವ, ನೀತಿ, ನಂಬಿಕೆಗಳೆಂಬ ವಿಚಾರಪ್ರಕಾರಗಳ ಪ್ರತಿಪಾದನೆಯಲ್ಲಿ ತರ್ಕಕ್ರಮದ ಸ್ಫುಟವಾದ ವಾಚಕಶಕ್ತಿಯೇ ಉತ್ತಮಿಕೆಯ ಗುರುತು. ಪದ್ಯದಂತೆ ಗದ್ಯ ಪ್ರಬಂಧದಲ್ಲಿ ಹೆಜ್ಜೆ ಹೆಜ್ಜೆಗೆ ರಸಭಾವಧ್ವನಿಶಕ್ತಿ ಕಾಣದೆಂಬುದು ನಿಜವಾದರೂ ಅದು ಪ್ರಧಾನತಃ ರಸಾತ್ಮಕವೆನಿಸಿದ್ದೇ ಆದರೆ, ತನ್ನ ಇಡೀ ಸ್ವರೂಪದ ಮೂಲಕ ಅದು ಉದ್ದೇಶಿಸಿದ ಮಹಾಭಾವನೆಗೆ ಅಥವಾ ರಸಕ್ಕೆ ಧ್ವನಿಸಾಧನವೇ ಆಗುತ್ತದೆ. ವಿಚಾರಾತ್ಮಕ ಪ್ರಬಂಧಗಳಿಗೆಲ್ಲಾ ಪರಮೋಚ್ಚ ನ್ಯಾಯಾಲಯದ ವಿವರಪೂರ್ವಕವಾದ ತೀರ್ಪಿನ ರಚನೆಯೇ ಪರಮಾದರ್ಶ—ಅಲ್ಲಿ ಸಲ್ಲುವುದು ಇಲ್ಲಿಯೂ ಸಲ್ಲುತ್ತದೆ. ಏಕೆಂದರೆ ಕೋರ್ಟಿನ ವ್ಯವಹಾರವು ಜೀವನಾವಶ್ಯಕ ತರ್ಕವುಳ್ಳದ್ದಲ್ಲದೆ, ಶುದ್ಧವಾದ ಅಥವಾ ಕೇವಲ ಕಲ್ಪನಾನಿಷ್ಠವಾದ ಇಲ್ಲವೆ ವಾಸ್ತವಿಕ ಜೀವನದ ಅನುಭವ ಸ್ತರಗಳನ್ನು ಕಡೆಗಣಿಸುವ ತರ್ಕವನ್ನು ಪುರಸ್ಕರಿಸುವುದಿಲ್ಲ. ಈ ನಿದರ್ಶನವನ್ನು ಬಿಟ್ಟರೆ—ಒಂದೇ, ತರ್ಕಶಾಸ್ತ್ರದ ಪಠ್ಯಪುಸ್ತಕವನ್ನು ಅಥವಾ

ತತ್ವಶಾಸ್ತ್ರೀಯವಾದ ಪದ್ಧತಿಯನ್ನು ಮಾತ್ರ ಅತ್ಯುತ್ತಮ ವಿಚಾರಪ್ರಧಾನಪ್ರಬಂಧ ಎನ್ನಬೇಕಾದೀತು; ಇಲ್ಲವೇ ಬಾಲಭಾಷಿತಗಳ ಮಾನಸ ಶಾಸ್ತ್ರೀಯ ಅನುಕ್ರಮಗಳಿಂದ ಕೂಡಿದ ವಾಕ್ಯಸಮುದಾಯವನ್ನೂ ವಿಚಾರಪ್ರಧಾನ ಪ್ರಬಂಧವೆನ್ನಬೇಕಾದೀತು. ಬಾಲಪ್ರಬಂಧವು ರಸಾತ್ಮಕ ಪ್ರಬಂಧವರ್ಗಕ್ಕೆ ಸೇರುತ್ತದೆ — ವಿಚಾರ ಪ್ರಧಾನವಾದ ಪ್ರಬಂಧವರ್ಗಕ್ಕಲ್ಲ. ಬುಡವಿಲ್ಲದ ಕಲ್ಪನೆಗಳಿಗೆ ವಿಚಾರಪ್ರಪಂಚದಲ್ಲಿ ಸ್ಥಳವಿಲ್ಲ! ಅವು ಭಾವಭೃಂಗದ ಬೆನ್ನನ್ನೇರಬಲ್ಲವಲ್ಲದೆ ತರ್ಕಾಶ್ವದ ಬೆನ್ನನ್ನಲ್ಲ.

ವಿಚಾರದ ಪ್ರಾಗಲ್ಭ್ಯವು ಕನ್ನಡದ ಗದ್ಯಶೈಲಿಯ ಕಾಠಿನ್ಯವನ್ನು ಹೆಚ್ಚಿಸಿದ್ದಕ್ಕೆ ಆದಿಯಿಂದ ಈ ವರೆಗೆ ಅನೇಕ ನಿದರ್ಶನಗಳು ಸಿಕ್ಕಿವೆ. ಹೀಗಾಗುವುದು ಎಲ್ಲ ಗಣ್ಯಭಾಷೆಗಳ ಸುದೀರ್ಘ ಬೆಳವಣಿಗೆಯಲ್ಲೂ ಸಹಜವಾಗಿರುತ್ತದೆ. ವಿಚಾರದ ಸುಲಭ ಸಂಚಾರಕ್ಕೆಂದು ವಿಚಾರಿಯು ಸಣ್ಣ - ದೊಡ್ಡ ಪಾರಿಭಾಷಿಕಗಳನ್ನು ಅವಲಂಬಿಸುವುದು, ಸಂಕ್ಷೇಪಿಸುವುದಕ್ಕೋಸ್ಕರ ಏಕಪದ ಪ್ರಯೋಗವನ್ನು ಹಿಡಿದು ಹೋಗಿ ವಿವರಣ - ವರ್ಣನಗಳನ್ನು ಕಡಿಮೆಮಾಡುವುದು, ವಿಚಾರ ಧಾರೆಯ ತೀವ್ರರಭಸವನ್ನು ಹಾಗೇ ಪ್ರಕಟಿಸಲೆದ್ದು ಸಾಮಾನ್ಯ, ಗೃಹೀತ, ಸುಲಭೋಹ್ಯ, ಎನಿಸುವ ಅಂಶಗಳನ್ನು ಬಿಡುವುದು ವಿಚಾರ ಪ್ರಬಂಧಗಳ ಪ್ರೌಢವಶೆಯಲ್ಲಿ ಕಂಡುಬರುವ ಸಹಜ ಗುಣಗಳು. ಇವುಗಳನ್ನು ದೋಷಗಳೆಂದು ಗಣಿಸುವ ಮಟ್ಟದ ವಾಚಕರು ತಮಗೆ ಬೇಕಾದ ಶಿಥಿಲ ಶೈಲಿಯ, ಸುವಿಸ್ತಾರವಾದ ವಿವರಣ - ಕಥನ - ವರ್ಣನ - ವಿವೇಚನೆಗಳಿಂದ ತುಂಬಿ ಹರಿಯುವ ಪ್ರಬಂಧವೇ ಉತ್ತಮವೆಂಬುದು ಸಹಜ. ಪ್ರಗಲ್ಭ ವಿಚಾರಗಳ ನಿವೇದನೆಯು ಅತಿ ಶಿಥಿಲ ಅಥವಾ ಅತಿ ಕಠಿನ ಎಂಬೆರಡು ಧ್ರುವಗಳ ನಡುವೆ ನಡೆದರೆ ಪಂಡಿತ-ಪಾಮರ ಉಭಯ ಗ್ರಾಹ್ಯವಾದೀತು. ಆದರೆ ಈ ಎರಡು ಧ್ರುವಗಳ ನಡುವಣ ಉಷ್ಣಕಟ್ಟಿಬಂಧ ಅಥವಾ ಉಷ್ಣವಲಯ ಎಂಬುದಾದರೂ ಬಹು ವಿಸ್ತಾರವಾಗಿರುವುದರಿಂದ ಅದರಲ್ಲಿಯ ಯಾವ ನಿತ್ಯಾರಣ್ಯ ಹೆಚ್ಚು ಸುಂದರ? ಎಂದು ನಿರ್ಧರಿಸುವುದು ಕಷ್ಟವೇ! ಅಗತ್ಯವಾಗಿ ನಿವಾರ್ಯವಾದ ಕಾಠಿನ್ಯದಿಂದ ಕೂಡಿದ ಇತ್ತೀಚಿನ ವಿಚಾರಪ್ರಧಾನ ಲೇಖನಗಳನ್ನು ನೋಡಬೇಕಾದರೆ, ಈಗ ತಯಾರಾಗುತ್ತಿರುವ ಕನ್ನಡ ವಿಶ್ವಕೋಶದಲ್ಲಿಯ ಮೂರು ಸಂಪುಟದಲ್ಲಿರುವ ವಿವರಣವಿಲ್ಲದ ಅಸಂಖ್ಯ ಅಸಾಮಾನ್ಯ ಪಾರಿ-ಭಾಷಿಕ ಪದಗಳಿಂದೊಡಗೂಡಿದ ವಿಜ್ಞಾನ ವಿಷಯ ಪ್ರಪಂಚವನ್ನು ಹೊಗಬೇಕು. ಏಕೆಂದರೆ, ಆ ಲೇಖನಗಳು ವಿಶೇಷಜ್ಞನಿಗೆ ಅನಗತ್ಯ; ಸಾಮಾನ್ಯಜ್ಞನಿಗೆ ಅಗಮ್ಯ ಎನಿಸಿವೆ. ಇಂಥ ಅನ್ಯೋನ್ಯಾಶ್ರಯಕ್ಕೆಡೆಗೊಡದೆ ಬರೆದ ಪ್ರಗಲ್ಭವಾದ ಕನ್ನಡ ವಿಚಾರ ಸಾಹಿತ್ಯಕ್ಕೆ

ಕೆಲವೇ ವಿಷಯುಗಳ ಮೇಲೆ ಬರೆದ ಪ್ರಬಂಧಗಳನ್ನು ಉದಾಹರಿಸಬಹುದು. ಆದರೆ ವಿಷಯವ್ಯಾಪ್ತಿಯು ಆಂಗ್ಲಸಾಹಿತ್ಯದಲ್ಲಿರುವುದಕ್ಕಿಂತ ಬಹಳ ಕಡಿಮೆಯಾಗಿದೆ ಎಂಬುದು ನಿಜ. ಆಳವಾದ ಅರ್ಥಗಳುಳ್ಳ ಪದಗಳ ಬಳಕೆಯನ್ನೂ ಅನೇಕ ಲೇಖಕರಿಂದು ಪದಕಾಠಿನ್ಯವೆಂದು ಪ್ರಚಾರ ಮಾಡುತ್ತಿರುವುದು ವಿಚಾರ ಪ್ರಾಗಲ್ಭ್ಯವು ಕನ್ನಡದಲ್ಲಿ ಬೆಳೆಯಲು ವಿಘ್ನವಾಗಿದೆ. ಕನ್ನಡದಲ್ಲಿ ಅತಿಯಾಗಿ ಸಂಸ್ಕೃತ ಬೆರೆತರೂ ಕಠಿನ, ಅತಿಯಾಗಿ ಹಳಗನ್ನಡ ಬೆರೆತರೂ ಕಠಿನ. ಅತಿಯಾಗಿ ಇಂಗ್ಲಿಷ್ ಬೆರೆತರೂ ಕಠಿನ – ಎಂಬುದು ಇಂದಿನ ನಿಜವಾದ ಸಮಸ್ಯೆಯಾಗಿದೆ. ಆದರೆ ಅತಿಯು ಸರ್ವಥಾ ತ್ಯಾಜ್ಯವಾದರೂ ಸುಲಭೋಚ್ಚಾರ್ಯವಾದ ಸಂಸ್ಕೃತ ಪದಗಳೇ ಪ್ರಗಲ್ಭ ವಿಚಾರಕ್ಕೆ ಇಂದಿನ ಕನ್ನಡದಲ್ಲಿ ಅತ್ಯಂತ ನಿರ್ದಿಷ್ಟತೆ, ನಿಷ್ಕೃಷ್ಟತೆ, ಸ್ಪಷ್ಟತೆ, ಸಂಕ್ಷಿಪ್ತತೆ, ಬಹುಜನಗ್ರಾಹ್ಯತೆ, ಸ್ವಾಭಾವಿಕತೆ ಎಂಬ ಶೈಲಿಗುಣವೃದ್ಧಿಗೆ ಕಾರಣವಾದವು ಎಂಬುದನ್ನು ಪ್ರಸ್ತುತ ಭಾಷಣಕಾರನು ಅನುಭವದಿಂದಲೂ ಅನ್ಯೋದಾಹರಣೆಗಳಿಂದಲೂ ದೃಢಪಡಿಸಿಕೊಂಡದ್ದುಂಟು, 'ಸುಲಭೋಚ್ಚಾರ್ಯ' ಎಂಬಂಥ ಸಂಸ್ಕೃತ ಪದಗಳೂ ಅಸುಲಭ ಎಂದು ಭಾವಿಸುವ ಭಾವಿಕರು 'ಸುಲಭ' ಎಂಬ ಮಹಾಪ್ರಾಣಾಕ್ಷರವುಳ್ಳ ಪದಗಳನ್ನೂ ಕನ್ನಡ ಪ್ರಪಂಚದಿಂದ ಹೊರತಳ್ಳಬೇಕಾದೀತು. ಮತ್ತೂ ಅಲಂಪು, ಪೆರೆ. ನೇಸರ್. ಕೂರ್ಮೆ ಮುಂತಾದ ಅನೇಕ ಅಚ್ಚಗನ್ನಡ ಪದಗಳ ಬಳಕೆಯನ್ನು ಬಿಟ್ಟದ್ದನ್ನು ಸಮರ್ಥಿಸಲಾರದೆ ಮೂಕರಾಗಿ ಕುಳಿತುಕೊಳ್ಳಬೇಕಾದೀತು ! ಇಷ್ಟೇ ಅಲ್ಲ—ಕುಮಾರವ್ಯಾಸನೂ ಲಕ್ಷ್ಮೀಶನೂ ಬರೆದ ಭಾರತಗಳನ್ನೂ ಹಳಗನ್ನಡ ಕಾವ್ಯಗಳೊಟ್ಟಿಗೇ ಕನ್ನಡ ಸಾಹಿತ್ಯದಿಂದ ಹೊರಗಿಡಬೇಕಾದೀತು !

ವಿಚಾರಶೀಲತೆ ಜನಸಾಮಾನ್ಯರಲ್ಲಿಯು ವಿದ್ಯಾವಂತರಲ್ಲಿ ಬೆಳೆದ ಹಾಗೆ ಕನ್ನಡ ಗದ್ಯಶೈಲಿಯು ದೃಢತರವಾಗುತ್ತ ಹೋಗಬಲ್ಲುದು. ಪರಕೀಯ ವಿಚಾರಗಳನ್ನು ಕನ್ನಡ ಭಾಷೆಯ ಸಾರಭೂತವಾದ ಪ್ರವೃತ್ತಿಗೆ ಸಮನ್ವಯಿಸಿಕೊಂಬ ಶಕ್ತಿಯನ್ನು ಪ್ರಬಂಧಕಾರ ಅಳವಡಿಸಿಕೊಳ್ಳುವುದೂ ಅಗತ್ಯ. ಮಧುಚಂದ್ರ. ಸುವರ್ಣಮಧ್ಯಮ ಮುಂತಾದ ಪದನುಡಿಗಳಿಗೆ ಕನ್ನಡ ದಮಾಮಾನದ ಸಂಸ್ಕೃತಿಯಲ್ಲಿ ಅರ್ಥವಿಲ್ಲ. ಕನ್ನಡ ವಾಕ್ಯರಚನೆಯು ಪದಜಸಂಯೋಗದ ಗುಟ್ಟನ್ನೂ ಅರಿಯದೆ, ಅನೇಕ ಲೇಖಕರು ಇಂಗ್ಲಿಷ್. ಮರಾಠಿ. ಹಿಂದಿ ಮುಂತಾದ ಭಾಷೆಗಳಲ್ಲಿ ಪ್ರಗಲ್ಭವಿಚಾರವುಳ್ಳ ಗ್ರಂಥಗಳನ್ನು ಜೀವನದಲ್ಲಿ ಬಹು ಕಾಲ ಅಭ್ಯಸಿಸಿ, ಕನ್ನಡದಲ್ಲಿ ತಮ್ಮ ಅಥವಾ ಅನ್ಯರ ಅಭಿಪ್ರಾಯಗಳನ್ನು ಬರೆದ ನಿದರ್ಶನಗಳು ಭಾಷಾಂತರ, ಅಭಿಪ್ರಾಯ ಸಂಗ್ರಹ, ಸಾರಸ್ವೀಕಾರ ಮುಂತಾದ

ಪ್ರಯತ್ನಗಳಲ್ಲಲ್ಲದೆ ಇತರ ಲಲಿತಸಾಹಿತ್ಯ ಪ್ರಭೇದಗಳಲ್ಲೂ ಕಂಡುಬಂದುದು ಅವುಗಳ ಚಿರಸ್ಥಾಯಿತ್ವಕ್ಕೆ ಭಂಗಕಾರಕವಾದುದು. ಸದ್ಯ ನಗರವಾಸಿಗಳೂ (ಬಡವುಟ್ಟಿದ) ಆಂಗ್ಲಭಾಷಾಭಿಜ್ಞರೂ ಆದ ಕೆಲ ಮಿತ್ರರು ಅರ್ಥವಾಯಿ ತೆಂದುದರಿಂದ ಸಮಾಧಾನಪಟ್ಟುಕೊಂಬ ಪ್ರಬಂಧಕಾರನು ಕನ್ನಡ ಇನ್ನು 500 – 1000 ವರ್ಷಗಳ ಬಳಿಕ ಯಾವ ರೂಪದಲ್ಲಿ ತನ್ನ ನೆಲೆಯನ್ನು ಕಂಡು ಕೊಳ್ಳುವುದು ಸಂಭವ, ಸಾಧ್ಯ, ಉಚಿತ, ಸುಂದರ ಎಂಬ ದಿಶೆಯಲ್ಲಿ ಸ್ವಲ್ಪವೂ ವಿಚಾರಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ನಾವು ಬರೆಯುವುದು ವಿಶೇಷಜ್ಞನೂ ಆಂಗ್ಲಜ್ಞನೂ ಆದ ಓದುಗನಿಗಾಗಿ ಅಲ್ಲ—ಎಂಬುದನ್ನು ಅರಿತೇ ಸಾಮಾನ್ಯರಿಗಾಗಿ ಬರೆದ ಪ್ರೌಢ ಪ್ರಬಂಧಕಾರನು ಲೇಖನಿಯನ್ನೆತ್ತುವುದಗತ್ಯ. ನಮ್ಮ ಪ್ರಬಂಧಗಳಲ್ಲಿ ಅಸ್ಪಷ್ಟತೆ, ಸಂದಿಗ್ಧತೆ, ಉಳಿಯಲು ಉಕ್ತವೃಷ್ಟಿಯ ಹಾಗೂ ಹಳೆ–ನಡುಗನ್ನಡ ಕೃತಿಗಳ ಆಳವಾದ ಪರಿಚಯದ ಅಭಾವವೇ ಮುಖ್ಯ ಕಾರಣ. ಆಂಗ್ಲಭಾಷಾ ಪ್ರಬಂಧಗಳಲ್ಲಿ ಸಹಜವೆನಿಸಿದ ಎಲ್ಲ ಪದ, ಅರ್ಥ, ವಿಚಾರಧಾರೆ, ಪಡೆನುಡಿ, ಮೋಳನುಡಿಗಳೂ ಕನ್ನಡದಲ್ಲಿ ಹಾಗೇ ತತ್ಸಮಿಸಿ, ತದ್ಭವಿಸಿ, ದೇಶೀಯಿಸಿ ಬಿಡಬಹುದು; ಹಾಗೆ ಮಾಡಿದ್ದನ್ನು ಕೆಲವರು ಆತ್ಮಶೋಧಮಾಡಿಕೊಳ್ಳದೇ ಅರ್ಥವಾಗುತ್ತದೆ ಎಂದು ಹೇಳಿಯೂ ಬಿಡ ಬಹುದು—ಆದರೆ ಅಷ್ಟಕ್ಕೇ ತೃಪ್ತನಾಗುವ ಪ್ರಬಂಧಕಾರನು ಚಿರಸ್ಥಾಯಿಯಾದ ಸಹಜ ಕನ್ನಡ ಶೈಲಿಯನ್ನು ರೂಪಿಸಲಾರ. ವಿಚಾರಶಕ್ತಿಯ ಆಭಾಸವೇ ಇಂದು ಕೇವಲ ಅರ್ಧಮರ್ಧ ಇಂಗ್ಲಿಷ್ ಕಲಿತ, ಸಂಸ್ಕೃತ–ಕನ್ನಡ ಚೆನ್ನಾಗಿ ಬಾರದಿರುವ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ. ಅಂಥವರೇ ನಮ್ಮ ವಾಚಕರು, ರಸಿಕರು, ಸಹೃದಯರು ಎಂದು ಭಾವಿಸುವುದು ಅಪಾಯಕರ. ನಮ್ಮ ಹೊಸಗನ್ನಡ ಪ್ರಬಂಧಕಾರರಲ್ಲಿ ಈ ಅಂಶಗಳನ್ನು ಚೆನ್ನಾಗಿ ಅರಿತು ಉಚಿತವಾಗಿ ಬರೆದ ಗಣ್ಯ ಲೇಖಕರಿದ್ದಾರೆ: ಆದರೆ ಅವರು ಅಲ್ಪಸಂಖ್ಯರು. ಆ ಅಲ್ಪಸಂಖ್ಯರ ಪ್ರಬಂಧ ಗಳನ್ನು ಗುರುತಿಸಿ ಕನ್ನಡ ಶಿಕ್ಷಕರಿಂದು ಶಿಷ್ಯರಿಗೆ ಸನ್ಮಾರ್ಗದಲ್ಲಿ ಕನ್ನಡ ಜ್ಞಾನ ವನ್ನು ಮಾಡಿಕೊಡಬೇಕಾಗಿದೆ. ಕಾವ್ಯ ಹುಟ್ಟಬೇಕಾದರೆ ಪ್ರತಿಭೆಯಿರಬೇಕು: ಗುರೂಪದೇಶದಿಂದ ಶಾಸ್ತ್ರಜ್ಞಾನವನ್ನು ಯಾವ ಜಡಮತಿವಂತನೂ ಮಾಡಿ ಕೊಂಡಾನು—ಎಂದು ಭಾಮಹ ಹೇಳಿದ್ದು ಆ ಕಾಲಕ್ಕಾಯಿತು. ಇಂದಿನ ಪ್ರಜಾಪ್ರಭುತ್ವದಲ್ಲಿಯ ಶಿಕ್ಷಿತರಲ್ಲಿ ಬಹುಸಂಖ್ಯ ಕನ್ನಡಿಗರು ಆತನ ಮಾತನ್ನು ಸುಳ್ಳುಮಾಡಲು ಸೊಂಟಕಟ್ಟಿದ್ದಾರೆ—ಎನ್ನುವಷ್ಟು ವಿಚಾರಶೀಲತೆಯಿಂದ ದೂರ ಉಳಿದಿರುವ ಅಂಶವನ್ನು ಶ್ರೀ ಗೌರೀಶ ಕಾಯ್ಕಿಣಿಯವರು ಇತ್ತೀಚೆಗೆ ಎತ್ತಿ

ಹೇಳಿದ್ದಲ್ಲಿ ಸ್ಮರಣೀಯ. ಈಗ ಹಾಸ್ಯಭೇದಕ್ಕೆ ಸಂಬಂಧಿಸಿದಂತೆ ನಾಲ್ವರು ಪ್ರಬಂಧಕಾರರು ಬರೆದ ಒಂದೊಂದು ಉಪಚ್ಛೇದದಲ್ಲಿ ಶುದ್ಧ ಪ್ರಬಂಧದ ನಾಲ್ಕು ಶೈಲಿ ಭೇದಗಳನ್ನು ನೋಡೋಣ:

1. ಇದೇನು ಹನುಮಂತನ ಬಾಲದ ಹಾಗೆ ಬೆಳೆಯುತ್ತಿದೆ—ಅದೊಂದು ಗಾಳಿಯ ಗೋಪುರ—ಸಾಕುಮಾಡಯ್ಯ ನಿನ್ನ ಗೋಳು ರಾಮಾಯಣ—ಮುಂತಾದ ಸರಸವಚನಗಳನ್ನು ಎಲ್ಲರೂ ಕೇಳುತ್ತಿರುತ್ತಾರೆ. ಸ್ವಲ್ಪ ಕೋಪವೇರಿದಾಗ ಹೇಳುವ—ಅದೊಂದು ಕಳ್ಳರ ಸಂತೆ—ಎಲ್ಲಿಂದ ಬಂದಳೋ ಈ ತಾಟಕಿ ಮೊದಲಾದ ಆಕ್ಷೇಪಣೆಗಳೂ ಎಲ್ಲರಿಗೂ ಪರಿಚಿತ. ಮನಸ್ಸು ಅತಿ ಉಗ್ರವಾದಲ್ಲಿ ಬಾಯಿಂದ ಬೀಳುವ—ಅದೊಂದು ಊರೇ—ಅವನೊಬ್ಬ ಮನುಷ್ಯನೇ—ಅವಳ ಹೆಸರು ಹೇಳಿದರೆ ಉಪ್ಪು ಕೂಡ ಹುಟ್ಟುವುದಿಲ್ಲ ಇತ್ಯಾದಿ ಬಯ್ಗುಳವೂ ಎಲ್ಲರಿಗೂ ತಿಳಿದ ವಿಷಯ. ಈ ಬಗೆಯ ಮಾತುಗಳಲ್ಲಿ ವ್ಯಕ್ತವಾಗುವ ನಡೆವಳಿಕೆ ಯಾವುದು? ಅವುಗಳನ್ನು ಆಡುವವರ ಅಭಿಪ್ರಾಯಗಳೇನು? ಒಬ್ಬ ವ್ಯಕ್ತಿಯ, ಒಂದು ಸಂಸ್ಥೆಯ, ಅಥವಾ ಒಟ್ಟು ಸಮಾಜದ ಯಾವುದೋ ದೋಷವನ್ನು ಎತ್ತಿತೋರಿಸಿ ಹೀನಾಯ ಮಾಡುವುದೇ ಅಲ್ಲವೇ? ಈ ಕಾವ್ಯವೇ ವಿಡಂಬನ.

—ಎಸ್. ವಿ. ರಂಗಣ್ಣ

2. ನಗೆಯಾಟವು ವೀರರ ಶಸ್ತ್ರ. ವಾದಿಗಳ ಅಸ್ತ್ರ. ಪ್ರತಿಷ್ಠಿತರ ಶಾಸ್ತ್ರ. ಬಿರುನಗೆಯು ಧೂರ್ತರ ಕೈದು, ಕುಹಕಿಗಳ ಕೊಂಡೆಯ. ಕಿವಿಕಚ್ಚುವವರ ಅಸ್ತ್ರ. ಕೆಲವರ ನಗೆಯು ಹುಡುಗರ ಹುಡುಗಾಟ; ಹುಚ್ಚರ ಹಡೆಬಿರಪ. ಹುಚ್ಚುನಗೆಯು ಹುಂಬರ ವಿಲಾಸ. ನಗದೆ ನಗಿಸುವುದು ಚತುರರ ರೀತಿ: ನಕ್ಕು ನಗಿಸುವುದು ವಿದೂಷಕರ ಪರಿಪಾಠ; ನಗೆಗೀಡಾಗುವುದು ಮೂಢರ ಹಾದಿ. ಮೂರುಸಲ ನಗುವ ಮಂದರ ಕತೆ ಗೊತ್ತಿರಬಹುದು. ಒಮ್ಮೆ ಹತ್ತರಕೂಡ ಹನ್ನೊಂದೆಂದು ನಗುವವರ ಕೂಡ ನಗುವುದು; ಕೆಲಹೊತ್ತಿನ ಮೇಲೆ ಮಂದ ಬುದ್ಧಿಯಲ್ಲಿ ಪ್ರಕಾಶಬಿದ್ದು ಮಾತು ತಿಳಿದು ನಗುವುದು; ಆ ಮೇಲೆ ಮೊದಲಿನ ನಗೆಯ ಮೌಢ್ಯವನ್ನು ನೆನಸಿ. ಆಮೇಲಿನ ತಿಳಿವಳಿಕೆಯ ಅದ್ಭುತೆಯನ್ನು ತಿಳಿದು. ತನಗೆ ತಾನೇ ನಗುವುದು; ಹುಡುಗತನ. ಹುಂಬತನ. ಇಲ್ಲವೆ ಹುಚ್ಚುತನವೇ ನಗೆಯ ಹುಟ್ಟು. ರಸಿಕರ ಹಾಸ್ಯ ವಿನೋದದಲ್ಲಿ ಮಿಂಚಿನ ಸಂಚಾರವಿರುವುದು: ತಿಳಿಯುವವರಿಗೆ ಬುದ್ಧಿ ಸಂಸ್ಕಾರ ಮಾತ್ರ ಬೇಕು.

—ದ. ರಾ. ಬೇಂದ್ರೆ

3. ವಿಡಂಬನೆಯೆಂದರೆ ಬರಿ ಘೂಮದ ಹಾಡಲ್ಲ, ಬೀಭತ್ಸವಲ್ಲ; ಬರಿ ಸಿಟ್ಟಿನ ರಗಳೆಯಲ್ಲ. ಸಿಟ್ಟಿನೊಡನೆ ಸ್ವಾಭಿಮಾನವನ್ನೂ ತುಸು ವಿನೋದವನ್ನೂ ಕೂಡಿಸಿದಾಗ ಹುಟ್ಟಿಬರುವ ಅಪಹಾಸವಲ್ಲ. ವಿಡಂಬನೆಯು ಅಣಕಕ್ಕೆ ಸಮೀಪ ವಾಗಿದ್ದರೂ ಅದರಲ್ಲಿ ವಿನೋದದ ಅಂಶವು ಇನ್ನೂ ಹೆಚ್ಚಾಗಿರುತ್ತದೆ; ಸಾತ್ವಿಕ ಕೋಪವೂ ಸಹ ತಕ್ಕಮಟ್ಟಿಗೆ ಕೂಡಿರುತ್ತದೆ; ಸ್ವಾಭಿಮಾನವು ಮಾತ್ರ ಅವ್ಯಶ್ಯ ವಾಗಿ ಬಂದು ನೆಲೆಸಿರುತ್ತದೆ. ವಿನೋದ. ಸ್ವಾಭಿಮಾನ. ಕೋಪ – ಈ ಮೂರರ ವಿಶಿಷ್ಟ ಸಮ್ಮಿಶ್ರಣದ ಮೇಲೆ ವಿಡಂಬನೆಯ ಸ್ವಭಾವ ಗುಣದ ನಿರ್ಣಯವಾಗು ತ್ತದೆ. ಈ ಮೂರು ಗುಣಗಳು ಮುಪ್ಪುರಿಗೊಂಡು ಸಿದ್ಧವಾದ ವಿಡಂಬನೆಯು ಸಾಹಿತ್ಯರೂಪಕ್ಕೆ ಇಳಿಯಬೇಕಾದರೆ ಅದು ರಸಸಿದ್ಧಿಯನ್ನು ಹೊಂದಿರಬೇಕು. ಕಾವ್ಯದ ಆತ್ಮವಾದ ಧ್ವನಿಯಾಗಲಿ ಕಿರಿದರಲ್ಲಿ ಹಿರಿದನ್ನು ಹೇಳುವ ಸಾಮರ್ಥ್ಯ ವಾಗಲಿ ಅದಕ್ಕೆ ಬಂದಿರಬೇಕು.

—ವಿ. ಕೃ. ಗೋಕಾಕ

4. 'Satire ಶತಾರಿ ಎಂಬುದು ಉಪ್ಪು – ಪಾದರಸಗಳಿಂದ ಮಾಡಿದ ಅಡಿಗೆ; ಸತ್ಯದ ಸಂರಕ್ಷಣೆಗೆ ಅದೊಂದು ಪವಿತ್ರ ಆಯುಧ' ಎಂಬುದು ದಿಟ. ಆಡುಮಾತಿನಲ್ಲೇ ಓಡುವ ಗದ್ಯವಿದು. ಇದರ ಗಾಂಭೀರ್ಯ ಕೂಡ ಕಟಕಿಯ ವ್ಯಂಗ್ಯಶಕ್ತಿಯುಳ್ಳದ್ದು. ತೀಪ್ರವಾದಾಗ ಮೂದಲಿಕೆ, ಮಾರ್ಮಿಕ ಹಾಸ್ಯ, ಕರುಳು ಚುಚ್ಚುವ ಹಾಸ್ಯ. ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಮೂಡಿಬರುವ ಇರಿತ ಎನಿಸುತ್ತದೆ. ಇಂಥಲ್ಲಿ ವಾಕ್ಯಗತಿಯು ಓಟವು ಭಾವದ ಬಿಂಕವನ್ನು ಬೆಂಬತ್ತಿ ಸಾಗುತ್ತದೆ; ಲಯಯತಿಗಳಾದರೂ ಹಾಗೇ: ಭಾವಸಾಂದ್ರತೆಯ ಹೆಚ್ಚು ಕಡಿಮೆಗನುಗುಣವಾಗಿಯೇ ಹೋಗುತ್ತವೆ – ಭಾವನೆಯ ಉದ್ರೇಕದ ಇಪ್ಪಾನು ಗುಣ ಡಿಗ್ರಿಯನ್ನೇ ಅವಲಂಬಿಸಿರುತ್ತವೆ.

—ಬಿ. ಎಚ್. ಶ್ರೀ.

ವಿಡಂಬನ – ವಿನೋದಗಳು, ನಗೆ ಬರಹಗಳು, ಹಾಸ್ಯ ಪ್ರಬಂಧಗಳು, ಪರಿಹಾಸ. (Raillery) ಹುಚ್ಚುಹಾಸ್ಯ. (Nonsense) ವಿಕಟಹಾಸ್ಯ, ಕುಚೇಷ್ಟೆ, ನಕಲಿ (ಗೇಲಿ, ಲೇವಡಿ, Caricature), ಚತುರೋಕ್ತಿ (Wit), ನಿಂದೆ (ಬಯ್ಗುಳ, Invective) ಮರ್ಮಾಘಾತ (ಮಾರ್ಮಿಕ ಹಾಸ್ಯ. ಮೂದಲಿಕೆ, ಕರುಳು ಚುಚ್ಚುವ ಅಪಹೇಳನೆ. (Sarcasm) ವ್ಯಂಗ್ಯೋಕ್ತಿ (ಕಟಕಿ, Irony) ವಕ್ರೋಕ್ತಿ (ಕೊಂಕು ನುಡಿ. Insinuation, Innuendo)

ಅಪಹಾಸ್ಯ (Mockery) ಎಂಬುದು ಶ್ರೀ. ಎಸ್. ವಿ. ರಂಗಣ್ಣನವರು ಕೊಟ್ಟ ವಿಡಂಬನಚಕ್ರದ ಹತ್ತು ಹಳಿಗಳು, ಅವುಗಳ ವಸ್ತುವಾಗಬಲ್ಲುದು ವಿಕಾರ, ಆಕಾರವಲ್ಲ. ‘ವಿಡಂಬನ’ವೆಂದರೆ ಅನುಕರಣ, ಕಪಟ. ಪರಿಹಾಸ. ಛದ್ಮ. ‘ವಿನೋದ’ವೆಂದರೆ ಕೇವಲ ಪರಿಹಾಸ. ‘ಸಾಹಿತ್ಯ ದರ್ಪಣ’ವು ಹಾಸ್ಯರಸಿಕರಲ್ಲಿ ಮೂರು ವರ್ಗಗಳನ್ನು ಮಾಡಿರುವುದು ಗಮನೀಯ. ಜ್ಯೇಷ್ಠರಿಗೆ ಸ್ಮಿತ, ಹಸಿತಗಳನ್ನುಂಟುಮಾಡುವ ಹಾಸ್ಯ ಉಚಿತ: ಮಧ್ಯಮರಿಗೆ ವಿಹಸಿತ. ಅವಹಸಿತಗಳನ್ನುಂಟುಮಾಡುವ ಹಾಸ್ಯ ಸಹಜ ಮತ್ತು ಕನಿಷ್ಠರಿಗೆ ಅಪಹಸಿತ. ಅತಿಹಸಿತಗಳನ್ನುಂಟುಮಾಡುವ ಹಾಸ್ಯ ಯೋಗ್ಯ – ಎಂಬ ಸ್ಥೂಲ – ಆದರೆ ಮಾರ್ಮಿಕ ಹಾಸ್ಯಪ್ರಕಾರಗಳನ್ನು ಉಲ್ಲೇಖಿಸಲಾಗಿದೆ. ವಿಡಂಬನದ ಮೇಲೆ ಹೇಳಿದ ದಶಾವತಾರಗಳನ್ನು ಈ ಮೂರೂ ವರ್ಗಗಳ ರಸಿಕರಲ್ಲಿ ಹೆಚ್ಚು ಕಡಿಮೆ ಸರಿಯಾಗಿ ಹಂಚಬಹುದು. ಚತುರ್ಥ ವರ್ಗದ ಹಾಸ್ಯವನ್ನು ವರ್ಜನೀಯವಾದ ಅಶ್ಲೀಲ, ಭಂಡತನ ಎಂದಿಟ್ಟುಕೊಳ್ಳಬಹುದು.

ಪಾಶ್ಚಾತ್ಯ ಪ್ರಪಂಚದಲ್ಲಿ ವಿಡಂಬನ ಸಾಹಿತ್ಯವು ಸಾಮಾಜಿಕ ರೀತಿ ನೀತಿಗಳ ಸಂಧಾರಣೆಗೆ ದೊಡ್ಡ ಪ್ರೇರಣೆಯಾದದ್ದು ಸುವಿದಿತ. ನಮ್ಮಲ್ಲಿ ಈ ಉದ್ದೇಶವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಕೆಲವರು ಕಾದಂಬರಿ. ಕತೆ. ನಾಟಕಗಳನ್ನು ಬರೆದಿದ್ದಾರೆ: ಅವುಗಳಲ್ಲದೆ ಶ್ರೀಗಳಾದ ಕಸ್ತೂರಿ. ಬೀಚಿ. ವಿ. ಜಿ. ಭಟ್ಟರಂಥವರು ಹಾಸ್ಯ ಪ್ರಬಂಧಗಳನ್ನೂ ಬರೆದಿದ್ದಾರೆ. ಆದರೆ ಭಾರತೀಯ ಹವಾಮಾನದಲ್ಲಿ ಬದಲಾವಣೆಯ ವೇಗವು ಬಹು ಮಂದ: ಆದ್ದರಿಂದ ನಮ್ಮ ಸಾಮಾಜಿಕರಲ್ಲಿ ಈ ಅಂಶಗಳಲ್ಲಿ ಬದಲಾವಣೆಗಳಾಗುತ್ತಿದ್ದರೂ ಬಹುಸಂಖ್ಯ ಗ್ರಾಮಸ್ಥ – ನಗರಸ್ಥರ ಒಟ್ಟು ಬಾಳನ್ನು ನೋಡಿದರೆ ನಿರೀಕ್ಷಿತ ಪ್ರಮಾಣದ ಬದಲಾವಣೆಗಳು ನಿರೀಕ್ಷಿತ ವೇಗದಿಂದ ಆಗುತ್ತಿಲ್ಲ. ಅದಕ್ಕೆ ಅಕ್ಷರಸ್ಥರ. ವಿದ್ಯಾವಂತರ ಮತ್ತು ವಾಚನಾಭ್ಯಾಸವುಳ್ಳವರ ಸಂಖ್ಯೆ ಕಡಿಮೆಯಾಗಿರುವುದು ಒಂದು ಪ್ರಬಲವಾದ ಕಾರಣ. ಜೀವನದ ಇತರ ಪರಿಸ್ಥಿತಿಗಳೂ ಅಂಥ ಉತ್ತಮವಾದ ಹೃದಯ ಪರಿವರ್ತನೆಗೆ ವಿಘ್ನಗಳಾಗಿವೆ.

ಶಕ್ತವಾದ ಲಲಿತ ಸಾಹಿತ್ಯದ ಪ್ರಧಾನ ಗುರಿ ರಸೋದ್ಬೋಧವಾದರೂ ಅನಂತರ ಅದು ಪರೋಕ್ಷ ಮಾರ್ಗದಿಂದ ಹೃದಯದ ನೈತಿಕ ಭಾವನೆಗಳ ತಿದ್ದುಪಡಿಗೆ ಕಾರಣವಾಗುವುದು ಗೊತ್ತಿದ್ದ ಸಂಗತಿ. ಆಯಾ ಐತಿಹಾಸಿಕ ಅವಧಿಯ ನಾಗರಿಕತೆಯು ಗೌರವಿಸುವ ಆದರ್ಶಗಳತ್ತ ರಸಿಕರ ಮನಸ್ಸನ್ನು ತಿರುಗಿಸುವ ಕಾವ್ಯದಲ್ಲಿ ವಿಡಂಬನದ ಮಾರ್ಗವು ವಿಶಿಷ್ಟವಾದುದು: ಅಂದರೆ

ಸ್ವಲ್ಪ ಖಾರವಾದುದು, ಮಸಾಲೆಯಿಂದ ಕೂಡಿದ್ದು ಎನ್ನಬಹುದು. ಪ್ರಾಚೀನ ಕಾಲದ ಹಾಸ್ಯವು ವಿಕೃತವಾದ ವ್ಯಕ್ತಿಯ ವಿಕೃತವಾದ ವೇಷ, ವರ್ತನೆ, ಭಾಷಣಗಳನ್ನು ಕಂಡು ನಗುವ ಸೂತ್ರದಿಂದ ಹೊರಟು, ಚತುರೋಕ್ತಿಯನ್ನು ಕೆಲವೆಡೆ ಅಳವಡಿಸಿಕೊಂಡು, ಅಣಕ, ಮೂದಲಿಕೆ, ಜರೆತ, ನಿಂದೆ ಮುಂತಾದ ರೂಪಗಳಲ್ಲಿ ಪ್ರಕಟವಾಗಿ ಈಗ ಸನ್ನಿವೇಶ ನಿಷ್ಠ ಹಾಸ್ಯ ಪ್ರಕಾರಗಳನ್ನೂ ಹುಟ್ಟಿಸುತ್ತಿದೆ. ಈ ಕ್ಷೇತ್ರದಲ್ಲಿ ಇನ್ನೂ ಬಹಳ ಕುಶಲಕೃಷಿ ನಡೆಯಬೇಕಾಗಿದೆ.

ಹಾಸ್ಯವು ಎಂದೂ ತನ್ನ ಆತ್ಮಸ್ವರೂಪದಂತಿರುವ ಹಾಸ ಅಥವಾ ಪ್ರಸನ್ನತೆಯನ್ನು ಕೊನೆಯದಾಗಿ ರಸಿಕನಲ್ಲಿ ಉಳಿಸದಷ್ಟು ದೂರ ಹೋಗ ಕೂಡದು. ಮಾನವತೆಯ ಮೂಲ ಸ್ರೋತಸ್ಸನ್ನು ಬೆಳೆಯಿಸಿಕೊಂಡಿರುವ ಹಾಸ್ಯಕಾರನು ಸರ್ವಗ್ರಾಹ್ಯವಾದ ನಿಂದ್ಯಾನಿಂದ್ಯ ವಿವೇಕವುಳ್ಳವನಾಗಿರುತ್ತಾನೆ. ಅವನಿಗೆ ನಾಗರಿಕತೆಯ ವರ್ತಮಾನ—ಭವಿಷ್ಯತ್ತುಗಳ ಮಾರ್ಮಿಕ ದರ್ಶನ ವಿರುತ್ತದೆ. ಒಮ್ಮೆ ಒಬ್ಬ ಚೀನೀ ಹಾಸ್ಯಪ್ರಬಂಧಕಾರನೆಂದನಂತೆ — ಜಾಗತಿಕ ಸಮಸ್ಯೆಗಳನ್ನು ಬಿಡಿಸಲು ರಾಜಕಾರಣಿಗಳಿಗೆ ಬಿಟ್ಟುಕೊಟ್ಟದ್ದರಿಂದಲೇ ಅವು ಜಟಿಲತರವಾಗುತ್ತ ಹೋಗುತ್ತಿವೆ: ಅವನ್ನು ಜಗತ್ತಿನ ಸುಪ್ರಸಿದ್ಧ ಹಾಸ್ಯಕಾರರ ಸಭೆಯ ಮುಂದಿಟ್ಟರೆ ಅರ್ಧಗಂಟೆಯಲ್ಲಿ ಪರಿಹಾರವಾಗುವುವು — ಎಂದು. ಅಂದರೆ ಹಾಸ್ಯಕಾರನಿಗೆ ಅಸಂಗಶೀಲ, ವಸ್ತುವಿನ ಅಂತರ್ದರ್ಶನ ಮತ್ತು ನಿಷ್ಪಕ್ಷಪಾತತೆಗಳು ಸಹಜವಾಗಿರುವುದರಿಂದ ಆತನು ನಿಃಸ್ವಾರ್ಥಬುದ್ಧಿಯಿಂದ ವ್ಯವಹರಿಸಬಲ್ಲ ಎಂದರ್ಥ. ಈ ಉನ್ನತ ಮನೋಧರ್ಮವುಳ್ಳ ಸಮಾಜ ಹಿತೈಷಿಗಳಾದ ಹಾಸ್ಯಕಾರರ ಅಗತ್ಯ ಭಾರತಕ್ಕೂ ಕರ್ನಾಟಕಕ್ಕೂ ಈಗ ಬಹಳ ವಾಗಿದೆ ಎನ್ನಬಹುದು.

ಈ ವರೆಗೆ ಹೆಸರಿಸಿದ ಬಗೆಗಳಲ್ಲಿ ಯಾವ ಬಗೆಯ ಪ್ರಬಂಧವೇ ಆಗಲಿ— ಅದು ತನ್ನ ಜಾತಿಗೆ ಸಹಜವಾದ ಬಂಧ, ಕಟ್ಟು, ರಚನೆ ಅಥವಾ ಕಟ್ಟಡ ಎಂಬುದರ ಸಾಧಾರಣ ಧರ್ಮಗಳನ್ನು ಹೊಂದಿರಬೇಕು. ಸುಸಂಗತವಾಗಿ ಆದಿಮಧ್ಯಾಂತಗಳಿಂದ ಉಪಕ್ರಮಿಸಿದ ವಿಷಯವನ್ನು ಪ್ರತ್ಯಕ್ಷಾಪ್ರತ್ಯಕ್ಷ ರೀತಿ ಯಿಂದ ಉಪನ್ಯಸಿಸಿ, ಉಪಸಂಹರಿಸುವ ಸುಸ್ಪಷ್ಟ ವಾಕ್ಯಗತಿಯು ಗದ್ಯವಾಗಿರ ಬೇಕು ಎಂಬುದಲ್ಲಿ ಉಪಸಂಹಾರ್ಯ. ಬೆಳೆಯುತ್ತಿರುವ ಹೊಸಗನ್ನಡ ಸಾಹಿತ್ಯವಿಂದು ವಿಚಾರವಂತಿಕೆಯನ್ನೂ ಹೃದಯವಂತಿಕೆಯನ್ನೂ ಪೋಷಿಸಬಲ್ಲ ಸತ್ಪ್ರಬಂಧಸಂತಾನಗಳನ್ನು ನಿರ್ಮಿಸಿ ಜನದ ವ್ಯವಹಾರವನ್ನೂ ಭಾವಜೀವನ ವನ್ನೂ ಉನ್ನತ – ಉನ್ನತತರ ಮಟ್ಟಕ್ಕೆ ಒಯ್ಯಲೆಂದು ಹಾರಯಿಸುತ್ತೇನೆ.

ಸ್ಮಿತಾದಿಗಳ ಲಕ್ಷಣ

ಈಷದ್ವಿಕಾಸಿನಯನಂ ಸ್ಮಿತಂ ಸ್ಯಾತ್ ಸ್ಪಂದಿತಾಧರಂ !
ಕಿಂಚಿಲ್ಲಕ್ಷ್ಯದ್ವಿಜಂ ತತ್ರ ಹಸಿತಂ ಕಥಿತಂ ಬುಧೈಃ !!
ಮಧುರಸ್ವರಂ ವಿಹಸಿತಂ ಸಾಂಸಶಿರಃ ಕಂಪಮವಹಸಿತಂ !
ಅಪಹಸಿತಂ ಸಾಸ್ರಾಕ್ಷಂ ವಿಕ್ಷಿಪ್ತಾಂಗಂ ಚ ಭವತ್ಯತಿಹಸಿತಂ !!

—ಸಾ. ದ. (218—19)

ಸ್ವಾತಂತ್ರ್ಯ ಪೂರ್ವದ
ಕನ್ನಡ ಪ್ರಬಂಧ ಸಾಹಿತ್ಯದ ಬೆಳವಣಿಗೆ

ಭಾರತವು ಸ್ವಾತಂತ್ರ್ಯವನ್ನು ಪಡೆದುದು 1947ರಲ್ಲಿ. ಹಿಂದಿನ ಕಾಲದಲ್ಲಿ ಪ್ರಬಂಧವೆಂದರೆ Poetic Composition ಕವಿಕೃತಿಯಾಗಿತ್ತು. ಆಂಗ್ಲ ಸಾಹಿತ್ಯದ ಪರಿಚಯ ಭಾರತೀಯರಿಗಾದ ಮೇಲೆ—ಅಂದರೆ ಈಗ ಸುಮಾರು 150 ವರುಷಗಳ ಹಿಂದೆ—ಪ್ರಬಂಧವೆಂದರೆ ಗದ್ಯರೂಪದ ಕಥನ, ವರ್ಣನ, ವಿವರಣ ಅಥವಾ ವಿವೇಚನ ಎಂಬ ಚತುರ್ಮುಖ ಅರ್ಥವನ್ನು ತಳೆದಿತ್ತು. ಇವು ಶುದ್ಧ ಪ್ರಬಂಧದ ನಾಲ್ಕು ಪ್ರಸಿದ್ಧ ಶೈಲಿಗಳಾದರೆ ಇವೆಲ್ಲವೂ ಉಚಿತವಾಗಿ ಬೆರೆತರೆ ಮಿಶ್ರಶೈಲಿಯಾಗುವುದು. ಶುದ್ಧವಾದ ಕತೆಗಳೂ, ಕಾದಂಬರಿಗಳೂ, ಸಣ್ಣಕತೆಗಳೂ, ಚರಿತ್ರೆ ಅಥವಾ ಇತಿಹಾಸಗಳೂ, ಆತ್ಮಚರಿತ್ರೆಗಳೂ, ಪತ್ರಗಳೂ, ಸಂವಾದಗಳೂ, ವೃತ್ತಾಂತಗಳೂ, ವಿಮರ್ಶೆಗಳೂ, ವಿಜ್ಞಾನದ ಅಥವಾ ಶಾಸ್ತ್ರದ ವಿಷಯವನ್ನು ಪ್ರತಿಪಾದಿಸುವ ಕೃತಿಗಳೂ, ಪ್ರಬಂಧದ ಕಕ್ಷೆಯಿಂದ ದೂರ ಉಳಿಯುತ್ತ ಬಂದವು. ಆಂಗ್ಲ ಕೃತಿಕಾರರಾದ ಅಡಿಸನ್, ಬೇಕನ್, ಸ್ಟೀಲ್, ಹ್ಯಾಸ್ಲಿಟ್, ಲ್ಯಾಂಬ್ ಮುಂತಾದವರ—ಸಾಮಾಜಿಕರ ರೀತಿ ನೀತಿಗಳ ಟೀಕೆ, ರಾಜಕೀಯ ಜೀವನದಲ್ಲಿ ಜಯ ಪಡೆಯುವ ಬಗ್ಗೆ ಉಪದೇಶ, ಮನೋರಂಜಕವಾಗಿ ಬರೆದ ನೈತಿಕ ಬುದ್ಧಿವಾದ ಮತ್ತು ಪುರವಾಸಿಗಳ ಜೀವನದ ವಿವಿಧ ಚಿತ್ರಗಳು—ಮುಂತಾದ ವಿಷಯಗಳನ್ನೊಳಗೊಂಡ ಪ್ರಬಂಧಗಳು ಜನಪ್ರಿಯ ಪ್ರಬಂಧಗಳೆಂದು ಹೊಸಗನ್ನಡ ಬರಹಗಾರರಿಗೆ ತೋರಿದವು.

ಜನಪ್ರಿಯ ಪ್ರಬಂಧಗಳು ಪತ್ರಿಕಾ ಲೇಖನಗಳಂತಿರುವುದು ಸಹಜವಾಯಿತು. News and Views ಸುದ್ದಿ ಮತ್ತು ಅವುಗಳ ಮೇಲಿನ ಅಭಿಪ್ರಾಯಂಗಳನ್ನು ಸಮ್ಮಿಶ್ರ ಹೂರಣವನ್ನಾಗಿ ಬಳಸಿಕೊಂಡು ವಿವಿಧ ವಿಷಯ ಪ್ರತಿಪಾದನೆಗಳನ್ನು ಕನ್ನಡದ ಉತ್ತಮ ಪತ್ರಿಕೆಗಳು ಸಂಪಾದಕೀಯಗಳ ಮತ್ತು ಇತರ ಸ್ಥಿರಶೀರ್ಷಿಕೆಯುಳ್ಳ ಬರಹಗಳ ರೂಪದಲ್ಲಿ ಮಾಡುತ್ತ ಬಂದುದು ಶಾಸ್ತ್ರಶುದ್ಧವಾದ ಪ್ರಬಂಧದ ಅಸ್ಥಿಪಂಜರವಾಯಿತೆನ್ನಬಹುದು. ಸ್ವಾತಂತ್ರ್ಯಪೂರ್ವದ ಕರ್ನಾಟಕವು ಸ್ವಾತಂತ್ರ್ಯಪೂರ್ವದ ಭಾರತದ ಅಂಗವಾಗಿ ದಾಸ್ಯದುಃಖ ಪರಿಹಾರಕ್ಕೋಸುಗ ಅಹಿಂಸಾತ್ಮಕವಾದ ಹೋರಾಟವನ್ನು ಇತರ ಪ್ರಾಂತಗಳ ಸತ್ಯಾಗ್ರಹಿಗಳಂತೆಯೇ ಪ್ರಾರಂಭಿಸಿದ್ದು ಸುವೇದ್ಯ. ನಮ್ಮ ಪ್ರಾಂತ ರಾಜ್ಯದ

ಸ್ವಾತಂತ್ರ್ಯಾಂದೋಲನದ ಪ್ರಥಮ ಗಣ್ಯ ಮುಖಂಡರೆಂದರೆ ದಿವಂಗತ ದೇಶಪಾಂಡೆ ಗಂಗಾಧರರಾಯರು. ಆ ಕಾಲದಲ್ಲಿಯ ಕನ್ನಡದ ಬಹುಸಂಖ್ಯೆ ಪತ್ರಿಕೆಗಳು ರಾಷ್ಟ್ರೀಯ ಬಂಧವಿಮೋಚನೆಯನ್ನೇ ಕ್ರಮೇಣ ತಮ್ಮ ಧೋರಣೆಯನ್ನಾಗಿ ಸ್ವೀಕರಿಸುತ್ತ ಬಂದವು. ಅವುಗಳಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೆಚ್ಚು ಬರಹಗಳಿರುವುದು ಸಹಜವಾಯಿತು. ಅಂದಿನ ಅವಧಿಯಲ್ಲಿ ವಾಗ್ಭೂಷಣ. ಸಾಧ್ವಿ. ಕರ್ಮವೀರ. ಸಂಯುಕ್ತ ಕರ್ನಾಟಕ. ವಿಶ್ವಕರ್ನಾಟಕ, ತಾಯಿನಾಡು, ರಾಷ್ಟ್ರಬಂಧು. ಜಯಕರ್ನಾಟಕ ಮುಂತಾದ ಪತ್ರಿಕೆಗಳು ಹುಟ್ಟಿ ಬೆಳೆದವು. ಅವುಗಳಲ್ಲಿ ತತ್ಕಾಲದ ರಾಜಕೀಯ ಪರಿಸ್ಥಿತಿಯ ವಿವೇಚನೆ. ಅವುಗಳನ್ನು ಕುರಿತು ವ್ಯಾಖ್ಯಾನಗಳು. ವ್ಯಕ್ತಿ ಪ್ರಶಂಸೆಗಳು, ರಾಜನೀತಿ ಯೋಜನೆಗಳು. ಅರ್ಥಚಿಂತನೆಗಳು. ನೀತ್ಯುಪದೇಶಗಳು—ಈ ಎಲ್ಲ ಅಂಶಗಳನ್ನೂ ಉಚಿತವಾಗಿ ಸಂದರ್ಭಾನುಸಾರ ಬಳಸಿಕೊಂಡ ಲೌಕಿಕ ಜೀವನ ವಿಮರ್ಶೆಗಳಾಗಿವೆ; ತಾತ್ಕಾಲಿಕ ಪರಿಸ್ಥಿತಿಯ ಹಿನ್ನೆಲೆ–ನಡುನೆಲೆ–ಮುನ್ನೆಲೆಗಳ ಐತಿಹಾಸಿಕ ಕಾರ್ಯಕಾರಣ ವಿವೇಕಗಳಾಗಿವೆ. ಪೂರ್ವೋಕ್ತ ಆಂಗ್ಲ ಪ್ರಬಂಧ ಸಾಹಿತ್ಯದ ವಸ್ತುಗಳೂ ಇವನ್ನು ಹೋಲುವಂಥವೇ. ಅವುಗಳಲ್ಲಿ ವಸ್ತುಸ್ಥಿತಿ. ರೀತಿನೀತಿ. ಆಚಾರ ವಿಚಾರ, ಸುಖದುಃಖ, ಪರಿಹಾರ ಸಾಧನ. ಪ್ರೋತ್ಸಾಹ. ಉಪದೇಶಗಳು ಎರಕಗೊಂಡಿವೆ, ಪ್ರತ್ಯೇಕವಾಗಿಯೂ ಬಂದಿವೆ. ಆದರೆ ಇಲ್ಲಿ ಹೆಚ್ಚಾಗಿ ಬಂದಿರುವುದು ಅಲ್ಲಿಯಂಥ ವಿಡಂಬನಮಾರ್ಗ ಹಿಡಿದ ಪ್ರಬಂಧಗಳಲ್ಲ. ಇಲ್ಲಿ ಗೆಳೆಯನಂತೆ ಕುಳಿತು ತಿಳಿಯಹೇಳುವ ಸದ್ಗುರುವಿನ ಲಲಿತಮಾರ್ಗವು ಸುಪ್ರಸಿದ್ಧ: ಪ್ರಧಾನವಾಗಿ Expository ವಿವರಣ ರೀತಿಯುಳ್ಳ ರೀತಿ.

ರಾಷ್ಟ್ರೀಯ ಆಂದೋಲನಕ್ಕೆ ಸಂಬಂಧಿಸಿದ ಗ್ರಂಥಗಳನ್ನುಳಿದರೆ ಮನೋರಂಜನೆಯನ್ನೇ ಪ್ರಧಾನೋದ್ದೇಶವನ್ನಾಗಿಟ್ಟುಕೊಂಡು ಸಮಾಜದ ಹಾಗೂ ವ್ಯಕ್ತಿಗಳ ಚಿಕ್ಕಪುಟ್ಟ ಲೋಪದೋಷಗಳನ್ನು ನಗೆಬಗೆಯಿಂದ ಹೇಳುವ ಪ್ರಬಂಧಗಳನ್ನು ಶ್ರೀಗಳಾದ ಪಡುಕೋಣೆ ರಮಾನಂದರಾಯರು. ನಾ. ಕಸ್ತೂರಿಯವರು. ಬಳ್ಳಾರಿ ಬೀಚಿಯವರು. ಎ. ಎನ್. ಮೂರ್ತಿರಾಯರು. ದ. ರಾ. ಬೇಂದ್ರೆಯವರು. ನಾಡಿಗೇರರು. ಡಿ. ವಿ. ಗುಂಡಪ್ಪನವರು, ಪ್ರಸ್ತುತ ಲೇಖಕರು ಮತ್ತು ಶಿವರಾಮ ಕಾರಂತರೇ ಮೊದಲಾದ ಇತರರು ಬರೆದಿದ್ದಾರೆ. ಇವುಗಳಲ್ಲಿ ಲಘು. ಕಟು, ಮಧ್ಯಮ. ಹಾಸ್ಯಧ್ವನಿ ಬೆರೆತಿವೆ, ಟೀಕೆ ಟಿಪ್ಪಣಿಗಳಡಗಿವೆ.

ಜಾತೀಯ–ರಾಜಕೀಯ ಯಜಮಾನರಿಂದು ಟೀಕೆಯನ್ನು (–ತಮಗೆ ವಿರುದ್ಧವಾಗಿರುವುದರಿಂದ ಯಾವಾಗಲೂ ಅವು ವಿಷಾದಕ–) ಮಾಡಕೂಡದೆಂದು

ನಿರ್ಲಜ್ಜೆಯಿಂದ ಮತ್ತು ಅಧಿಕಾರ ದರ್ಪದಿಂದ ಹೇಳಹೊರಟದ್ದುಂಟು. ಟೀಕೆಯನ್ನು ಖಂಡಿಸಲು ಸಮ್ಮೇಳನ ಕರೆದು ಗೊತ್ತುವಳಿ ಪಾಸುಮಾಡಿಬಿಟ್ಟರಾಯಿತು! ಇಂಥ ಜೀವನಾವರಣವಿರುವುದರಿಂದಲೇ ನಮ್ಮ ಪ್ರಜಾಪ್ರಭುತ್ವ ದಿನೇ ದಿನೇ ಅಸಾಂಸ್ಕೃತಿಕವಾಗುತ್ತ ನಡೆದದ್ದು. ಪ್ರಮಾಣವಿಲ್ಲ ಎಂದು ಘೋಷಿಸುವುದೂ, ಇದ್ದ ಪ್ರಮಾಣವನ್ನು ಜರಿದೆ ಬಾಯಿಂದ ಹುಡಿಮಾತಾಡಿ ಖಂಡಿಸುವ ಲಕ್ಷಣವೂ ಮುಖಂಡರಲ್ಲಿ ಬೆಳೆಯುತ್ತಿರಂವಾಗ ಪ್ರಬಂಧಗಳು ಹೆಚ್ಚು ಹುಟ್ಟಲಾರವು, ಹುಟ್ಟಿದರೆ ಅವಕ್ಕೆ ವಾಚಕರು ಸಿಗಲಾರರು, ಓದಿಯೂ ಪ್ರಯೋಜನ ಹೊಂದಲಾರರು !

ಆಯಾ ಕಾಲದ ಪರಿಸ್ಥಿತಿಯ ಮೇಲಿನ ಪ್ರಬಂಧಗಳು ಟೀಕಾತ್ಮಕವಾಗಿರದೆ ಹೋಗುವುದು ಅಸಹಜ. ಶತಾರಿ ಅಥವಾ ತುರುಚುಗಬ್ಬ ಎಂದು ಶ್ರೀ. ಜಿ. ಪಿ. ರಾಜರತ್ನಂ ಹೇಳಿದ ಸಾಹಿತ್ಯವು ಪಾಶ್ಚಾತ್ಯ ದೇಶಗಳಲ್ಲಿ ಪ್ರಬಂಧಾಕಾರದಿಂದ ಸಾಮಾಜಿಕ–ಧಾರ್ಮಿಕ–ರಾಜಕೀಯ ದೇಶಭಕ್ತರು ಮಾಡಿದ ಭಾಷಣಗಳ ಹಾಗೂ ಅವುಗಳಿಗೆ ಅನುಷಂಗಿಕವಾದ ಆರ್ಥಿಕ–ಔದ್ಯಮಿಕ ವಿಚಾರಗಳ ಸ್ವರೂಪದವು. ಆದರಿಂದಲೇ ಈಗಲೂ ನಮ್ಮ ಪತ್ರಿಕೆಗಳಲ್ಲಿ ರಾಜಕೀಯ ಮುಖಂಡರು ಮತ್ತು ಅವರ ವಿಚಾರಗಳು ಅಗ್ರಸ್ಥಾನ ಪಡೆಯುವ ಸಂಪ್ರದಾಯ ಉಳಿದಿದೆ. ಸಾಮಾಜಿಕ, ಧಾರ್ಮಿಕ, ರಾಜಕೀಯ, ನೈತಿಕ, ಆರ್ಥಿಕ, ಔದ್ಯಮಿಕ ವಿಷಯಗಳನ್ನು ಶುದ್ಧ ಶಾಸ್ತ್ರೀಯವೆಂಬಷ್ಟು ಬಿಗಿಯಿಲ್ಲದ ಮತ್ತು ತೀರ ಲಘು ಮನೋರಂಜಕವೆಂಬಷ್ಟು ಶಿಥಿಲವಲ್ಲದ ಶೈಲಿಯಲ್ಲಿ ವಿವೇಚಿಸಿದ ಪ್ರಬಂಧಗಳು ಪತ್ರಿಕೆಗಳಲ್ಲಿ ಬಂದಷ್ಟು ಪುಸ್ತಕಗಳಲ್ಲಿ ಬಂದಿಲ್ಲ. ಆದುದರಿಂದ ಕನ್ನಡ ನಾಡಿನ ಸ್ವಾತಂತ್ರ್ಯ ಪೂರ್ವದ ಪ್ರಬಂಧ ಸಾಹಿತ್ಯಕ್ಕೆ ಪುಸ್ತಕ ಸಲ್ಲಿಸಿದ ಸೇವೆಗಿಂತ ಪತ್ರಿಕೆ ಸಲ್ಲಿಸಿದ ಸೇವೆ ಹೆಚ್ಚೆನ್ನಲೇದರೆ ಅತಿಶಯೋಕ್ತಿಯಾಗಲಾರದು. ಅವಕ್ಕೆ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಲು ಶಕ್ತರಾಗದ ಪ್ರಬಂಧಕಾರರು ಇನ್ನೂ ಈಗಲೂ ಇರುವುದೂ ಪ್ರಬಂಧ ಗ್ರಂಥಗಳನ್ನು ಕೊಂಡು ಓದುವ ರಸಿಕರು ಇಂದೂ ಅತಿ ಕಡಿಮೆಯಾಗಿರುವುದೂ ಸಾಕ್ಷಿ ಮತ್ತು ಕಾರಣ.

ಮಹಾತ್ಮಾ ಗಾಂಧಿಯವರ ಲೇಖನ–ಭಾಷಣಗಳನ್ನು 'ಹರಿಜನ' ಪುರವಣಿಯಾಗಿ ಪ್ರಕಟಿಸುತ್ತಿದ್ದ ಕರ್ಮವೀರ ಪತ್ರಿಕೆಯು ಮೇಲೆ ಹೇಳಿದಂಥ ಪ್ರಬಂಧಗಳ ವಿವಿಧ ಮಾದರಿಗಳನ್ನು ಕನ್ನಡಿಗರಿಗೆ ನೀಡಿತು. ಉಪಕ್ರಮ, ಉಪನ್ಯಾಸ, ಉಪಸಂಹಾರಗಳೆಂಬ ಅಂಗತ್ರಯದಿಂದ ಪ್ರಬಂಧದ ಬಂಧವನ್ನು ಲಕ್ಷಿಸಬಹುದಾದ ಮತ್ತು ಕಥನ–ವಿವರಣ–ವಿವೇಚನ ಸಮ್ಮಿಶ್ರವಾದ ಶೈಲಿಯನ್ನು ಹಿಡಿದ

ಪ್ರಬಂಧಗಳನ್ನು ಆ ಮಾದರಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ದೇಶಪ್ರೇಮ ಸ್ವಜನದಯೆ, ದಾಸ್ಯದ್ವೇಷ, ವಿದೇಶೀಯ ಭ್ರಷ್ಟಾಚಾರಗಳ ಬಗ್ಗೆ ಸಂತಾಪ, ಕ್ರೋಧ ಮತ್ತು ಪ್ರತಿಭಟನೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸುವ ಸ್ಫೂರ್ತಿ, ಉತ್ಸಾಹ, ಪ್ರಚೋದನೆ, ವೀರಾವೇಶ, ಸ್ವಾಭಿಮಾನ ಮುಂತಾದ ಭಾವನೆಗಳಿಂದ ವ್ಯಾಪ್ತವಾದ ರಸಪ್ರಧಾನ ಲಕ್ಷಣವೂ ಅಂದಿನ ಅನೇಕ ಪತ್ರಿಕಾ ಪ್ರಬಂಧಗಳಲ್ಲಿ ಕಂಡುಬಂದಿತು. ಈ ರಸಪ್ರಧಾನತೆಯು ಪರಂಪರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮತ್ತು ಜನಸಂಘದ ಮುಖಂಡರ ಲೇಖನ-ಭಾಷಣ ಗಳಲ್ಲಿ ಇಂದೂ ಕಾಣಬಹುದಾಗಿದೆ. ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ಸು ಜನತೆ ಯನ್ನು ಇದೇ ಪ್ರಕಾರವಾಗಿ ಮಾತನಾಡಿಸುತ್ತಿತ್ತು; ಆ ಮೂಲಕ ಅದರಿಂದ ದೇಶಕ್ಕಾಗಿ ತ್ಯಾಗಮಾಡಿಸುತ್ತಿತ್ತು. ಇಂದಿನ ಗಂಡಾಂತರ ಪರಿಸ್ಥಿತಿಯೂ ಹಾಗೇ ಪತ್ರಿಕೆಗಳಲ್ಲಿ ಅಂಥ ಅಪೀಲುಗಳ ಪ್ರಕಟನೆಗೆ ಕಾರಣವಾಗಿದೆ.

ಶ್ರೀಗಳಾದ ಆಲೂರು ವೆಂಕಟರಾಯರು, ದಿವಾಕರ ರಂಗರಾಯರು, ಸಿದ್ದವ್ವನ ಹಳ್ಳಿಯ ಕೃಷ್ಣಶರ್ಮರು ಮೊದಲಾದವರು ಬರೆದ ರಾಷ್ಟ್ರೀಯ ಕೃತಿ ಗಳು ಪುಸ್ತಕ ರೂಪದಲ್ಲಿ ಬಂದ ಪ್ರಬಂಧಗಳಿಗೆ ಕೆಲ ಮಾದರಿಗಳಾಗಿವೆ. ಈಗ ಗಾಂಧೀ ಸ್ಮಾರಕ ನಿಧಿಯ ಆಶ್ರಯದಲ್ಲಿ ಭಾಷಾಂತರಿತವಾಗಿ ಪ್ರಕಟವಾಗುತ್ತಿರುವ ಕೆಲ ಗದ್ಯ ಗ್ರಂಥಗಳೂ ಅಂಥ ಪ್ರಬಂಧಗಳೇ ಆಗಿವೆ. ಅವು ಕೇವಲ ವಸ್ತು ಕಥನಗಳಲ್ಲ; ತತ್ವ ವಿವೇಚನೆಗಳಲ್ಲ; ಸೂತ್ರ ರೂಪದಿಂದ ವ್ಯವಹಾರಗಳನ್ನು ಎಷ್ಟೋ ಮಟ್ಟಿಗೆ ತಿದ್ದಲು ಅವು ಸಹಕಾರಿಗಳಾದವು. ಶ್ರೀ. ವಿ. ಜಿ. ಭಟ್ಟರ ಬುರುಕಿಯು ಶುದ್ಧ ಪ್ರಬಂಧ ಸಂಗ್ರಹದ ಒಂದು ವಿಡಂಬನೆಯ ಕಲಾಚಾತುರ್ಯ ವುಳ್ಳ ಸ್ವರೂಪ. ಆದರೆ ಅದೆಷ್ಟು ಜನಪ್ರಿಯವಾಗಿದೆ? ಅದು ಮೂಲೆಗುಂಪಾ ಗಿರುವುದು ಉತ್ತಮ ಪ್ರಬಂಧದ ಬೆಳವಣಿಗೆಗೆ ಕರ್ನಾಟಕದ ಸಂಸ್ಕೃತಿಯಲ್ಲೀಗ ಅನುಕೂಲ ಅವಕಾಶವಿಲ್ಲವೆಂಬುದಕ್ಕೆ ಪ್ರಮಾಣ.

ಪತ್ರಿಕಾ ಪ್ರಪಂಚವೇನೋ ಈಗಲೂ ಮೊದಲಿನ ಪ್ರಬಂಧಸೇವೆಯನ್ನು ಸಲ್ಲಿಸುತ್ತ ಸಾಗಿದೆ. ಆದರೆ ಅಂದಿನ ವಾಗ್ಮಿಗಳು ಹೇಗೆ ಇಂದಿಲ್ಲವೋ ಹಾಗೇ ಅಂದಿನ ರುಚಿ, ವೀರ್ಯವತ್ತೆ, ಇಂದಿನ ಪ್ರಬಂಧಗಳಲ್ಲಿ ಸಾಕಷ್ಟಿಲ್ಲವಾಗಿದೆ. ಪ್ರಬಂಧ ಸಾಹಿತ್ಯವು ಪ್ರಬುದ್ಧ ಜೀವನದಿಂದ ಹೊರಹೊಮ್ಮಬೇಕು. ಜೀವನದಲ್ಲಿ ಪ್ರಬುದ್ಧತೆ ಬೆಳೆಯಲು ವಿರುದ್ಧವಾದ ಆಡಳಿತ ಧೋರಣೆ ಗಣ್ಯಸ್ಥಳಗಳಲ್ಲಿರುವು ದಕ್ಕೆ ಕೆಲ ಹೈಕೋರ್ಟು ರಿಟ್ಟುಗಳಲ್ಲಿ ಸರಕಾರಗಳು ಸೋತುದು ಉದಾಹರಣೆ. ನ್ಯಾಯವಾದಿಗಳಿಗೆ ರಾಜಕೀಯೇತರ ವ್ಯವಹಾರಗಳಲ್ಲೂ ಸ್ಥಾನವಿಲ್ಲದಂತಾಗುತ್ತ

ಹೋಗಿರುವುದು ವಿಷಾದಕರ. ಯಾಂತ್ರಿಕವಾದ “His Master's Voice ಒಡೆಯನ ಮತ ತನ್ನ ಮತ” ಎಂಬ ದಾಸಬುದ್ಧಿಯ ವಿರುದ್ಧ ಹೋರಾಡುವ ಮೇಧಾವಿತ್ವ, ವೀರವತ್ತೆ. ನಮ್ಮ ತರುಣ ಜನಾಂಗದಲ್ಲಿ ಒಡಮೂಡಿದರೆ ಮಾತ್ರ ಜೀವನಕ್ಕೂ ಸಾಹಿತ್ಯಕ್ಕೂ ಮಹದುಪಕಾರವಾಗಬಹುದು. ಇಂದಿನ Emergency ಆಪತ್ಕಾಲದಲ್ಲಾದರೂ ಈ ಅರಿವು ಮೂಡೀತೇ ?

ಲಲಿತಸಾಹಿತ್ಯ ಮತ್ತು ಮಹಾಕಲ್ಪನೆಗಳು

ಇಂದಿನ ಮನಃಶಾಸ್ತ್ರವು ಮಾನವನ ಪ್ರಜ್ಞೆಯು ಅಜ್ಞಾತ ಪ್ರಜ್ಞಾಸ್ತರದಿಂದ ಆರಂಭವಾಗಿ ಜ್ಞಾತಪ್ರಜ್ಞಾಸ್ತರದಲ್ಲಿ ಕೊನೆಗೊಳ್ಳುತ್ತದೆ ಎಂದು ಸಿದ್ಧಾಂತಿಸಿದೆ. ಈ ಅಜ್ಞಾತ ಪ್ರಜ್ಞೆಯ ಚಟುವಟಿಕೆಗಳು ಅಜ್ಞಾತ; ಆದರೆ ಅವುಗಳ ಪರಿಣಾಮಗಳು ಮಾನವನ ವ್ಯಕ್ತಿತ್ವದ ಮೇಲೆ ಆಗುವದನ್ನು ಮನಃಶಾಸ್ತ್ರಿಗಳು ಗುರುತಿಸಿದ್ದಾರೆ. ಇತರರಂತೆ ಸಾಹಿತ್ಯ ಕಲಾವಿದನೂ ಒಬ್ಬ ವ್ಯಕ್ತಿ: ಅವನಿಗೊಂದು ವಿಶಿಷ್ಟ ವ್ಯಕ್ತಿತ್ವವಿದೆ. ಆ ವ್ಯಕ್ತಿತ್ವಕ್ಕೊಂದು ಮನಃಪ್ರವೃತ್ತಿಯಿದೆ, ಚಾರಿತ್ರ್ಯವಿದೆ. ಅವು ಅವನ ಜ್ಞಾತಾಜ್ಞಾತ ಪ್ರಜ್ಞೆಗಳ ಸಂಯುಕ್ತ ಪ್ರಯತ್ನದ ಫಲಗಳು. ಅಜ್ಞಾತ ಪ್ರಜ್ಞೆಯು ಮಾನವನ ಕುಲ ಸಂಸ್ಕಾರದ ಆಕರ. ಅವನ ಎಚ್ಚತ್ತ ಅಥವಾ ಜ್ಞಾತ ವ್ಯಕ್ತಿತ್ವಾಂಶಕ್ಕೆ ಅವನ ಕುಲದ ಅನುಭವಗಳ ಸಾರಭೂತವಾದ ಸುಪ್ತಸಂಸ್ಕಾರವು ಅಜ್ಞಾತ. ಅದು ಪ್ರಜ್ಞೆಯಲ್ಲಿ ಅಡಗಿದ್ದು ಕೊರತೆ ತುಂಬಿಕೊಡುತ್ತಿರುತ್ತದೆ. ಒಬ್ಬನಲ್ಲಿ ಅಂತರ್ಮುಖತೆ ಗಣ್ಯವಾಗಿರಬಹುದು. ಇನ್ನೊಬ್ಬನಲ್ಲಿ ಬಹಿರ್ಮುಖತೆ ಎದ್ದು ಕಾಣುತ್ತಿರಬಹುದು. ಅಸಾಮಾಜಿಕ ಸ್ವಭಾವದ ಅಂತರ್ಮುಖನು ಒಮ್ಮೆ ಸುತ್ತಲಿನ ಜೀವನದಿಂದ ಅನುಭವವನ್ನು ಗ್ರಹಿಸಿದರೂ ಅದನ್ನು ತನ್ನ ವೈಯಕ್ತಿಕ ಸುಖ–ದುಃಖಗಳ ಅಗ್ರಪಂಕ್ತಿಗೆ ಒನ್ನೆಲೆಯನ್ನಾಗಿ ಮಾಡುತ್ತಾನೆ; ಅದರ ಸಾಮಾನ್ಯತೆಯನ್ನು ಸ್ವಕೀಯವಾದ ವಿಶೇಷತ್ವಕ್ಕೆ ಇಳಿಸುತ್ತಾನೆ. ತನ್ನ ದೇಹಾತ್ಮ ಭಾವಗಳ ಬಿತ್ತದೆಮಾರು ಅದನ್ನು ಗೌಣವನ್ನಾಗಿ ಇರಿಸಿಕೊಳ್ಳುತ್ತಾನೆ. ಸಾಮಾಜಿಕ ಸಾಹಿತಿಯು ತದ್ವಿರುದ್ಧ ಪ್ರವೃತ್ತಿಯುಳ್ಳವನು: ತನ್ನಲ್ಲಿ ಜನರನ್ನು ಅಂತರ್ಗತ ಮಾಡಿಕೊಳ್ಳುವದರ ಬದಲು ತಾನೇ ಜನಾಂತರ್ಗತನಾಗುತ್ತಾನೆ! ಅವರ ಅವ್ಯಕ್ತ ಸುಖ–ದುಃಖಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗುತ್ತಾನೆ: ತಾನೇ ಅವರೆನ್ನದೆ. ಅವರೇ ತಾನೆನ್ನುತ್ತಾನೆ—ತನ್ನ ಮನಃಪ್ರಪಂಚದಲ್ಲಿ.

ಸಾಮಾಜಿಕ ಸಾಹಿತಿಯ ಹೃದಯವನ್ನು ಜನಾಂದೋಲನದಿಂದ ಹುಟ್ಟಿದ ಮಹಾಕಲ್ಪನೆ ಆಕ್ರಮಿಸಿಕೊಳ್ಳುವದು ಸ್ವಾಭಾವಿಕ. ಸ್ವಾತಂತ್ರ್ಯ, ಸಮಾನತೆ. ಸೋದರತೆ, ಸಮಾಜವಾದ. ಪ್ರಜಾಪ್ರಭುತ್ವ. ಅಸ್ಪೃಶ್ಯತಾ ನಿವಾರಣೆಯ ತತ್ವ. ಜಾತೀಯತೆಯಿಂದ ವಿಮುಕ್ತತೆ. ನಿಷ್ಕ್ರಿಯ ಪ್ರತೀಕಾರಧರ್ಮ. ಗುಲಾಮರ ವಿಮೋಚನೆಯ ನೀತಿ. ರಾಷ್ಟ್ರೀಯತೆ. ಅಹಿಂಸೆ. ಸತ್ಯ ಮುಂತಾದವು ಈಗ 30–40 ವರ್ಷಗಳಿಂದ ಭಾರತದಲ್ಲಿ ಪ್ರಚುರವಾಗಿರುವ ಮಹಾಕಲ್ಪನೆಗಳು. ಇವುಗಳಲ್ಲಿ

ಒಂದಲ್ಲ ಒಂದು ಕಲ್ಪನೆ ನಮ್ಮ ಗಣ್ಯ ಸಾಹಿತಿಗಳ ಮನಸ್ಸನ್ನು ಸೂರೆಗೊಂಡದ್ದು ಸುವಿದಿತ; ಅವರ ಕೃತಿಗಳಲ್ಲಿವನ್ನು ಗುರುತಿಸಬಹುದು: ಇತರ ದೇಶಗಳಲ್ಲೂ ಇಂಥ ಉದಾಹರಣೆಗಳು ಸಿಗುತ್ತವೆ.

ಮಹಾ ಕಲ್ಪನೆಗಳು ಜನಜೀವನದಲ್ಲಿ ಸಾಮರಸ್ಯ ಹೊಂದುವ ಪ್ರಧಾನ ಮನೋಧರ್ಮವುಳ್ಳ ಸಾಹಿತಿಯ ಹೃದಯದ ಮತ್ತು ಬುದ್ಧಿಯ ಸಂಯುಕ್ತ ಪ್ರಯತ್ನದ ಶಕ್ತಿಯು ಎಷ್ಟರ ಮಟ್ಟಿಗಿದೆಯೋ ಅಷ್ಟರ ಮಟ್ಟಿಗೆ ಅವನ ಮೇಲೆ ಪ್ರಭಾವ ಬೀರಬಲ್ಲವು. ಅಂಥ ಶಕ್ತಿಯು ಸ್ವಭಾವ–ಅಭ್ಯಾಸಗಳನ್ನವಲಂಬಿಸಿದೆ. ಪರಾನುಭವಗ್ರಹಣದ ಕುತೂಹಲ ಮತ್ತು ಶಕ್ತಿಗಳು ಹೆಚ್ಚಿದ್ದಷ್ಟೂ ಅವು ಅವನ ಮನದ ಮೇಲೆ ಹೆಚ್ಚು ಪರಿಣಾಮ ಮಾಡುತ್ತವೆ. ಆದುದರಿಂದ ಪ್ರತಿಯೊಬ್ಬ ಸಾಹಿತಿಯ ಮೇಲೂ ಅಂಥ ಕಲ್ಪನೆಗಳು ಪರಿಣಾಮವನ್ನುಂಟುಮಾಡಲೂ ಅರವು, ಮಾಡಿದರೂ ಏಕಪ್ರಮಾಣದ ಪರಿಣಾಮವು ಪ್ರತಿಯೊಬ್ಬನ ಮೇಲೂ ಆದೀತೆಂಬುದು ಸುಳ್ಳು. ಇಷ್ಟಲ್ಲದೆ, ಮಹಾಕಲ್ಪನೆಯೊಂದರ ಪ್ರಭಾವಕ್ಕೊಳಗಾದ ಸಾಹಿತಿಯೊಬ್ಬನು ಅದಕ್ಕೆ ಸಾಹಿತ್ಯಿಕ ಮಾರ್ಗವನ್ನುಳಿದು ಜೀವನದ ಇತರ ಮಾರ್ಗಗಳಿಂದ ಪ್ರತಿಕ್ರಿಯೆಯನ್ನೂ ಒಮ್ಮೆ ಮಾಡುವ ಸಂಭವವಿದೆ. ಸಾಹಿತ್ಯಿಕ ಮಾರ್ಗವನ್ನೊಮ್ಮೆ ಹಿಡಿದರೆ, ಅವನು ರಚಿಸುವ ಕೃತಿಯ ಸಾಮರ್ಥ್ಯವನ್ನು ನಿರ್ಣಯಿಸುವದರಲ್ಲಿ ಮಹಾಕಲ್ಪನೆಯೊಂದನ್ನು ಗ್ರಹಿಸಿ ರಸಾವೇಶ ರೂಪಕ್ಕೆ ಪರಿವರ್ತಿಸಿಕೊಳ್ಳುವದರಲ್ಲಿ ಕಾರಣವಾಗುವ ಅವನ ಅಂತಃಕರಣದ ಬಹಿಃಪ್ರೇರ್ಯತೆಯ ಶಕ್ತಿಯು ಪ್ರಧಾನ ನಿಕಷವಾಗುತ್ತದೆ ಎಂಬುದನ್ನು ಅವನು ಚೆನ್ನಾಗಿ ಬಲ್ಲ. ಮಹಾ ಕಲ್ಪನೆಯು ಬಹಿಃಪ್ರೇರಣೆಯಿಂದ ಸ್ಫೂರ್ತವಾದ ಪ್ರತಿಭೆ ಸಾಹಿತಿಗೆ ಅಂತಃಪ್ರೇರಣೆ ಕೊಟ್ಟು ಅವನ ಸದಭ್ಯಾಸ ಸಿದ್ಧವಾದ ಸಾಹಿತ್ಯೋಪಕರಣಗಳ ಬಳಕೆಯ ಶಕ್ತಿಗೆ ಚಾಲನೆ ಕೊಟ್ಟು, ಆ ಮೂಲಕ ಮಹಾಕಲ್ಪನಾಗರ್ಭಿತವಾದ ಕೃತಿಯನ್ನು ಹಡೆಯುತ್ತದೆ. ರಸಾವೇಶರೂಪಕ್ಕೆ ಚೆನ್ನಾಗಿ ಪರಿವರ್ತಿಸಲ್ಪಡದ ಮಹಾಕಲ್ಪನೆಯು ಕೃತಿಯೊಂದರ ನೀರಸತೆಗೆ ಕಾರಣವಾಗುತ್ತದೆ; ಅದರ ಸಂವಿಧಾನವು ಕುತೂಹಲಕಾರಿಯಾಗದು, ಅದರ ಪಾತ್ರವರ್ಗವು ಸಜೀವವೆನ್ನಿಸದು, ಅದರ ರಸೋದ್ಬೋಧ ಶಕ್ತಿಯು ಅತ್ಯಲ್ಪವಾದೀತಲ್ಲದೆ ತಕ್ಕಷ್ಟಿರಲಾರದು. “ಅಜೀರ್ಣೇ ಭೋಜನಂ ವಿಷಂ” ಎಂಬಂತೆ ಮಹಾ ಕಲ್ಪನೆಯನ್ನು ಸರ್ವ ಭಾವದಿಂದ ಭಾವನಾ ಸಾಮರಸ್ಯ ಮಾಡಿಕೊಳ್ಳದೆ, ಸಾಹಿತ್ಯ ಕಲೆಗಾರಿಕೆಯ ಕಸರತ್ತನ್ನು ಎಷ್ಟೇ ತೋರಿದರೂ ಅಂಥ ಸಾಹಿತಿಯ ಕೃತಿಯು ವಿದಗ್ಧರ ರಸಾನಂದಕ್ಕೆ ಕಾರಣವಾಗಲಾರದು.

ಸಾಮಾನ್ಯ ಲೌಕಿಕ ರಸಾನಂದವು ಸರ್ವಸಾಧಾರಣವಾದ ಲೌಕಿಕ ಕಾರಣಗಳಿಂದ ಲಭ್ಯವಾದರೆ. ಕಲಾಪ್ರಪಂಚದ ವಿಶಿಷ್ಟ ರಸಾನಂದವು ಸಾಹಿತ್ಯಾದಿ ವಿಶಿಷ್ಟ ಕಲಾಸಾಧನಗಳಿಂದ ಲಭ್ಯ–ಎನ್ನುವುದು ಲೋಕಪ್ರಸಿದ್ಧ. ಸಾಹಿತ್ಯದ ಕಲೆಗಾರಿಕೆಯು ಅಪೂರ್ಣವಾಗಿರುವ ಕೃತಿಯು ತನ್ನ ಅನೌಚಿತ್ಯ ದೋಷದ ಮೂಲಕ ರಸೋದ್ಬೋಧದಲ್ಲಿ ಸಾಕಷ್ಟು ಸಮರ್ಥವಾಗದು. ಸಾಹಿತ್ಯ ಕಲೆಗೆ ಪ್ರತಿಭೆ. ನೈಪುಣ್ಯ ಮತ್ತು ಅಭ್ಯಾಸಗಳೆಂಬ ಮೂರು ಅಂಗಗಳಿವೆ. ಈ ಮೂರೂ ಅಂಗಗಳ ಪರಿಪೂರ್ಣತೆ ಯಾವನಲ್ಲಿದೆಯೋ ಅವನೇ ಮಹಾಸಾಹಿತಿ. ಅವನೊಬ್ಬನೇ ಮಹಾಕೃತಿಯನ್ನು ರಚಿಸಬಲ್ಲ. ಅಂಥವನು ಸಾಮಾಜಿಕ ಶೀಲನಾಗಿ ಮಹಾಜನರೆತ್ತಿಹಿಡಿಯುವ ಮಹಾಕಲ್ಪನೆಯೊಂದರ ಸಮರ್ಥ ಸಂಪರ್ಕವನ್ನು ಪಡೆದರೆ ಅವನ ಮಹಾಕೃತಿಯು ಮಹಾಕಲ್ಪನಾಗರ್ಭಿತವಾದೀತು. ಸಾಹಿತ್ಯ ರೂಪದಲ್ಲಿ ಪರಿಪೂರ್ಣತೆ ಪಡೆಯದ ಯಾವ ಕೃತಿಯೂ ತನ್ನ ಗರ್ಭಸ್ಥವಾದ ಮಹಾಕಲ್ಪನೆಯೊಂದರ ಬಲವೊಂದರಿಂದಲೇ ವಿದಗ್ಧರನ್ನು ಮೆಚ್ಚಿಸಲಾರದು: ಮಹಾ ಸಾಹಿತ್ಯ ಕೃತಿಯೆಂದು ಅವರಿಂದ ಹೇಳಿಸಿಕೊಳ್ಳಲಾರದು. ವಿದಗ್ಧರೊಮ್ಮೆ ಅದನ್ನು ಮೆಚ್ಚಿದರೆ ಅದರಲ್ಲಿಯ ಮಹಾಕಲ್ಪನೆಗಾಗಿ ಅಲ್ಲದೆ. ಅಂಥ ಕೃತಿಯ ಸಾಹಿತ್ಯ ರೂಪಕ್ಕಾಗಿ ಅಲ್ಲ.

ಸಾಹಿತ್ಯವು ಮಾನವರ ಅವಸ್ಥೆಗಳ ಕಲಾತ್ಮಕ ಶಬ್ದಾನುಕರಣವು ಜೀವನದ ವಿವಿಧ ಅವಸ್ಥೆಗಳಲ್ಲಿ ರಸದೃಷ್ಟಿಯಿಂದ ಅಗತ್ಯವೆನಿಸುವ ಅಂಶಗಳಷ್ಟನ್ನೇ ಆಯ್ದುಕೊಂಡು. ಕೊರತೆ ಬೀಳುವ ಅವಶ್ಯಾಂಶಗಳನ್ನು ತನ್ನ ಕಲ್ಪನಾಶಕ್ತಿಯಿಂದ ಏಕಾಏಕಿ ತುಂಬಿಸಿಕೊಂಡು. ವಾಕ್ಯರೂಪದಲ್ಲಿ ಸಮನ್ವಿತ ಕೃತಿಯನ್ನಾಗಿ ರೂಪಿಸಿಡುವ ಕಲಾಕೌಶಲದ ಆತ್ಮವೇ ಸಾಹಿತ್ಯ ಪ್ರತಿಭೆ. ಮಹಾಕಲ್ಪನೆಗಳು ಮಾನವ ಮನದ ಮಹಾವಸ್ಥೆಗಳ ಸಾರಭೂತ ಅಂಶಗಳು. ಅವು ಸ್ವರೂಪತಃ ಬೌದ್ಧಿಕ ಅಥವಾ ನೈತಿಕ ಎನ್ನಿಸಿರುತ್ತವೆ. ಅವನ್ನು ಸಾಹಿತಿಯ ರಸಾವೇಶವು ಲೋಕೋತ್ತರವಾದ ಕಲಾಭಾವನೆಯ ಸಂಪುಟದಲ್ಲಿ ಸಮನ್ವಯ ಮಾರ್ಗದಿಂದ ತುಂಬಿಟ್ಟು. ವಿಶಿಷ್ಟ ಪದ ಸಂಘಟನೆಯ ರೂಪದಲ್ಲಿರುವ ರೀತಿ ಅಥವಾ ಶೈಲಿ ಎಂಬ ಆಕೃತಿ ರಚನಾ ತಂತ್ರದ ಮೂಲಕ ಸಾಹಿತ್ಯ ಕೃತಿಯನ್ನಾಗಿ ಮಾಡಿ ನಮ್ಮೆದುರಿಡುತ್ತದೆ. ಸಾಹಿತಿಯ ರಸಾವೇಶವೇ ಸಾಹಿತ್ಯ ಶಕ್ತಿಯ ಗಂಗಾಮೂಲ. ರಸಾವೇಶದ ಬಲವಿಲ್ಲದೆ ರಚಿಸಿದ ಎಲ್ಲ ಕೃತಿಗಳೂ ವಿವಿಧ ಪ್ರಮಾಣಗಳಲ್ಲಿ ಶುಷ್ಕವೆನ್ನಿಸುತ್ತವೆ.

ಪ್ರತಿಭೆಯನ್ನು ನವ ನವ ಉನ್ಮೇಷ ಶಾಲಿಯಾದ ಪ್ರಜ್ಞೆ ಎಂದು ಹೇಳಲಾಗಿದೆ. ಕಲೆಗಾರಿಕೆಯ ಮೂಲ ಶಕ್ತಿಯಿದು. ಶಾಸ್ತ್ರೀಯ ಅಥವಾ ವೈಜ್ಞಾನಿಕ

ಶೋಧನೆಯಲ್ಲಿ ನವ ಭಾವದ ಉನ್ಮೇಷ ಇಲ್ಲವೆ ಸ್ಫುರಣ ಇದ್ದರೂ ಮೈಲುಗಲ್ಲುಗಳಷ್ಟು ದೂರವಾಗಿ ಅಲ್ಲದೆ, ಫರ್ಲಾಂಗು ಕಲ್ಲುಗಳಷ್ಟು ನಿಬಿಡವಾಗಿ ಅಲ್ಲ. ಆದುದರಿಂದ ಕಲೆಗೂ ಪ್ರತಿಭೆಗೂ ಇರುವಷ್ಟು ನಿಕಟ ಸಂಬಂಧವು ಶಾಸ್ತ್ರಕ್ಕೂ ಪ್ರತಿಭೆಗೂ ಇಲ್ಲ. ಮಾನವನ ಅಜ್ಞಾತ ಪ್ರಜ್ಞಾಸ್ತರದಲ್ಲಿ ಆಗಲೇ ಅಡಕವಾಗಿರದ ಅಲ್ಪ ಮಹಾಕಲ್ಪನೆಗಳಾವವೂ ವಿಶ್ವದಲ್ಲಿಲ್ಲ. ಆದುದರಿಂದ ಎಲ್ಲ ಹೊಸ ಕಲ್ಪನೆಗಳನ್ನೂ ಮೊದಲಿದ್ದು. ಬಳಿಕ ಮರೆತು. ಆನಂತರ ನೆನಪು ಮಾಡಿಕೊಂಡ ಕಲ್ಪನೆಗಳಿಗೆ ಹೋಲಿಸಬಹುದು. ಸ್ಥಾಯಿ ಭಾವವು ಹೇಗೆ ಮೊದಲೇ ಸಹೃದಯನ ಮನದಲ್ಲಿ ಅಡಗಿದ್ದು. ಅನಂತರ ಕಲಾಕೃತಿಯ ಪ್ರೇರಣೆಯಿಂದ ರಸವಾಗಿ ಪ್ರಕಾಶಿಸುವದೋ ಹಾಗೇ ತನ್ನ ಅಥವಾ ಇತರರ ಜೀವನದ ಪ್ರೇರಣೆಯಿಂದ ಅಲ್ಪ ಅಥವಾ ಮಹತ್ವದ್ದೆನಿಸುವ ಕಲ್ಪನೆಯು ಸಾಹಿತಿಯ ಜ್ಞಾತಪ್ರಜ್ಞೆಯಲ್ಲಿದ್ದು ಅವನ ಪ್ರತಿಭೆಗೆ ವಸ್ತುವಾಗುತ್ತದೆ. ಪ್ರತಿಭೆಯಾವರೂ ಹಾಗೇ ಸಾಹಿತಿಯ ಜ್ಞಾತಪ್ರಜ್ಞೆಯನ್ನಾವರಿಸಿದ ಕಲ್ಪನೆಯೊಂದಕ್ಕೆ ಆಕರ್ಷಕವಾದ ನವಸ್ವರೂಪ ಒಂದನ್ನು ಅವನ ಅಜ್ಞಾತ ಪ್ರಜ್ಞೆಯಿಂದಲೇ ಪಡೆದು ಅನ್ವಯಿಸುತ್ತದೆ. ಜೀವನದ ನವಭಾವದಿಂದ ಸಾಹಿತ್ಯದ ನವಭಾವ ಅಥವಾ ನವರೂಪವು ಈ ಪ್ರಕಾರವಾಗಿ ಭಿನ್ನವಾಗಿರುತ್ತದೆ. ವಿಜ್ಞಾನಿಗೆ ಸ್ಫುರಣವಾಗುವದು ಅಥವಾ ತಿಳಿದುಬರುವದು ಒಂದು ಜ್ಞಾನದ ಅಥವಾ ಕಲ್ಪನೆಯ ತತ್ವ ಮಾತ್ರ: ತತ್ವವಷ್ಟೇ ಸಾಹಿತಿಯ ಪ್ರಾತಿಭದರ್ಶನವಲ್ಲ ಆಹ್ಲಾದಕರವಾದ ಸ್ವರೂಪದೊಡನೆಯೇ ಅಂಥ ತತ್ವವು ಮೂಡಿರುತ್ತದೆ. ವಿಜ್ಞಾನಿಯ ತತ್ವಕ್ಕೆ, ಸತ್ಯಕ್ಕೆ ಅಥವಾ ಸತ್ವಕ್ಕೆ ತಾಂತ್ರಿಕ ಸ್ವರೂಪವಿದ್ದರೆ—ಸಾಮಾನ್ಯ ಲೌಕಿಕನ ತತ್ವಕ್ಕೆ, ಅಭಿಪ್ರಾಯಕ್ಕೆ ಅಥವಾ ಸತ್ಯ ಸಾಕ್ಷಾತ್ಕಾರಕ್ಕೆ ಲೌಕಿಕ ಭಾವನಾತ್ಮಕವಾದ ಸ್ವರೂಪವಿರುತ್ತದೆ. ಕವಿಯ ಅಥವಾ ಸಾಹಿತಿಯ ಸತ್ಯಕ್ಕೆ ಲೋಕೋತ್ತರವಾದ ಆನಂದ ಸ್ವರೂಪವಿರುತ್ತದೆ. ಲೋಕೋತ್ತರತೆ ಅಲೌಕಿಕವಲ್ಲ: ಲೌಕಿಕವೂ ಅಲ್ಲ. ಲೌಕಿಕವಾದ ಕ್ರೀಡೆಯೊಂದರಿಂದ ಹುಟ್ಟುವ ಆನಂದಕ್ಕೆ ಸದೃಶ. ಆದರೆ ಭಿನ್ನ ಎನ್ನಿಸುವ ಆನಂದಕ್ಕೆ ಅಥವಾ ರಸಕ್ಕೆ ಮಾತ್ರ ಲೋಕೋತ್ತರತೆ ಇದೆ.

ಸುತ್ತಲಿಂದ ಬರುವ ಮಹಾಕಲ್ಪನೆಗಳಿಂದ ಕ್ಷುಬ್ಧನಾಗದ ಸಾಹಿತಿಯ ಕೃತಿಯಲ್ಲಿ ಅವುಗಳ ಪರಿಣಾಮವನ್ನು ಕಾಣಲು ಸಾಧ್ಯವಿಲ್ಲ. ಪ್ರತಿಭೆಯಿಲ್ಲದವನು ಸಾಹಿತಿಯಾಗಲಾರ. ರಸಿಕರಲ್ಲಿ ಕ್ರೀಡಾರಸ ಸದೃಶವಾದ ರಸವನ್ನು ಉದ್ಬೋಧಿಸದ ಕೃತಿಯನ್ನು ಸಾಹಿತ್ಯ ಕೃತಿ ಎಂದು ಹೇಳಲು ಬರುವದಿಲ್ಲ. ಕವಿಯಲ್ಲಿ ಹೇಗೋ ಹಾಗೇ ರಸಿಕನಲ್ಲೂ ಆತನ ಅಜ್ಞಾತ ಪ್ರಜ್ಞೆಯಲ್ಲಿ ಸತ್ಯದ

ವಿಜ್ಞಾನ ಸಹಜ ನಗ್ನ ರೂಪವೂ, ಲೋಕಸಹಜ ಸುಖ-ದುಃಖಮಯ ರೂಪವೂ ಕಲಾ ಸಹಜವಾದ ರಸರೂಪವೂ ಅಡಕವಾಗಿರುತ್ತವೆ. ಸಾಹಿತ್ಯ ಕೃತಿಯು ಅವರ ರಸರೂಪವನ್ನಷ್ಟೇ ಉದ್ಬೋಧಿಸುತ್ತದೆ. ಎಲ್ಲ ಕಲ್ಪನೆಗಳಿಗೂ ಮೂಲಭೂತವಾದ ಸತ್ಯತೆಯೊಂದಿದೆ. ಎಚ್. ಜಿ. ವೆಲ್ಸರ ಪ್ರತಿಭೆಯ ಕೈಯಲ್ಲಿ ಸಿಕ್ಕಿದ ವೈಜ್ಞಾನಿಕ ಕಲ್ಪನೆಗಳು "The Invisible Man ಅದೃಶ್ಯ ಮನುಷ್ಯ" ಮತ್ತು "War of the Worlds ಪ್ರಪಂಚಗಳ ನಡುವಣ ಕಾಳಗ" ಎಂಬೆರಡು ಸಾಹಿತ್ಯ ಕೃತಿಗಳ ಮೂಲಕ ಪ್ರಕಟವಾದದ್ದು ಈ ಸಂದರ್ಭದಲ್ಲಿ ಗಮನಾರ್ಹ.

ಇನ್ನು ಮಹಾಕಲ್ಪನೆಗಳನ್ನು ರಸವತ್ಕಾವ್ಯರೂಪಕ್ಕೆ ತಿರುಗಿಸುವ ಪ್ರತಿಭೆಯ ಕಾವ್ಯ ವಿವರಗಳ ಸ್ಥೂಲ ಚಿಹ್ನೆಗಳ ಬಗ್ಗೆ ಹೇಳ ಹೊರಟ ವಿಮರ್ಶಕರು ವಸ್ತು, ಪಾತ್ರ, ರಸಗಳತ್ತ ಬೊಟ್ಟುಮಾಡಿ ತೋರಿಸಿದ್ದಾರೆ. ನಾಟಕ-ಕಾದಂಬರಿ-ಕಥನ-ಕವನಗಳಲ್ಲಿವನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಬಹುದು. ಅವರ ಕಲೆಯು ಅಥವಾ ಕೌಶಲದ ಸ್ವರೂಪವಾದರೋ ಮಾಯಾ ಸದೃಶ ಎನಿಸುವ ವಿಶಿಷ್ಟ ಮಾನಸವ್ಯಾಪಾರ. ಉತ್ತಮವಾದ ಸಾಹಿತ್ಯ ಕೃತಿಗಳೆಲ್ಲವನ್ನೂ "ಇಂದ್ರಜಾಲದಿಂದ ಬಂದ ಸುಂದರಿಯರು" ಎಂದಿಷ್ಟೇ ಹೇಳಬಹುದಲ್ಲದೆ. ಅವುಗಳಲ್ಲಿಯ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳನ್ನು ಸಂಯೋಜಿಸುವ ಕೌಶಲದ ಪ್ರತಿಯೊಂದು ಸೂಕ್ಷ್ಮತಮ ಅಂಗವನ್ನೂ ನಿರ್ದೇಶಿಸಿ ಲಕ್ಷಣಿಸಲು ಸರಸ್ವತಿಗೂ ಸಾಧ್ಯವಿಲ್ಲ. ಅದು ಬೆಲ್ಲ, ಹಾಲು ಮತ್ತು ಕಬ್ಬಿನ ಹಾಲುಗಳಲ್ಲಿ ಕಂಡುಬರುವ ಮಾಧುರ್ಯದ ವ್ಯತ್ಯಾಸಗಳನ್ನು ಹೇಳುವಷ್ಟೇ ಕಷ್ಟ. ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯಗಳೆನ್ನಿಸುವ ಅರ್ಥಗಳ ತರಂಗಿಣಿಯು ವಿಭಾವಾದಿಗಳ ಸಂಯೋಗವನ್ನೂ ಅಂಥ ಸಂಯೋಗದಿಂದ ರಚಿತವಾಗುವ ಕಾವ್ಯಾರ್ಥ ಎಂಬ ನೌಕೆಯನ್ನು ರಸೋದ್ಬೋಧಕ ಬಂದರಕ್ಕೆ ಮುಟ್ಟಿಸುವ ಕಾರ್ಯವನ್ನೂ ಮಾಡುವ ಕಲೆ ಮಾನಸ ಶಾಸ್ತ್ರೀಯವಾಗಿ ಅನಿರ್ವಚನೀಯ.

ನಾಲ್ಕು ಕಾದಂಬರಿಗಳ ವಿಹಂಗಮ ದರ್ಶನ

‘ಮರಳಿಮಣ್ಣಿಗೆ’ಯನ್ನು ‘ರಾಮಾಯಣ’ ಎನ್ನುವುದಕ್ಕಿಂತ ‘ಸೀತಾಯನ’ ಎನ್ನಬಹುದು—ಅದರ ರಸಮಾರ್ದವದ ದೃಷ್ಟಿಯಿಂದ. ಮೂರು ತಲೆಮಾರಿನ ಕೃಷಿಕ, ಕುಟುಂಬಗಳ, ವಿಶಿಷ್ಟ ಪ್ರಾದೇಶಿಕ ಹಿನ್ನೆಲೆಯುಳ್ಳ ಮಹಾ ಕಾದಂಬರಿ ಎನ್ನಿಸುವ ಈ ಗ್ರಂಥವು ಕೊಡುವ ಜೀವನ ಚಿತ್ರವು ಹೆಚ್ಚು ಸುಸಂಘಟಿತ, ‘ಏಕತಾನ ನಿಬದ್ಧ ಸ್ಫುಟ ಆಕಾರ ಸಂಪನ್ನ ಎನಿಸಿದೆ.’

ಹಳ್ಳಿಯೂರ ಜೀವನ, ಕಡಲಕರೆಯ ಬಾಳು, ಸಾಮಾನ್ಯ ಒಕ್ಕಲುತನದವರ ಬದುಕು—ಕಾದಂಬರಿಯ ವಸ್ತುವಾಗಿರುವುದರಿಂದ ಆ ಹೆಣ್ಣು-ಗಂಡುಗಳ, ಚಿಕ್ಕ ದೊಡ್ಡವರ ಆಸೆ-ಪಾಸೆ, ಕೊಡು-ಕೊಳು, ದಯಾ-ದಾಕ್ಷಿಣ್ಯ, ನಿರಾಶೆ-ಉದ್ವೇಗ, ಉತ್ಸಾಹ-ಔದ್ಧತ್ಯ, ಲಾಭ-ಹಾನಿ, ಸುಖ-ದುಃಖ, ಸವನೆ-ಸೋಲು ಮುಂತಾದ ಭಾವನೆಗಳು ಅತಿ ಸ್ಪಷ್ಟವಾಗಿ ವ್ಯಕ್ತವಾಗುವಂತಹ ಅಚ್ಚುಕಟ್ಟುತನವನ್ನು ಕಾರಂತರ ಸನ್ನಿವೇಶ ನಿರ್ಮಾಣ ಹಾಗೂ ಸಂವಾದಗಳಲ್ಲಿ ಕಾಣಬಹುದು.

ಕಾದಂಬರಿಯ ನಾಯಕ-ನಾಯಿಕೆಯರು unwept, unhonoured and unsung ಎಂಬಂತೆ ಜನ್ಮಜರಾಮೃತಿಯ ಚಕ್ರದಲ್ಲಿ ತಲೆಕೊಟ್ಟು ಸಾಗತಕ್ಕವರು. ಸಲಕ್ಷಣ ಸರ್ವಗಾತ್ರರಾದ ಅಂಥ ಪಾತ್ರಗಳ repetitive pattern ಚಕ್ರಾರ ಪಂಕ್ತಿಗತಿಯ ಭಾವ ಜೀವನಕ್ಕೆ—

‘ದಿನಯಾಮಿನ್ಯೌ ಸಾಯಂ ಪ್ರಾತಃ
ಶಿಶಿರಸವಸಂತೌ ಪುನರಾಯಾತಃ
ಕಾಲಃ ಕ್ರೀಡತಿ ಗಚ್ಛತ್ಯಾಯುಃ’

ಎಂಬುದು ತಕ್ಕ ಹಿನ್ನೆಲೆ-ಸಂಗೀತ. ಈ ಏಕತಾನದ ಗುರುತ್ವದಲ್ಲಿ ಒಂದು ವಿಧದ ಗಾಂಭೀರ್ಯ-ಮಾಧುರ್ಯಗಳಲ್ಲಿದೆ. ಅಂತರ್ವಾಹಿನಿಯಾಗಿ ಹರಿಯುವ ಆಳವಾದ, ಅವ್ಯಕ್ತಗತಿಯ tragic note ಅವಿದ್ಧ ಧ್ವನಿಯಿದೆ. ಈ ಗುಣದಿಂದಲೇ ಈ ಕಾದಂಬರಿಯು ಹೃದಯಸ್ಪರ್ಶಿಯಾಗಿದೆ.

ಕಾರಂತರ ಭಾಷೆ ಅರಬ್ಬೀಠಾಕಣ; ಹದ್ದಾರಿಯಲ್ಲಿ ಸೀದಾ ಅದು ನಿತವಾದ ಲಯದಿಂದ ಓಡುತ್ತದೆ. ಮುಗ್ಗರಿಸುವುದು ಅದಕ್ಕೆ ಗೊತ್ತಿಲ್ಲ. ಕಥಾವಸ್ತುವಿನ ಗಂಗಾಪ್ರವಾಹದ ಗತಿಗೂ ಭಾಷಾಶೈಲಿಯ ಸಮತೂಕದ ಮಂದ, ನಿಶ್ಚಿತ ಗತಿಗೂ ಒಳ್ಳೆಯ ಹೊಂದಿಕೆ ಇದೆ. ಒಂದು ರೂಪಕ ಮಾಡಿ, “ಮರಳಿಮಣ್ಣಿಗೆ” ಎಂಬುದೊಂದು ಕೃಷಿಕ ಅಥವಾ ಭಾರತೀಯ ಗ್ರಾಮೀಣ ಜೀವನದ ಆಧುನಿಕ

ಮಹಾಗೀತಕಾವ್ಯ ಎಂದು ಹೇಳಹೋದರೆ ಗ್ರಂಥದ ರಸಭಾರವತ್ತೆಯನ್ನು ಸೂಚಿಸಿದಂತಾದೀತು ಎನಿಸುತ್ತದೆ. ತನ್ನ ಕುತೂಹಲವನ್ನು ಕಥಾಭಾಗವು ಪದೇ ಪದೇ ಕೆಣಕಬೇಕೆಂಬ ಪ್ರತೀಕ್ಷೆ ಇದ್ದ ಓದುಗನಿಗಿಲ್ಲಿ ವಸ್ತು ಸಂವಿಧಾನವು ಸ್ವಲ್ಪ ಸಪ್ಪೆ ಎನಿಸೀತು. ಆದರೆ ಕಾವ್ಯಮಯ ಮನಸ್ಕರಿಗಿದು ಆಪ್ಯಾಯಮಾನ. ಅವರ ಪೂರ್ವಸಿದ್ಧ ಮನಃ ಪ್ರವೃತ್ತಿಗೆ ಸಹಿಷ್ಣುತೆ ಹೆಚ್ಚಾಗಿರುವುದರಿಂದ ವಸ್ತುವು ಎದುರಿಡುವ ಅತಿ ಪರಿಚಯದ ಹಿನ್ನೆಲೆಯೂ ದೂಷ್ಯವಾಗಿ ತೋರದು. ಆ ಪ್ರಾಕೃತಿಕ ಸೃಷ್ಟಿ ಪಥದಲ್ಲಿ ಹಾಯುವ ಜೀವನದ ಮೂಕ ಸಂಗೀತವು ಹೃದಯದ ಮೂಲವನ್ನೇ ಕಲಕುತ್ತದೆ.

‘ಇಜ್ಜೋಡು’ ಕಾದಂಬರಿ ರಾಜ್ಯದಲ್ಲಿ ಒಂದು ವಿಧದ ಮಹಾಭಾರತ ಎನ್ನಬಹುದು. ಯಾವ ದೃಷ್ಟಿಯಿಂದ? ಮಹತ್ವಾದ್ಭಾರವತ್ವಾಚ್ಚ ಮಹಾಭಾರತ ಮುಚ್ಯತೇ ಎನ್ನುವ ದೃಷ್ಟಿಯಲ್ಲಿ. ‘ಸಖಿ ನಮ್ಮ ಸಖ್ಯದ ಆಖ್ಯಾನ ಕಟು ಮಧುರ ವ್ಯಾಖ್ಯಾನವೊಡಗೂಡಿ ವಿವರಿಸಲೇ’ ಎಂಬುದು ಅದಕ್ಕೆ ಮಂಗಲ ಶ್ಲೋಕವಾಗಬಲ್ಲುದು. ‘ಉಪಖ್ಯಾನ’ಗಳು ಕೂಡಿದ್ದರಿಂದ ‘ಭಾರತ’ವು ‘ಮಹಾಭಾರತ’ವಾಯಿತಂತೆ. ಹಾಗಿದೆ ಇಜ್ಜೋಡಿನ ವಸ್ತುಸಂಗ್ರಹ.

ಭಾರತದ ಜನತೆಯ ಒಂದು ವಿಶಿಷ್ಟ ವಿಭಾಗದ ಸಾಮಾಜಿಕ ಸಂಸ್ಕೃತಿಯನ್ನು ಇಜ್ಜೋಡು ಪ್ರತಿಬಿಂಬಿಸುತ್ತದೆ. ಆದರೆ ಆ ಭಾಗವಾದರೋ ಬಹು ದೊಡ್ಡದು ಮತ್ತು ಸಾಕಷ್ಟು ವೈವಿಧ್ಯವುಳ್ಳದ್ದು. ಮಧ್ಯಮ ವರ್ಗಗಳಲ್ಲಿಯ ಕೆಲವರ ಜೀವನ ಚಿತ್ರಗಳ ಮಾದರಿಗಳಲ್ಲಿ ಜೀವಂತವಾಗಿ ಎದ್ದು ಕಾಣುತ್ತವೆ.

ಇಡಿ ಕೃತಿಯನ್ನೋದಿದಾಗ ‘ಇಜ್ಜೋಡಿ’ನಲ್ಲಿ ಒಂದು ವಿಧದ encyclopaedic ವಿಶ್ವಕೋಶ ರೂಪದ ಮನಸ್ಸು ಕಥಾಭಿತ್ತಿಯನ್ನು ಹೆಣೆಯಲು ನಿಂತದ್ದು ಗೋಚರವಾಗುತ್ತದೆ. ಕಥೆಯ ಓಟವು ಅನುಭವದ ಹೆದ್ದಾರಿಯ ಗಡಿಯನ್ನು ಎಲ್ಲೂ ಮೀರಿ ಅಡ್ಡ ಹರಿಯುವುದಿಲ್ಲ. ಮಾನವ ಜೀವಿಗಳಲ್ಲಿಯ ಕೆಲವು ಮಾದರಿಗಳ ಕ್ಷುದ್ರಾಕ್ಷುದ್ರ ಭಾವನೆ ಮತ್ತು ವಿಚಾರಗಳ ವಾಸ್ತವಿಕ ಪರಿಣಿತಗಳು ನಮ್ಮ ಕಣ್ಣಿಗೆ ಕಟ್ಟುತ್ತವೆ.

ಮಹಾಭಾರತದ ಹೆಸರನ್ನು ಮೊದಲು ಎತ್ತಿದ್ದು ‘ಇಜ್ಜೋಡಿ’ನ ಕಥಾವಸ್ತುವಿನ ಬೆಳವಣಿಗೆಗೂ ದಿಕ್ಸೂಚಿಯಾದೀತು. ಅಂದರೆ ವಸ್ತು ವಿಭಾಗಗಳ ಸಮನ್ವಯದಲ್ಲಿ ಲಂಬತೆಗೆ ಸಹಜವಾದ ಶೈಥಿಲ್ಯವಿದೆ ಎಂದು ಕೆಲ ಓದುಗರಿಗೆನಿಸೀತು.

ವಸ್ತು ನಿರೂಪಣೆಯು ಸರಳತೆಯಲ್ಲಿ ಗೋಕಾಕರು ಎತ್ತಿದ ಕೈ ಎನ್ನಬಹುದು. ಅದೆಲ್ಲಿಯೂ ಕುಂಟುವುದಿಲ್ಲ. ಪಾತ್ರ ಸ್ವಭಾವಗಳನ್ನು ಬಿಂಬಿಸಲು ತಕ್ಕ ಸನ್ನಿವೇಶ

ರಚನೆ ಮಾಡುವುವರಲ್ಲೂ ಅವರು ಔಚಿತ್ಯವನ್ನು ಚೆನ್ನಾಗಿ ಪಾಲಿಸಿದ್ದಾರೆ. ಆದರೆ ಪಾತ್ರಗಳ ವ್ಯಕ್ತಿತ್ವಗಳು ಸಹಜವಾಗಿರುವವಾದರೂ ಗ್ರಂಥದ ತೂಕಕ್ಕೆ ತಕ್ಕ ತೂಕವುಳ್ಳವು ಅಲ್ಲಿ ಸಾಕಷ್ಟು ಬಂದಿಲ್ಲ ಎಂದು ಕೆಲವರಿಗನ್ನಿಸಬಹುದು. ಬಿಡಿ ಬಿಡಿಯಾಗಿ ನೋಡಿದಾಗ 'ಇಜ್ಜೋಡು' ಬಹಳ 'ಸಾದಾ' ಆಗಿ ತೋರಿದರೂ ಇಡಿಯ ರಸಪರಿಣಾಮವು ಭಾರವುಳ್ಳದ್ದೆನಿಸುತ್ತದೆ. ಈ ದೃಷ್ಟಿಯಿಂದಲೂ ಅದ್ಯತನ ಭೂತಕಾಲದ ಜನಜೀವನದ ಇತಿಹಾಸದ ಒಂದು ಸಂಪುಟ ಎಂಬಂತಿರುವ ಲಕ್ಷಣದಿಂದಲೂ 'ಇಜ್ಜೋಡು' ಚಿರಸ್ಥಾಯಿತ್ವವುಳ್ಳದ್ದಾಗಿದೆ.

ಭಾಷಾ ಶೈಲಿಯು ಬಯಲು ಸೀಮೆಗೆ ಸಹಜವಾದುದಾಗಿದೆ. ವಿಶಿಷ್ಟ ವರ್ಣನಾ ವೈಖರಿಯು ಸಾಮಾನ್ಯ ಹೊಸ ಕನ್ನಡ ಕಾದಂಬರಿಗಳಲ್ಲಿ ಹೇಗೋ ಹಾಗೆ ಎದ್ದು ಕಾಣದು. ಶ್ರೀ ಅರವಿಂದರು ವ್ಯಾಸರ ಬಗ್ಗೆ ಹೇಳಿದ್ದಿಲ್ಲಿ ಸಾರ್ಥಕ: 'He religiously avoids overstress, his audacities of phrase are few and they have a restraint in their boldness:– ಎಂಬುದು ಗೋಕಾಕರ ಶೈಲಿಗೆ ಪ್ರಧಾನವಾಗಿ ಅನ್ವಯಿಸುತ್ತದೆ ಎನ್ನಬಹುದು. ಗೋಕಾಕರ ಗದ್ಯಶೈಲಿಯ ಸೌಂದರ್ಯವಿಲ್ಲಿ ಅವರ ಪದ್ಯಶೈಲಿಯ ಸೌಂದರ್ಯಕ್ಕಿಂತ ಹೆಚ್ಚು ಪರಿಣಾಮಕರವೋ ಏನೋ ಎಂಬಂತೆ ತೋರುವ ಭಾಗಗಳಿವೆ.

'ಕಾನೂರು ಸುಬ್ಬಮ್ಮ ಹೆಗ್ಗಡಿತಿ'ಯನ್ನು ಕಥಾ - ಕುತೂಹಲಕ್ಕಾಗಿ ಓದಬೇಕಾಗಿಲ್ಲ. ಅದರ ಹೆಗ್ಗಡಿತಿಯು ಮಲೆನಾಡಿನ ಮೂರ್ತ ಸ್ವರೂಪ. ಅವಳು ಅರಣ್ಯರಾಜ್ಞಿ, ಸಾಕಾರ ವನದೇವತೆ.

ದರ್ಶನೀಯ ಸ್ಥಳಗಳನ್ನು ನೋಡಲು ಹುಡುಕಿಕೊಂಡು ಹೊರಟ ವಿಹಾರಿಯ ಮನೋಭಾವವನ್ನು ತಾಳಿ ನಾವು ಈ ಮಹಾ ಕಾದಂಬರಿಯನ್ನು ಹೊಗಬೇಕು. ಬರೆದವರು ಪ್ರಕೃತಿ ಪ್ರಿಯ ಪುಟ್ಟಪ್ಪನವರೆಂಬುದನ್ನು ಇಲ್ಲಿ ಬರುವ ಮಲೆನಾಡಿನ ಜೀವನ ದೃಶ್ಯಗಳ ನಿರೂಪಣೆಯು ಪದೇ ಪದೇ ನೆನಪಿಗೆ ತಂದುಕೊಡುತ್ತದೆ.

ಮಲೆನಾಡಿನ ವನಸ್ಪತಿ ರಾಜ್ಯವು ವಿಶಿಷ್ಟವಾಗಿರುವಂತೆಯೇ ಅಲ್ಲಿಯ ಹಳ್ಳಿ - ಪಟ್ಟಣಗಳ ಜನರ ನಡೆ - ನುಡಿ ಮಾತುಕತೆ, ವರ್ಣನೆ - ವೆಗ್ಗಳಗಳ ರೀತಿಯೂ ವಿಶಿಷ್ಟವಾದುದು. ಜೀವನದ ಅತಿ ಚಿಕ್ಕ ಘಟನೆಗಳನ್ನೂ ವಿವರವಾಗಿ ಕೊಟ್ಟು ಮಾರ್ಮಿಕವಾಗಿ ಮನದ ಮೇಲೆ ಬಿಂಬಿಸಿ, ಆಯಾ ಸನ್ನಿವೇಶ ಪರಿಬಂಧದಲ್ಲಿರುವ ಕೌಟುಂಬಿಕರ ಮನಃಪ್ರವೃತ್ತಿಗಳ ರಸ್ಯಮಾನ ಅಂಶಗಳನ್ನು ಶ್ರೀ ಪುಟ್ಟಪ್ಪನವರು ಈ ಗ್ರಂಥದಲ್ಲಿ ಬಿಂಬಿಸಿರುವ ರೀತಿಯು ಅನನ್ಯ ಸಾಧಾರಣವಾಗಿದೆ.

ಈ ಕಾದಂಬರಿಯಲ್ಲಿ ಬರುವ 'ಹೂವಯ್ಯ ಬಾವಯ್ಯ' ತನ್ನ ಅನೇಕ ಲಕ್ಷಣಗಳಿಂದ ಗ್ರಂಥಕರ್ತರನ್ನು ಬಲ್ಲವರಿಗೆ ಅವರ ನೆನಪನ್ನೇ ಮಾಡಿಕೊಡುತ್ತಾನೆ. ಇತರ ಪಾತ್ರಗಳಾದರೂ ಆತ್ಮೀಯವೆನಿಸುವಂಥವು. ಜೀವನದ ಮಾಧುರ್ಯವಿಲ್ಲಿ ಕಾವ್ಯ ಮಾಧುರ್ಯಕ್ಕೆ ಪ್ರತಿಸ್ಪರ್ಧಿಯಾದಂತೆ ವ್ಯಕ್ತವಾಗುತ್ತದೆ.

ಇದು ವರ್ಣನಾ ಪ್ರಧಾನವಾದ ಕಾದಂಬರಿ. ಶೈಲಿಗೆ ಇಲ್ಲಿ ಪ್ರಧಾನ ಪ್ರಾಶಸ್ತ್ಯ. ವರ್ಣನೀಯ ಅಂಶಗಳ ಔಚಿತ್ಯವನ್ನಿಲ್ಲಿ ಕವಿನೇತ್ರ ನಿರ್ಧರಿಸಿದೆ.

'ನಿರಂತರ ರಸೋದ್ಗಾರ ಗರ್ಭಸಂದರ್ಭ ನಿರ್ಭರಾಃ ಗಿರಃ ಕವೀನಾಂ ಜೀವಂತಿ ನ ಕಥಾ ಮಾತ್ರಮಾಶ್ರಿತಾಃ'

ಎಂಬ ಮಾತಿಲ್ಲಿ ಸಾರ್ಥಕ. ಪಾತ್ರಗಳ ಮಾತು ಘಳಾರನೆ ಅವನ ವ್ಯಕ್ತಿತ್ವವನ್ನು ಹೊಳೆಯಿಸುತ್ತದೆ. ಆದುದರಿಂದ 'ಕವಿ: ಕರೋತಿ ಕಾವ್ಯಾನಿ ರಸಂ ಜಾನಾತಿ ಪಂಡಿತಃ'

ಎಂಬ ಮಾತಿಗೂ ಇಲ್ಲಿ ಅನ್ವಯವಿದೆ. ಹೊಸಗನ್ನಡ ಕಾದಂಬರಿ ಪ್ರಪಂಚದಲ್ಲಿ ಪ್ರಾಕೃತಿಕ ಚಿತ್ರವೇ ಕಥಾನಾಯಕನೋ ಎನ್ನುವಂತೆ ರಚಿಸಿದ ಕಾದಂಬರಿ ಇದೊಂದೇ ಎನ್ನಬಹುದು. ಕಥೆಯಲ್ಲಿ ಬರುವ ಪಾತ್ರಗಳೆಲ್ಲ ಪ್ರಕೃತಿ ಮಾತೆಯ ಮಡಿಲಲ್ಲಿ ಬೆಳೆದ ಮಕ್ಕಳು. ಮರೆಯಲಾರದ ಅವರ ವ್ಯಕ್ತಿತ್ವಗಳನ್ನು ಓದಿಯೇ ರೂಪಿಸಿಕೊಳ್ಳಬೇಕು ಎಂಬ ಒಂದೇ ಮಾತಿನಲ್ಲಿ ಕವಿಯ ಕಲೆಗಾರಿಕೆಯ ವಿಶಿಷ್ಟತೆಯನ್ನು ಸೂಚಿಸಬಹುದು. ಅವರ ಸರಳ ಜೀವನದಲ್ಲೂ ರಸಿಕತೆಯ ನಯ ನಾಜೂಕುಗಳ ಅಂಶಗಳನ್ನು ಕಂಡ ಯಾವ ಓದುಗನೂ ಮಲೆನಾಡನ್ನು ಸ್ವತಃ ನೋಡಲು ಟೊಂಕಕಟ್ಟಿ ಹೊರಡಲನುವಾಗದಿರನು. ಅವರೆ ಮೊದಲೇ ಸೂಚಿಸಿದಂತೆ ಕಥೆಯದು ಗಂಗಾಗಮನ. ಶರಾವತೀ ಗತಿಯಲ್ಲ. ಕ್ಷೇತ್ರಯಾತ್ರೆಗೆ ಹೊರಟ ಭಕ್ತನಂತೆ ವಾಚಕನು ಅಲ್ಲಲ್ಲಿ ತಂಗುತ್ತ ಆಯಾ ಜೀವನ ದೃಶ್ಯಗಳಲ್ಲಿ ತಲ್ಲೀನನಾಗುತ್ತ. ಮುಂದಿನ ಮಜಲನ್ನು ಮುಟ್ಟಲು ನಿಧಾನವಾಗಿ ಅಣಿಯಾಗಬೇಕು.

'ನಟಸಾರ್ವಭೌಮ'ವು ಕಲಾವಿದನೊಬ್ಬನ ಜೀವನವನ್ನು ಚಿತ್ರಿಸ ಹೊರಟ ಪ್ರಸಿದ್ಧ ಕಾದಂಬರಿ.

ಕಾದಂಬರಿಯು ಆರ್ಥದ ವರೆಗೂ ತುಂಬ ಸ್ವಾರಸ್ಯವಾಗಿ ಸಾಗುತ್ತದೆ. ನಟನ ಜೀವನದ ಪರಿಸರ, ಅವನು ಎದುರಿಸುವ ಸಮಸ್ಯೆಗಳು. ಅವನಿಗೆ ಸುತ್ತು ಮುತ್ತಲಿನ ಸ್ತ್ರೀಪ್ರರುಷರಿಂದ ದೊರಕುವ ಪ್ರೋತ್ಸಾಹ - ನಿರುತ್ಸಾಹಗಳು ಮುಂತಾದುವನ್ನು ಶ್ರೀ ಅ. ನ. ಕೃ. ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ.

ಶ್ರೀ ಅ. ನ. ಕೃ. ಅವರ ವಾಕ್ಕಿನ ನಿರರ್ಗಳಧಾರೆ, ಸನ್ನಿವೇಶಗಳ ವರ್ಣನಾ ವೈಖರಿ ಹೆಸರಾದಂಥವು. ಅವರ ಈ ಅನ್ಯಾದೃಶ ಶೈಲಿಯ ಸುಭಗತೆಯನ್ನು 'ನಟಸಾರ್ವಭೌಮ'ದಲ್ಲೂ ಕಾಣಬಹುದು. ಈ ಕಾದಂಬರಿಯನ್ನು ಅರ್ಧ ಓದಿದ ಬಳಿಕ ಅದರ ಓಟವು ಸ್ವಲ್ಪ ಕುಂಠಿತವಾದಂತೆ ಕೆಲವರಿಗೆ ತೋರಬಹುದು. ಆದರೆ ಮೊದಲಿನ ಅನುಸ್ಯೂತ ಗತಿಯನ್ನು ಮರೆತರೆ, ಮುಂದಿನ ಮಂದವೂ ಶಿಥಿಲವೂ ಎನಿಸಬಹುದಾದ ಬಂಧದ ಗತಿಯ ಪ್ರತ್ಯೇಕ ಲಾವಣ್ಯವನ್ನು ಆಸ್ವಾದಿಸಲು ಯಾವ ಅಡ್ಡಿಯೂ ಉಂಟಾಗಲಾರದು.

ಪಾತ್ರಪೋಷಣೆಯಲ್ಲಾದರೂ ಉತ್ತರಾರ್ಧದ ಕಥಾಗತಿಯಲ್ಲಿರುವಂತೆಯೇ ಅನವಶ್ಯಕ ಎಂದು ಕೆಲವರಿಗೆ ತೋರಬಹುದಾದ ಪುನರಾವರ್ತನೆಯುಳ್ಳ ಸನ್ನಿವೇಶಗಳು ಅಲ್ಲಿ ಇಲ್ಲಿ ಸಿಗಬಹುದು. ಆದರವು ಕಾದಂಬರಿಯ ಗುರುತ್ವವನ್ನು ಹೆಚ್ಚಿಸುವಲ್ಲಿ ಸಹಾಯಕ ಎಂಬುದನ್ನು ನೆನೆದರೆ ಅವುಗಳ ಔಚಿತ್ಯವನ್ನು ಅರ್ಥ ಮಾಡಿಕೊಂಡಂತಾಗುತ್ತದೆ.

ಕಲಾವಿದನ ಪ್ರೇಮ ಪ್ರಕರಣಗಳು ಗ್ರಂಥ ಕರ್ತರ ದೃಷ್ಟಿಗೆ ಸಹಜವಾದಂಥವು. ಆ ಪಾತ್ರದ ರಸ್ಯವಾನತೆಗೆ ಕಾರಣವೆಂದು, ಕಲೆಗಾರಿಕೆಗೂ ಒಬ್ಬನ ವೈಯುಕ್ತಿಕವಾದ ನೈತಿಕ ಚಾರಿತ್ರ್ಯಕ್ಕೂ ಸಂಬಂಧ ಹಚ್ಚಬಾರದು – ಎಂಬ ನ್ಯಾಯವನ್ನು ಓದುಗನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ನಟನನ್ನು ನಟನನ್ನಾಗಿ ಅಷ್ಟೇ ಪರಿಶೀಲಿಸುವುದು ಪ್ರೇಕ್ಷಕರ ಕರ್ತವ್ಯವಲ್ಲವೆ? ಹಾಗಲ್ಲವೆನ್ನುವವರಿಗಲ್ಲಿ ಸ್ವಲ್ಪ ತಲೆ ನೋವು ಉಂಟಾದೀತು: ಗಾಂಧೀಯವಾಗಿ ಇದು ಸಹಜ.

ಶ್ರೀ ಗೋಕಾಕರ 'ಇಜ್ಜೋಡಿನ' ಪರಿಚಯದಲ್ಲಿ ಮಹಾಭಾರತದ ಉಲ್ಲೇಖ ಮಾಡಲಾಯಿತಷ್ಟೆ. ಇಲ್ಲೂ Repetitions ಸದೃಶ ದೃಶ್ಯಗಳ ಪುನರಾವರ್ತನೆಗೆ ಮಹಾಭಾರತದ ಪುನರುಕ್ತ ಉಪಾಖ್ಯಾನಗಳನ್ನು ಉಪಮೆಗಳನ್ನಾಗಿ ತೆಗೆದುಕೊಳ್ಳಬಹುದು. ಈ ಕಾದಂಬರಿಯನ್ನಾದರೂ ಅವರಂತೆಯೇ ಇಡಿಯಾಗಿ ನೋಡಬೇಕಲ್ಲದೆ, ಬಿಡಿಗಳ ಪರಿಶೀಲನೆಗೆ ಅಷ್ಟು ತಲೆಹಾಕಬಾರದು. ಇದು ಶ್ರೀ ಅ. ನ. ಕೃ. ಅವರು ಅಲ್ಲಿಯ ವರೆಗೆ ಬರೆಯುತ್ತ ಬಂದಿದ್ದ ಕಾದಂಬರೀ ಪಂಕ್ತಿಯಿಂದ ಭಿನ್ನವಾದ ಪಂಕ್ತಿಗೆ ಸೇರುವ ಉತ್ತರ ಕಾಲೀನ ಕಾದಂಬರಿಗಳ ಬರಹಕ್ಕೆ ನಾಂದಿಯಾಯಿತೆಂದು ತಿಳಿಯಬಹುದು. ಅಲ್ಲದೆ ಕಲಾವಿದರ ಜೀವನ ಚಿತ್ರಣವನ್ನು ಕಲ್ಪನಾ ವೈದಗ್ಧ್ಯದಿಂದ ಚಿತ್ರಿಸಿದ ಹೊಸಗನ್ನಡ ಕಾದಂಬರಿಗಳಲ್ಲಿ ಇದು ಎರಡೂ ಅರ್ಥಗಳಲ್ಲಿ ಅಗ್ರಗಣ್ಯ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗ್ರಾಮಜೀವನ ಚಿತ್ರಣ

ಉಪಕ್ರಮ

ಭಾರತದಲ್ಲಿ ಗ್ರಾಮಗಳೇ ಬಹುಸಂಖ್ಯ. ಗ್ರಾಮ ಭಾರತವು ನಗರ ಭಾರತಕ್ಕಿಂತ ದೊಡ್ಡದು. ಹಿಂದಿನ ಕಾಲದ ಬಹು ದೊಡ್ಡ ನಾಗರಿಕತೆಯ ಅವಶೇಷವೆನಿಸಿದ ನಮ್ಮ ಗ್ರಾಮಸ್ತೋಮವು ಈಗ ಕೆಲಕಾಲದ ಹಿಂದೆ ಅನಕ್ಷರಸ್ಥವೆನ್ನಿಸಿದ್ದರೂ ಅಸಂಸ್ಕೃತ ಎನ್ನಿಸಿದ್ದಿಲ್ಲ. 'ಗ್ರಾಮ'ವೆಂಬ ಪದವು ನಾಗರಿಕತೆಯ ಆದಿಕಾಲದಲ್ಲಿ ಅದಕ್ಕಿದ್ದ ಲಕ್ಷಣವನ್ನು ಸೂಚಿಸುತ್ತದೆ. ಕುಲ, ಹಳ್ಳಿ, ಗುಂಪು ಎಂಬ ಅರ್ಥಗಳದಕ್ಕಿವೆ. ಈಗಿನ ಮಲೆನಾಡಿನ ನಡುನೆಲದಲ್ಲಿರುವ (ಒಂದೇ ಒಂದಾಗಿ ನೆಲೆಸಿರುವ) ಸಂಯುಕ್ತ ಕುಟುಂಬದಂತಹ ಒಂದು 'ಕುಲ' (ಕುಳ) ಇದ್ದದ್ದನ್ನು ಒಂದು ಗ್ರಾಮವೆಂದು ಮೊದಲು ಕರೆಯುತ್ತಿದ್ದಿರಬೇಕು. ಗ್ರಾಮದೊಡನೆ ರೂಢಿಗೆ ಬಂದ ಕೆಲ ಪದಗಳು ಗ್ರಾಮಜೀವನದ ಕೆಲ ಅಂಗಗಳನ್ನು ಸೂಚಿಸುತ್ತವೆ: ಗ್ರಾಮಾಚಾರವೆಂದರೆ ಜೀಟಿಯಾಡುವುದು. ಗ್ರಾಮಕಂಟಕ ಎಂದರೆ ಚಾಡಿಕಾರ, 'ಗ್ರಾಮಣಿ' ಎಂದರೆ ಗ್ರಾಮಾಧ್ಯಕ್ಷನೆಂದೂ. ಜವರದವನೆಂದೂ, ವಿಷ್ಣುವೆಂದೂ, ಸೂಳೆಯೆಂದೂ, ಧಾಂಡಿಗನೆಂದೂ ಅರ್ಥವಾಗುತ್ತದೆ. ಗ್ರಾಮ ಮುಖವೆಂದರೆ ಮಾರುವ ಕಟ್ಟೆ. 'ಗ್ರಾಮಮೃಗ' ಅಥವಾ 'ಗ್ರಾಮಸಿಂಹ' ಎಂದರೆ ನಾಯಿ. 'ಗ್ರಾಮಪಾಲ'ವೆಂದರೆ ಗ್ರಾಮರಕ್ಷಕ. ಸೈನ್ಯ. 'ಗ್ರಾಮಸಂಘ'ವೆಂದರೆ Village Corporation. 'ಗ್ರಾಮಾಶ್ವ'ವೆಂದರೆ ಕತ್ತೆ. 'ಗ್ರಾಮ್ಯಧರ್ಮ'ವೆಂದರೆ Right or duty of a Villager ಗ್ರಾಮೀಣನ ಅಧಿಕಾರ ಅಥವಾ ಕರ್ತವ್ಯ.

ಮೇಲಿನ ಮಾತುಗಳಿಂದ ಗ್ರಾಮದ ಸಾಮಾಜಿಕ ಮತ್ತು ಔದ್ಯೋಗಿಕ ಹಾಗೂ ರಾಜಕೀಯ ಜೀವನ ಕ್ಷೇತ್ರಗಳ ಅಂಗಗಳು ಸ್ಪಷ್ಟವಾಗುತ್ತವೆ. ನಗರಗಳು ಬೆಳೆಯುತ್ತ ಹೋದ ಹಾಗೆ ಗ್ರಾಮಗಳ ಬಗ್ಗೆ ಅನಾದರ ಆಗೀಗ ಹುಟ್ಟಿದ್ದಕ್ಕೆ 'ಗ್ರಾಮೀಣ' ಎಂದರೆ ನಾಯಿ, ಹಂದಿ, ಕಾಗೆ ಎಂದೂ 'ಗ್ರಾಮ್ಯ' ಎಂದರೆ ಸಾಕಿದ, ಕೀಳಾದ, ಒರಟಾದ, ಅಶ್ಲೀಲವಾದ ಎಂದೂ ಅರ್ಥಗಳು ಹುಟ್ಟಿಕೊಂಡದ್ದು ಸಾಕ್ಷಿ. ಇದಕ್ಕೆ ಪ್ರತಿಯಾಗಿ ಗ್ರಾಮಸ್ಥರೆಂದರೆ ಶಾನುಭಾಗರೆಂದೂ. 'ನಗರಕಾಕ' ಎಂದರೆ ಕುಟಿಲನೆಂದೂ 'ನಾಗರಕ' ಎಂದರೆ ಕುಯುಕ್ತಿ ಸಂಪನ್ನನೆಂದೂ

‘ನಾಗರ್ಯ’ವೆಂದರೆ ಚಾತುರ್ಯವೆಂದೂ ಅರ್ಥ ಹಚ್ಚಿದರು; ನಾಗರೀಟನೆಂದರೆ ವಿಟನೆಂದೂ ಕುಂಟಲಿಗನೆಂದೂ ಹೇಳಿದರು. ಹೀಗೇ ಗ್ರಾಮವಾಸ ಹಿತಕರವೋ ನಗರವಾಸ ಹಿತಕರವೋ ಎಂದು ಚರ್ಚಾಕೂಟಗಳ ಚರ್ಚಾ ವಿಷಯವಾಗುವಲ್ಲಿಯ ವರೆಗೆ ಈ ಸ್ಪರ್ಧಾಲುತ್ವ ನಡೆದುಬಂದಿದೆ,

ಜೀವನವೆಂದರೆ ಜಟಿಲವಲ್ಲವೇ? ಅದರ ಅಂಗ ಒಂದೇ ಎರಡೇ — ಇಪ್ಪತ್ತೈದು: ಜಲ, ನೆಲ, ಆಹಾರ, ಉದ್ಯೋಗ, ವ್ಯಾಪಾರ, ಉದ್ಯಮ, ವಿವಾಹ, ವಿಷಯ ವಿನೋದ, ಮನೆ-ಮಠ, ಹಕ್ಕು, ಬಾಧ್ಯತೆ, ಭಾಂಧವ್ಯ, ಹಬ್ಬ, ಜಾತ್ರೆ, ಸಂತೆ, ಆಟ-ನಾಟಕ, ಪೂಜೆ-ಪುರಸ್ಕಾರ, ಶಿಕ್ಷಣ, ಸ್ನೇಹ, ವೈರ, ರಾಜಕೀಯ, ರೂಢಿ-ಪರಂಪರೆಗಳು, ನಂಬಿಕೆಗಳು, ಕುಟುಂಬದ ಕಟ್ಟು ಮತ್ತು ಸಮಾಜದ ಕಟ್ಟಳೆಗಳು ಎಂಬಿವು ವರ್ಣನೀಯ ಅಂಗಗಳಲ್ಲಿ ಪ್ರಮುಖ ವಾದ ಕೆಲವು. ಜೀವನವೆಂದರೆ ಗಾಳಿ, ನೀರು, ಮಗ, ಪ್ರಾಣಶಕ್ತಿ, ಬ್ರಹ್ಮ, ಉಪಜೀವನ, ಉದ್ಯೋಗ ಅಥವಾ ವೃತ್ತಿ, ಜೀವಿಕೆ, ಬೆಣ್ಣೆ ಎಂದು ಒಂಭತ್ತು ಅರ್ಥಗಳಿಂದ ಗೋಚರವಾಗುವ ಪದಾರ್ಥ. ಹೀಗಿರುವಾಗ ಸಾಹಿತ್ಯ ಕೃತಿಗಳಲ್ಲಿ ವಸ್ತು, ಪಾತ್ರ, ಸನ್ನಿವೇಶ, ಭಾವ, ರಸಗಳೆಂಬ ಪಂಚಾಂಗಗಳ ಮೂಲಕ ಸಾಹಿತಿ ಗಳು ಗ್ರಾಮದಲ್ಲಿರುವ ವ್ಯಕ್ತಿಗಳ, ಕುಟುಂಬಗಳ ಮತ್ತು ಜಾತಿ-ವಿಜಾತಿಗಳ ಮನಸ್ಸು ಮಾತು, ಕಾರ್ಯಗಳ ಘಟನೆ-ವಿಘಟನೆಗಳಿಂದ ಕೂಡಿದ ಜೀವನ ವ್ಯವಹಾರವನ್ನು ಚಿತ್ರಿಸುವುದು ಸಹಜ. ಹಿಂದಿನ ಕಾಲದಲ್ಲಿ “ಕಾಲಾಯಸದಿಂದ ನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತುಪಾದೇಯಮೆ?” ಎಂದು ಮಾನ್ಯರ ಜೀವನ ಕಥೆಗಳನ್ನೇ ದೊಡ್ಡ ಕವಿಗಳು ಹೆಚ್ಚಾಗಿ ಬರೆಯುತ್ತಿದ್ದರು. ಸಾಮಾನ್ಯರ ಜೀವನದ ಸುಖ-ದುಃಖಗಳು ಅಲ್ಲಿ ಇಲ್ಲಿ ವಿರಳವೂ ಗೌಣವೂ ಆಗಿ ಬರುತ್ತಿದ್ದವು. ಆಧುನಿಕರಾದ ಜಾಗ್ರತ ಕರ್ನಾಟಕದ ಸಾಹಿತಿಗಳಲ್ಲಿ ಬಹುಸಂಖ್ಯರು ಈ ವರೆಗೆ ಹಳ್ಳಿಗಳಿಂದ ಬಂದವರೇ ಆಗಿರುವುದರಿಂದ ಅವರ ಬಹುಸಂಖ್ಯ ಕೃತಿಗಳಲ್ಲಿ ಅವರ ತಂದೆ-ತಾಯಂದಿರ ತಲೆಮಾರಿನ ಗ್ರಾಮವಾಸಿಗಳ ಮತ್ತು ಅರೆಪಟ್ಟಣವಾಸಿಗಳ ಜೀವನದ ಆಗು-ಹೋಗುಗಳನ್ನೇ, ಕಟು-ಮಧುರ ಅನುಭವಗಳನ್ನೇ ನಾವು ಕಾಣುತ್ತೇವೆ. ಜೀವನ ವ್ಯವಹಾರಾಂಗಗಳೆಂದು ಹಿಂದೆ ಕೊಟ್ಟಂಥವು ಅವುಗಳ
1 ಸಾಧನಗಳು, ಮಾಧ್ಯಮಗಳು ಅಥವಾ ವಾಹಕಗಳು.

ಸುಮಾರು 19ನೆಯ ಶತಮಾನದ ಉತ್ತರಾರ್ಧದಿಂದ ಹೊಸಗನ್ನಡ ಸಾಹಿತ್ಯಯುಗ ಆರಂಭವಾಯಿತೆನ್ನಬಹುದು. ಭಾವಗೀತ, ಕಥನಕವನ, ನೀಳ್ಗತೆ, ಸಣ್ಣ ಕತೆ, ಕಾದಂಬರಿ, ನಾಟಕ, ಪ್ರಹಸನ, ಲಘು ಪ್ರಬಂಧ, ಲಲಿತ ಪ್ರಬಂಧ,

ಆತ್ಮಕಥೆ ಎಂಬ ಹತ್ತು ಮತ್ತು ಇತರ ಅವತಾರಗಳಿಂದ ಆಧುನಿಕ ಕನ್ನಡದ ರಸಸರಸ್ವತಿ ತನ್ನ ಪರಿಚಯವನ್ನು ಮಾಡಿಕೊಡುತ್ತ ಬಂದಿದ್ದಾಳೆ. ದಾಸಭಾರತದ ದಾಸ್ಯಚ್ಛಾಯೆಯಿಂದ ತೇಜಸ್ಸು ಮಸುಳಿಹೋದ ಗ್ರಾಮಜೀವನದ ಥಾರ್ ಮರುಭೂಮಿ ಮತ್ತು ಅದರಲ್ಲೇ ಅಲ್ಲಿ ಇಲ್ಲಿ ಕಂಡು ಬರುವ ಚಿಲುಮೆಯನ್ನವಲಂಬಿಸಿದ ಸಸ್ಯ ಸಮೃದ್ಧ ಪ್ರದೇಶ ನಮ್ಮ ಕಣ್ಣ ಮುಂದೆ ಹಾಯ್ದುಹೋಗುತ್ತದೆ. ಪರಂಪರೆಯ ತಿರುಳನ್ನು ಮರೆತು ಸಿಪ್ಪೆಗೆ ಜೋತುಬಿದ್ದು ಬಾಳುವ ವಿವಿಧ ಪಾತ್ರಗಳ ಜೊತೆಗೇ ತಿರುಳನ್ನರಿತು ಬಾಳುವ ಪಾತ್ರಗಳೂ ಬರುತ್ತವೆ. ಅಂಧಾಚಾರ ಪರಾಯಣರಿಗೂ ನವಜೀವನದ ಸ್ವತಂತ್ರ ದೃಷ್ಟಿಯನ್ನು ಎತ್ತಿ ಹಿಡಿಯುವವರಿಗೂ ನಡುವೆ ಘರ್ಷಣ ಬಂದದ್ದನ್ನೂ ಚಿತ್ರಿಸಲಾಗಿದೆ. "ಕಾಡ ಬಳಗದ ಸಸ್ಯಶಾದ್ವಲದ ಶಾಂತಿಯಲಿ ತಲೆಗರೆದು" ಎಲೆಮರೆಯ ಕಾಯಿಯಂತೆ ಪ್ರಶಾಂತ ಜೀವನ ನಡೆಸುವ ಬಳಗವೂ. ತದ್ವಿರುದ್ಧವಾಗಿ ಯಾದವೀಯ ಕಲಹದಲ್ಲಿ ನಿರತರಾಗಿ ನಿತ್ಯವೂ—

1. ಗೃಹಂ ವೇಷಶ್ಚ ಭೂಷಾಚ ಭಾಷಾ ವೃತ್ತಿ - ಪ್ರವೃತ್ತಯಃ ।
ಶಿಲ್ಪಂ ವಿದ್ಯಾ ಧರ್ಮಶೀಲಂ ವಿರಾಮೋದ್ಯೋಗ ಉಪಜ ॥
ಕ್ರೀಡಾವಿನೋದ ಸಂದರ್ಭಾಃ ಕೃಷಿಲಬ್ಧಫಲಾನಿ ಚ ।
ಕುಟುಂಬ ಬಂಧುಮಿತ್ರಾಣಾಂ ಸಂಬಂಧಾ ದೇಶ್ಯರೂಢಯಃ ॥
ಪ್ರದೇಶಜಾತಿಪ್ರಜ್ಞಾ ಚ ಮತಧರ್ಮೋತ್ಸವಾಃ ಪುನಃ ।
ವಿವಾಹಾದಿ ವಿನಿರ್ಬದ್ಧ ಪುಂಸ್ತ್ರೀ ಚರ್ಯಾ ಪ್ರಜಾಮತಂ ॥
ಪ್ರಶಾಸನವ್ಯವಸ್ಥಾ ಚ ಪೂಜ್ಯಸ್ಥಾನಂ ಪ್ರಭಾವಜಂ ।
ತಾರತಮ್ಯಾಧಿಕಾರಾಶ್ಚ ಪಿತೃಕ್ಷೇತ್ರಪ್ರತಿಷ್ಠಿತಾಃ ॥
ಸಮಾಜಕರ್ಮಣಾಂ ಭಾಗಾ ವ್ಯಕ್ತಿಚರ್ಯಾ ನಿಯಂತ್ರಣಂ ।
ಜನಸಸ್ಯತೃಣಾನಾಂಚ ಖನಿಜಾನಾಂಚ ಸಂಪದಃ ॥
ನೈರ್ಮಲ್ಯಸಾಧನಂ ಗ್ರಾಮೇ ಭೇಷಜೋಪಸ್ಥಿತಿಃ ಸದಾ ।
ಶೃಂಗಾರವ್ಯವಹಾರಶ್ಚ ನಾಟ್ಯ ಕಾವ್ಯಕಲಾದಯಃ ॥
ಸಂರಕ್ಷಣಕ್ರಮಶ್ಚೇತಿ ತ್ರಿಂಶಜ್ಜೀವನ ಸಂಗ್ರಹಾಃ ॥

— ಸಂಗೃಹೀತ

ಮನೆ - ಮಠ ಊರು - ಕೇರಿಗಳಲ್ಲಿ ಅಶಾಂತಿಯ ಮಳ್ಳುರಿಯನ್ನು ಹಬ್ಬಿಸುವವರ ತಂಡವೂ ಸುಖಾಂತವಾಗಿ, ಕೆಲವೊಮ್ಮೆ ದುಃಖಾಂತವಾಗಿ, ಬಾಳುವೆ ಮುಗಿಸುವುದನ್ನು ನಾವು ಕಾಣಬಹುದು. ಇಂದಿನ ನಮ್ಮ ಗ್ರಾಮಸಮುದಾಯ

ಗಳಲ್ಲಿ Feudalistic Psychology ಜಮೀನುದಾರಿಕೆಯ ಮನೋಧರ್ಮವೂ Hierarchical Social Pattern ನೀಚೋಚ್ಚ ಸ್ಥಾನಮಾನಗಳ ಸಮಾಜ ಸ್ವರೂಪವು ಜನ್ಮ - ಜಾತಿ - ವಯೋ - ವಿತ್ತಗಳಿಂದ ರಚಿತವಾಗುತ್ತಿದ್ದ ನೀತಿಯೂ ಎದ್ದು ಕಾಣುತ್ತ ಬಂದಿದೆ. 17 ವರ್ಷಗಳ ಸ್ವತಂತ್ರ ಭಾರತವು ಉಕ್ತ ಮನೋಧರ್ಮವನ್ನೂ ಸಮಾಜ ನೀತಿಯನ್ನೂ ಬದಲಾಯಿಸಲು ಹೋರಾಟ ನಡೆಸಿದೆ. ಈ ಹೋರಾಟದಲ್ಲಿ ಸಾಹಿತಿಗಳೂ ಗಣ್ಯ ಪಾತ್ರವನ್ನು ವಹಿಸುತ್ತಿದ್ದಾರೆ.

೧

ಇಂದು ಉಳಿದುಳಿದ ಜನಪದ ಸಾಹಿತ್ಯ ಕೃತಿಗಳಲ್ಲಿ ಪರಂಪರಾಗತ ಗ್ರಾಮ ಜೀವನದ ಆಸೆ - ಆಕಾಂಕ್ಷೆ, ರಸ - ರುಚಿ, ಸುಖ - ದುಃಖ, ಅಭಿಪ್ರಾಯ - ನಂಬಿಗೆಗಳ ಚಿತ್ರವನ್ನು ನಾವು ಕಾಣಬಹುದು. ಕಾಲದ ದಶಕಗಳ ಅನುಕ್ರಮವನ್ನು ಹಿಡಿದು ಹೊರಟರೆ ಹೊಸಗನ್ನಡ ಹಳೆಯ ಸಾಹಿತಿಗಳಲ್ಲಿ ಬೇಂದ್ರೆಯವರೂ, ಪುಟ್ಟಪ್ಪನವರೂ, ಮಾಸ್ತಿಯವರೂ, ಕಾರಂತರೂ, ರಾಜರತ್ನರೂ ಎದ್ದು ಕಾಣುತ್ತಾರೆ. **ಬೇಂದ್ರೆ**ಯವರು ಅರ್ಧಕ್ಕರ್ಧ ಜನಪದ ಸಾಹಿತಿಗಳೆಂದೇ ಹೇಳಬಹುದು—ಅವರ ಭಾಷೆ. ಭಾವನಾ ಪ್ರಕಟನ ಶೈಲಿಗಳೂ ಹಾಗಿವೆ, ಅವರ "ಗರಿಯ" ಮೊದಲಿನ ಪದ್ಯವಾದ "ಬೆಳಗಿ"ನಲ್ಲಿ ಬರುವ "ಮೊಗ್ಗೀ" "ಹಕ್ಕೀಗಳ" "ಶಾಂತೀರಸ" ಮುಂತಾದ ಗ್ರಾಮ್ಯ ಪದರೂಪಗಳೇ ಈ ಮಾತಿಗೆ ಸಾಕ್ಷಿ. ಗ್ರಾಮೀಣ ಆವರಣದ ನಿಸರ್ಗ ಸೌಂದರ್ಯದ ಬೆಳಗು ಅದರಲ್ಲಿ ಹೃದಯಕ್ಕೆ ಮುಟ್ಟುವಂತೆ ವರ್ಣಿತವಾಗಿದೆ. ಶುದ್ಧ ನಗರದಲ್ಲಿ "ಗಿಡಗಂಟೆ"ಗಳೂ "ಹಕ್ಕಿಗಳ ಹಾಡೂ" ಸಿಗಬಹುದೇನು? ಅವರ "ಕರಿ ಮರಿ ನಾಯಿ"ಯಲ್ಲಿ ಭಾರತದಲ್ಲಿಯ ಗ್ರಾಮ್ಯ ಭಟ್ಟತನದ ವಿಡಂಬನೆಯಿದೆ. ಮಡಿಮಡಿಯೆಂದು ಮಾರುದ್ದ ಹಾರುವ ಪೂಜಾರಿತನದ ಟೀಕೆ ಇದೆ. "ನಗೀನವಿಲಿ"ನಲ್ಲಿ ಹಳ್ಳಿಯ ರಸಿಕ ಪ್ರಣಯಿಯ ವಿರಹ ಪಡಿಮೂಡಿದೆ. ಅವರ ಭಾಷೆ ಆಪಾದಮಸ್ತಕವಾಗಿ ಗ್ರಾಮ್ಯ. "ರಾಗರತಿ"ಯಲ್ಲಿ ಗ್ರಾಮ್ಯ ಪದಬಂಧದ ಮೂಲಕ ಹಳ್ಳಿಯ ರಸಿಕನ ಪ್ರಣಯ ಪ್ರಯತ್ನದ ಕಲ್ಪನೆ ಬಂದಿದೆ. "ಚೆಲುವ"ದಲ್ಲಿ ಹಾಗೇ ಗ್ರಾಮ ರಸಿಕನ ಮುದ್ದು ಮೂರ್ತಿ ಚಿತ್ರಿತವಾಗಿದೆ. ಜನಪ್ರಿಯವಾದ "ಪಾತರಗಿತ್ತಿ ಪಕ್ಕ"ದಲ್ಲಿ ಹಳ್ಳಿಯ ಮಕ್ಕಳ ಮನಸ್ಸನ್ನು ಸೆರೆಹಿಡಿಯುವಂಥ ಶೈಲಿಯಿಂದ ಚಿಟ್ಟೆಯನ್ನು ಬಣ್ಣಿಸಲಾಗಿದೆ. "ನನ್ನ ಕಿನ್ನರಿ"ಯಂತೂ ಕಿಂದರಿ ಜೋಗಿಯನ್ನು ಕಣ್ಣೆದುರು ನಿಲ್ಲಿಸುತ್ತದೆ. "ಬಿಸಿಲುಗುದುರೆ"ಯಲ್ಲಿ

ಜೀವನದ ಹೋರಾಟದಲ್ಲಿ ಸುಸ್ಪಷ್ಟದ ಚೆನ್ನಿಯ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ಅವರ "ಸಖೀ ಗೀತ"ದ ಕೆಲವು ಭಾಗಗಳು ಗ್ರಾಮ್ಯ ಪ್ರವೃತ್ತಿಗಳನ್ನು ಚೆನ್ನಾಗಿ ಒಡಮೂಡಿಸುತ್ತವೆ. ಅದರಲ್ಲಿ ಬರುವ ಹುಬ್ಬಳ್ಳಿಯವ ಎಂಬ ಪದ್ಯವು ಗ್ರಾಮವಲ್ಲಭೆ (ಗ್ರಾಮಣಿ, ಗ್ರಾಮೇಯಿ)ಯೊಬ್ಬಳ ವಸಂತಸೇನೆತನವನ್ನು ಹೃದಯಂಗಮವಾಗಿ ಹರಿಯಿಸಿದೆ. ಅವರ "ನಾದಲೀಲೆ," "ಗಂಗಾವತರಣ" ಮುಂತಾದ ಇತರ ಕವನ ಸಂಗ್ರಹಗಳಲ್ಲೂ ಎಷ್ಟೋ ಪದ್ಯಗಳು ಹಳ್ಳಿಯ ದಾಂಪತ್ಯ ಜೀವನದ ಸುಖ-ದುಃಖಗಳನ್ನು ಹೊರಗೆಡಹುತ್ತವೆ.

"ಕಾನೂರು ಸುಬ್ಬಮ್ಮ ಹೆಗ್ಗಡಿತಿ" ಎಂಬ ಹೆಬ್ಬೊತ್ತಿಗೆಯ ಮೂಲಕ ಮಲೆನಾಡಿನ ಹಳ್ಳಿಗಳ ಪ್ರತಿನಿಧಿಗಳಾಗಿ ನಿಂತ **ಪುಟ್ಟಪ್ಪ**ನವರ ಕೈಯಿಂದ "ಮಲೆನಾಡಿನ ಚಿತ್ರಗಳು" ಎಂಬ ಲಲಿತ ಪ್ರಬಂಧ ಸಂಗ್ರಹವೂ ಹೊರಬಿದ್ದಿದೆ. ಕಾಡ ಬಳಗದವರಾದ ಮಲೆನಾಡಿಗರಲ್ಲಿರುವ ನಿಸರ್ಗಪ್ರೇಮ, ಬೇಟೆಗಾರಿಕೆಯ ಸಾಹಸ, ಐಗಳ ಮಠದ ವಿದ್ಯಾಭ್ಯಾಸದ ವಿಡಂಬನೀಯತೆ ಅಭ್ಯಂಜನ ವೈಶಿಷ್ಟ್ಯ, ಜಂಭ, ದಂಭ, ಮುಂತಾದ ಎಷ್ಟೋ ಗ್ರಾಮ ಜೀವನಾಂಶಗಳನ್ನು ಎರಡನೆಯ ಪುಸ್ತಕ ಚಿತ್ರಿಸಿದರೆ, **ಮೊದಲನೆಯದು** ಮಲೆನಾಡಿನ ಕೌಟುಂಬಿಕ-ಸಾಮಾಜಿಕ ಜೀವನಗಳಲ್ಲಿ ಕಂಡುಬರುವ ಹೋರಾಟ, ತುಮುಲ, ವ್ಯಕ್ತಿಗತ ಸ್ವಾರ್ಥ, ಭೋಗ ಪ್ರಿಯತೆ, ಆಸ್ತಿ ಮನೆಗಳ ಆಸೆ-ಕಲಹ-ಸೋಲು-ಗೆಲುವುಗಳು, ವೈವಾಹಿಕ ಜೀವನದ ಅಸಂತೃಪ್ತಿ ಮತ್ತು ಅನೈತಿಕ ಒಲಿತಗಳು ಮುಂತಾದ ಹಲವಾರು ಅಂಶಗಳನ್ನು ಬಿಂಬಿಸುವುದಲ್ಲದೆ, ಉದ್ಧಾರಕ ಸ್ಫೂರ್ತಿಯಿಂದ ಹಳ ಬಾಳ ಹೀನತೆ-ದೀನತೆಗಳನ್ನು ಹೊಡೆದೋಡಿಸಿ ಹೊಸದಾಗಿ ನಿರ್ಮಲವೂ ತೇಜಸ್ವಿಯೂ ಉದಾತ್ತವೂ ಆದ ಸಮಾಜವನ್ನು ಕಟ್ಟಲು ಕಥಾನಾಯಕನು ಸಂಕಲ್ಪಿಸಿ ಕಾರ್ಯೋನ್ಮುಖನಾಗುತ್ತಾನೆ ಎಂದೂ ತಿಳಿಸುತ್ತದೆ. ಈ ಗ್ರಂಥಗಳಿಗಿಂತ ಮೊದಲೇ ಬೆಳಕು ಕಂಡ "ಕೊಳಲು" ಮತ್ತು "ನವಿಲು" ಎಂಬ ಸಂಗ್ರಹ ಕವನಗಳಲ್ಲಿಯೂ ಮಲೆನಾಡ ಹಳ್ಳಿಯ ಪಾಮರಿಯ ತರುಣರಂತಿದ್ದ ಕವಿಗಳು ಕಂಡ ದರ್ಶನಗಳೂ ಪಡೆದ ಅನುಭವಗಳೂ ಮಾಡಿದ ಆಲೋಚನೆಗಳೂ "ಕಾಡಿನ ಕೊಳಲಿದು ಕಾಡ ಕವಿಯು ನಾ" ಎಂದು ಅವರೆತ್ತಿದ ವಾಣಿಯ ಮೂಲಕ ವ್ಯಕ್ತವಾಗಿವೆ. ನಿಸರ್ಗ ಪುತ್ರನಾದ ಮಲೆನಾಡ ಗ್ರಾಮೀಣನೊಬ್ಬನ ಸುಸಂಸ್ಕೃತ ಭಾವಲಹರಿಗಳನ್ನು ಓದುತ್ತ ಹೋದಾಗ ಓದುಗನು ನಿಸರ್ಗಮಯನಾಗದಿರನು–ಪ್ಪಿಸುವ (ಗ್ರಾಮ್ಯಭಾಷೆಯಲ್ಲಿರದ) ಗ್ರಾಮ ಗೀತಗಳನ್ನಲ್ಲಿ ಯಾರಾದರೂ ಗುರುತಿಸಬಹುದು. ಗ್ರಾಮವಾಸಿಗೆ ಸಹಜವಾದ ಈ ನಿಸರ್ಗ ಪ್ರಿಯತೆ ಕವಿ

ವರ್ಯರ "ರಾಮಾಯಣ ದರ್ಶನ" ದಲ್ಲೂ ಕಂಡುಬರುವುದು ಗ್ರಾಮಜೀವನದ ಉದಾತ್ತ ಕಾವ್ಯಮಯತೆಗೆ ಧ್ವಜಸ್ತಂಭವಾಗಿದೆ. ವರ್ಡ್ಸ್ ವರ್ತ್ ಕವಿಗಿರುವ ನಿಸರ್ಗಾವೇಶ ಈ ಕವಿಗಳಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇದೊಂದು ಗ್ರಾಮಜೀವನದ ತಪಃ ಫಲ.

ನಮ್ಮ ಪ್ರಾಚೀನ ಕವಿಗಳು ಮಾಸ್ಯರ ಕುಟುಂಬಗಳ ಸುಖದುಃಖಗಳನ್ನು ಚಿತ್ರಿಸಿದರೆಂದು ಹೇಳಲಾಯಿತಷ್ಟೆ. ಆ ಮಾಸ್ಯರೂ ಅವನ ಸಂಗಡಿಗರೂ "ಗ್ರಾಮ ಪಾಸ್ಯ" ರಾಗಿ ನಡೆದುಕೊಂಡದ್ದೂ ಉಂಟೆಂಬುದನ್ನು **ಮಾಸ್ತಿ ವೆಂಕಟೇಶ ಅಯ್ಯಂಗಾರರ** "ಚಿಕ ವೀರರಾಜೇಂದ್ರ" ಎಂಬ ಐತಿಹಾಸಿಕ ಕಾದಂಬರಿಯು ತೋರಿಸಿಕೊಡುತ್ತದೆ. ಈ "ಗ್ರಾಮರಾಜ್ಯ" ಕೊಡಗಿನವರದ್ದು. ಇದರ ಕಾಲ ಶಕ ಸಂವತ್ಸರ ಸಾವಿರದೇಳುನೂರ ಐವತ್ತೈದು ವಿಜಯ. ಮಡಿಕೇರಿಯ ಮನೆಯಲ್ಲಿ ವೀರರಾಜನೂ ಗೌರಮ್ಮಾಜಿ ರಾಣಿಯೂ ಮಾತಾಡುತ್ತಿದ್ದರು:

ವೀರರಾಜ — "ಲೋ ಇಲ್ಲೇ ಇರಿರೋ" ಎಂದು ಅವರಿಗೆ ಹೇಳಿ, "ಬಾಗಿಲಾಚೆಗೆ ನೀವು ಹೋಗಬೇಕು" ಎಂದ.

ಗೌರಮ್ಮಾಜಿ — "ನನ್ನ ಧಣಿ ನನಗೆ ಯಾವ ಮಾತೂ ಹೇಳಬಹುದು. ಅದನ್ನ ಕೇಳೋಕೆ ಆಳು ಇದಿರಿಗಿರಬೇಕೇ ?"

ವೀರರಾಜ — "ಹೌದು ಇರಬೇಕು, ನಮ್ಮನ್ನು ಮೀರಿ ನಡೆಯೋ ಹೆಂಡತಿ ನಮಗೆ ಹೆಂಡತಿ ಅಲ್ಲ, ತೊತ್ತು."

ಗೌರಮ್ಮಾಜಿ — "ಕೈಹಿಡಿದ ಹೆಣ್ಣು ತೊತ್ತಾದಳು. ಹೊಟ್ಟೇಲಿ ಹುಟ್ಟಿದ ಮಗಳು ಏನಾದಳು ? ಅವಳನ್ನೂ ಆಳಿನ ಎದುರು ದಂಡಿಸುವುದೆ ?"

....

"ಗೌರಮ್ಮಾಜಿ ಗಂಡನಿಂದ ಹಲವು ಸಲ ಕೆಟ್ಟ ಮಾತನ್ನು ಕೇಳಿದ್ದಳು. ಪ್ರಜ್ಞೆಯಿಲ್ಲದ, ಪ್ರಜ್ಞೆ ತಪ್ಪಿದ ಹೊತ್ತಿನಲ್ಲಿ ಕುಡುಕ ಕೋಪಿಷ್ಠನಾದ ಈ ಗಂಡ ಒಂದೆರಡು ಸಲ ಅವಳನ್ನು ಕೈಯೆತ್ತಿ ಹೊಡೆದೂ ಇದ್ದನು."

ಈ ಅಂಶದಿಂದ ಕೊಡಗಿನ ಅರಮನೆಯು "ನಾಗರಿಕ" ವಾಗಿ ಆಗ ಇರಲಿಲ್ಲವೆನ್ನುವುದು ಸ್ಪಷ್ಟವಾಗುವುದಿಲ್ಲವೇ ?

"ಸಣ್ಣಕತೆಗಳ" ಲ್ಲಿ ಮೇಲೂರಿನ ಲಕ್ಷ್ಮಮ್ಮನ ಕತೆ ಗ್ರಾಮೀಣ ಕುಟುಂಬದ ಒಂದು ಅಸಮಾಧಾನಕರ ಚಿತ್ರವನ್ನು ಕಾಣಬಹುದು.

"ಲಕ್ಷ್ಮಮ್ಮನವರ ಗಂಡ ಅಷ್ಟೇನೂ ದೊಡ್ಡ ಮನುಷ್ಯನಲ್ಲ. ಅವನು ಆಕೆಯನ್ನು ಮದುವೆಯಾದದ್ದು ತನ್ನ ತಾಯಿ ತಂದೆ ಅವರ ಇಷ್ಟಕ್ಕೋಸ್ಕರ. ಅವರ ಇಷ್ಟಕ್ಕೆ ಕಾರಣ ಸ್ವಲ್ಪ ಹಣ ದೊರೆಯುವುದೆಂಬ ಆಸೆ. ಗಂಡನಾದವನಿಗೆ ಹೆಂಡತಿಯ ವಿಷಯದಲ್ಲಿ. ಕುರುಡಿ ಏನು ಸಂಸಾರ ಮಾಡಿಯಾಳು ಎಂತ ಅಲಕ್ಷ್ಯ. ಅಲ್ಲದೆ ಅವನಿಗೆ ಏಕಸ್ತ್ರೀವ್ರತನಾಗಿರಬೇಕೆಂಬ ಹಠವೂ ಇರಲಿಲ್ಲ. ಅವನು ಹೆಂಡತಿಯನ್ನು, ಬೇಡವೆಂದು ಹೇಳದೆ ಹಾಗೆ ಎಷ್ಟು ಅಸಡ್ಡೆಯಿಂದ ನೋಡುವುದು ಸಾಧ್ಯವೋ ಅಷ್ಟು ಅಸಡ್ಡೆಯಿಂದ ಕಾಣುತ್ತಿದ್ದನು." ಇಂಥ ಎಷ್ಟೋ ಅಯಶಸ್ವಿ ದಾಂಪತ್ಯಗಳು ಗ್ರಾಮಗಳಲ್ಲಿ ಹೆಚ್ಚುತ್ತ ಹೋದುದರ ಫಲವಾಗಿಯೋ ಸಮಾಜದಲ್ಲಿ ನೀತಿ ಶಿಥಿಲವಾಗುತ್ತ ಬಂದಿತು. ಅತಿ ಕ್ಷುದ್ರ ಸ್ವಾರ್ಥವು ವ್ಯಕ್ತಿಗಳಲ್ಲಿ ಹೆಚ್ಚುತ್ತ ಹೋಯಿತು ಮತ್ತು ಆ ಮೂಲಕ ಗ್ರಾಮ ಸಮಾಜವೆಂದು ಇದ್ದೂ ಇಲ್ಲದಂತಾಯಿತು. ಒಕ್ಕಟ್ಟು, ಸಹಕಾರ, ಸಾರ್ವಜನಿಕ ಹಿತ ಎಂಬ ತತ್ವಗಳ ಆಚರಣೆ ದೂರ ಉಳಿಯುವಂಥ ಮನಃಸ್ಥಿತಿ ಗ್ರಾಮೀಣರಲ್ಲಿ ಬೆಳೆಯಿತು. ಆರ್ಥಿಕ, ಔದ್ಯಮಿಕ ಅಥವಾ ಸಾಮಾಜಿಕ ಸುಧಾರಣೆಯ ಯಾವ ಯೋಜನೆಯೂ ಗ್ರಾಮದವರ ತಲೆಗೆಂದು ನಾಟದಂತಾಗಲು ಇಂಥ ಅಸಂಸ್ಕೃತವಾದ ಮಾನವ ಸಮಾಗಮ ಮಾನಸಪ್ರೋತ್ಪತ್ತಿಗಳು ಬಹುಮಟ್ಟಿಗೆ ಕಾರಣ. ಮಾಸ್ತಿಯವರ ಇತರ ಕತೆಗಳಲ್ಲೂ ಹೀಗೆ ಎಷ್ಟೋ ಗ್ರಾಮಜೀವನ ಚಿತ್ರಗಳು ಬಂದಿವೆ. ಅವನ್ನೋದಿದರೆ ಸಮಾಜ ಸುಧಾರಕರೂ ಕೃಷಿ–ಉದ್ಯಮ ಸುಧಾರಕರೂ ಸಮಾಜ ಶಾಸ್ತ್ರವನ್ನು ಓದಿದ್ದಕ್ಕಿಂತ ಹೆಚ್ಚು ಪ್ರಯೋಜನವನ್ನು ಪಡೆಯಬಹುದು ಅಥವಾ ಆ ಓದಿನ ನಿಜವಾದ ಸಾಫಲ್ಯವನ್ನು ಹೊಂದಬಹುದು.

ಶಿವರಾಮ ಕಾರಂತರ "ಮರಳಿ ಮಣ್ಣಿಗೆ" ಸುಪ್ರಸಿದ್ಧ. ಕೃಷಿ ಪ್ರಧಾನವಾದ ಗ್ರಾಮೀಣ ಕುಟುಂಬವೊಂದರ ಮೂರು ತಲೆಮಾರುಗಳ ಜೀವನ ಚಿತ್ರಗಳನ್ನಿಲ್ಲಿ ಕಾಣಬಹುದು. ಅದೊಂದು ಶುದ್ಧ ಗ್ರಾಮ ಕಾದಂಬರಿ. ಮಲೆನಾಡಿನ ಮತ್ತು ಸಮುದ್ರತೀರದ ನಡುವಣ "ಗಂಧಶಾಲಿವನ" ಪ್ರದೇಶದ ರೈತ ಕುಟುಂಬದ ಗಂಡಸು–ಹೆಂಗಸು–ಮಕ್ಕಳ ಮನೋಧರ್ಮದ ಮಾದರಿಗಳನ್ನಿಲ್ಲಿ ಕಾಣಬಹುದು. ತಲೆಮಾರಿಂದ ತಲೆಮಾರಿಗೆ ಜೀವನದ ದೃಷ್ಟಿಕೋನವು ಮೆಲ್ಲಗೆ ಬದಲಾಗುವ ಅಂಶವೂ ಅಲ್ಲಿ ಸ್ಪಷ್ಟವಾಗುತ್ತದೆ. "ಬಲ್ಲವರ ಬಲ್ಲರು ಏಕತಾನದ ನಾದ. ಜೀವಮಾನ್ಯದ ಅನುಭವವು" ಎಂಬಂತಹ ಭಾವನಾಧ್ವನಿ ಕಾದಂಬರಿಯುದ್ದಕ್ಕೂ ಹರಿಯುವುದು. ಇದು Thomas Hardyಯ Return of the Native ಎಂಬ ಕಾದಂಬರಿಯ ಸ್ಥಾಯಿ ಭಾವವಾಹಿನಿಯನ್ನು ನೆನಪಿಗೆ

ತಂದುಕೊಡುತ್ತದೆ. ಕಾರಂತರ "ಜೋಮನ ದುಡಿ"ಯೊಂದು ಗದ್ಯಗೀತವೆಂಬಷ್ಟು ಹೃದಯವಿದ್ರಾವಕವಾದ ಗ್ರಾಮಜೀವನ ಚಿತ್ರಣ. ಅದರಲ್ಲಿ ಬರುವ ಜೋಮ–ಬೆಳ್ಳಿಗಳೆಂಬ ತಂದೆ–ಮಗಳು ಅನುಭವಿಸುವ ದುಃಖ ಅವರ್ಣನೀಯ. ಹರಿಜನನಾದ ಜೋಮನು ಕೃಷಿಯನ್ನು ತನ್ನದೆಂದುಕೊಳ್ಳುವ ಗದ್ದೆಯಲ್ಲಿ ಮಾಡಲಾರದ ಅನಧಿಕೃತತೆಯು ದುರಂತಕರ. ಅವನು ದುಡಿಯನ್ನು ಬಾರಿಸಿ ಅದರ ನಾದದಲ್ಲಿ ಲೀನನಾಗಿ ದಾರಿದ್ರ್ಯಾದಿ ದುಃಖಗಳನ್ನು ಆಗೀಗ ಕ್ಷಣಕಾಲ ಮರೆಯುವ ಅಂಶವು ಅವನ ಮೌಲಿಕ ರಸಿಕತೆಯನ್ನೂ ಅನಿವಾರ್ಯ ಅಸಹಾಯಕತೆಯನ್ನೂ ಬಿಂಬಿಸುತ್ತದೆ. "ಹಳ್ಳಿಯ ಹತ್ತು ಸಮಸ್ತರು" ಎಂಬ ಕಥಾ ಸಂಕಲನದಲ್ಲಿ ಬರುವ ಸೀತೈತಾಳರ ಮಡಿವಂತಿಕೆ ಮತ್ತು ಜೋಯಿಸತನ, ನಾಗಯ್ಯ ಶೆಟ್ಟರ ತಂಡರಸತನ, ಜನ್ನಪೈಗಳ ಸಾಹುಕಾರಿಕೆ ಮತ್ತು ವ್ಯಾಪಾರ ಕೌಟಿಲ್ಯ, ಮೀಸೆ ಸುಬ್ಬನ "ಅರೆಬಿಳಿಯ ಮೈ. ಅಗಲ ಎದೆ, ದುಂಡು ಮುಖ. ದುಂಡು ದುಂಡು ರಟ್ಟೆ. ಕಪ್ಪು ಮೀಸೆ. ತಲೆಯ ಹಾಳೆ. ಸೊಂಟದ ಹಿಂದೆ ಮಾಮೂಲು ಮೂರ್ತಿ ಕತ್ತಿ, ನಡುವಿನ ಮೊಳ ಅಗಲದ ಪಂಚೆ, ಒಕ್ಕಾಲು ಸರಿಗೆ, ಕಾಲಿಗೆ ಜೇಕಿನ ಜೋಡು"ಗಳು ಸೂಚಿಸುವ ಅವನ ಕಳ್ಳಂಗಡಿ ಗುತ್ತಿಗೆದಾರಿಕೆ, ಮೊಗೇರ ಅಣ್ಣುವಿನ "ಕಾಸು ಹಿಡಿಸಲಿಕ್ಕೆ ಪ್ರಾಂಬ್ರೂ ಇಲ್ಲ, ಬಂಟರೂ ಇಲ್ಲ. ಪೇಟೆಯವರು ಇರುವುದು ಕಾಸು ಸುಲಿಯಲಿಕ್ಕೆ; ಅವರು ಖರ್ಚು ಮಾಡಲಿಕ್ಕಲ್ಲ. ಅದಕ್ಕೆಲ್ಲ ನೋಡು ಮೊಗೇರರೇ ಬೇಕು" ಎಂಬ ವಸ್ತುಜ್ಞಾನ; ಅಕ್ಕಸಾಲಿ ತಿಮ್ಮಪ್ಪನ ಮದ್ದಲೆಗಾರಿಕೆ, ಸೊನ್ನಗಾರಿಕೆ ಮತ್ತು ಸರಳತೆ; ಪಾಟಾಳಿ ಪರಮಯ್ಯನ ಸಮಾಜಸೇವೆ, ಅಕ್ಕಣಿಯ ವೇಶ್ಯಾ ಪರಾಕ್ರಮ, ಚನ್ನಮಯ್ಯರ ವಿಷಯಲಂಪಟ ಮುಂದುಗಾರಿಕೆ, ಗಾಣದ ಸಂಕಪ್ಪನ ಗಂಡಾಗುಂಡಿತನ – ಒಂದೇ ಎರಡೇ! ಇಂಥ ಎಷ್ಟೋ ಮಾದರಿಗಳು ಬರುತ್ತವೆ. 1944ರಲ್ಲಿ ಗ್ರಂಥಕರ್ತರು ತಮ್ಮ "ಮೊದಲಮಾತಿ"ನಲ್ಲಿ ಹೇಳಿರುವಂತೆ "ಜನಗಳಲ್ಲಿ ಜಾತೀಯತೆಯ ಮತ್ಸರ, ಬಡತನದಿಂದ ಬರುವ ಕುಯುಕ್ತಿ, ಹಣದ ಸೊಕ್ಕು, ಸಣ್ಣ ತೆರನ ಬಂಡವಾಳಗಾರಿಕೆ, ಜತೆಗೆ ಮಾನವ ಸಹಜವಾದ ಪ್ರಣಯ ಸ್ಪರ್ಧೆ"ಗಳು ಹೇಗೆ ಗ್ರಾಮದ ಸಮಾಜ ಜೀವನವನ್ನು ಕಲಕುತ್ತವೆ ಎಂಬುದನ್ನು ಉಕ್ತ ಕಥಾ ಸಂಗ್ರಹದಲ್ಲಿ ನಾವು ಕಾಣಬಹುದು. 'ಬೆಟ್ಟದ ಜೀವ' 'ಶನೀಶ್ವರನ ನೆರಳಿನಲ್ಲಿ' 'ಜಾರುವ ದಾರಿಯಲ್ಲಿ' ಮುಂತಾದ ಕಾದಂಬರಿಗಳಲ್ಲಿಯೂ ಕಾರಂತರು ಗ್ರಾಮೀಣರ ಮುಗ್ಧ ಮನೋಧರ್ಮದ ವಿವಿಧ ಮಾದರಿಗಳನ್ನು ಕೊಟ್ಟಿದ್ದಾರೆ. ಹೆಚ್ಚಾಗಿ ಅವರ ಹಲವಾರು ಕಾದಂಬರಿಗಳಲ್ಲಿ ಬರುವ ಸನ್ನಿವೇಶಗಳೂ ಪಾತ್ರ

ಗಳೂ ಗ್ರಾಮೀಣ ಅಥವಾ ಅರೆ ಗ್ರಾಮೀಣ ಸಾಂಸ್ಕೃತಿಕ ಆವರಣವುಳ್ಳಂಥವು ಗಳೇ. ಆದುದರಿಂದ ಕಾದಂಬರಿಕಾರರಲ್ಲಿ ಕಾರಂತರ ಜಾನಪದ ಜೀವನ ಪ್ರಜ್ಞೆ ಎತ್ತಿ ಹೇಳಬಹುದಾದ ಮಾದರಿಯದು. ಅವರ ಹಲ ಕೆಲ ಕಾದಂಬರಿಗಳಲ್ಲಿ ಬರುವ ಪಾತ್ರಗಳ "ಗ್ರಾಮೀಣ ನಾಗರಿಕತೆ" ಹಲವು ಮುಖಗಳದ್ದು. ಸಮಾಜ ಸುಧಾರಕರಿಗೂ ಗ್ರಾಮೋದ್ಧಾರಕರಿಗೂ ಕಾರಂತ ಸಾಹಿತ್ಯವು ಗ್ರಾಮ ಜೀವನದ "ಮನಃ ಶಾಸ್ತ್ರ" ಎಷ್ಟು ಜಿಡುಕಾದದ್ದೆಂಬುದನ್ನು ತೋರಿಸಿಕೊಡುವ ಕನ್ನಡಿ. ಕೈಪಿಡಿ – ಎಂದರೆ ಹೆಚ್ಚೆನಿಸದು.

ಜಿ. ಪಿ. ರಾಜರತ್ನರರ "ರತ್ನನ ಪದ"ಗಳಲ್ಲಿ ಬರುವ "ಯೆಂಡ್ಕುಡ್ಕ ರತ್ನ"ನು ಒಂದು ತರಹದ ಅರೆಜಾಣ ಗ್ರಾಮರಸಿಕ. ಅವನು ಅವನ ಕಾರ್ಯಕ್ಷೇತ್ರ ಪಟ್ಟಣವಾದರೂ ಮನೋಧರ್ಮ ಗಾಮಿಲನದು. "ಯೆಂಡವೆ ನಂ ದೇವ್ರು ತ್ರಿಮೂರ್ತಿ ಯೆಂಡ" ಎಂಬ ಸಿದ್ಧಾಂತ ಹಿಡಿದು ಜೀವನ ಸಂಗ್ರಾಮ (Effort at living) ಮಾಡುವುದರಲ್ಲಿ ಅವನ ಗ್ರಾಮ್ಯತೆ ಎದ್ದು ಕಾಣುತ್ತದೆ. "ಯೆಂಡಕ್ಕೊಂಪೆಲ್ಲಾ ಹೆ ಕೂದ್ಲಾಗ ಸಿಕ್ಸಿ" ಕೊಳ್ಳುವುದು ಅವನ ಆಪದ್ಧರ್ಮ ವಾದರೂ "ಸಾಸ್ವತವೇನು ಬುಟ್ಟೀಗ್ ಬಿದ್ ಮೀನು" ಎಂಬುದನ್ನರಿತವನಾದುದ ರಿಂದ "ಕಾಸಿಕ್ಕಾಸ್ ಗಂಟ್ಹಾಕಿ! ಹೊಟ್ಟೆಗ್ ಜೆನ್ನಂಟಾಕಿ! ನಾನು ಬಿಸ್ಲಿಟ್ಟಿ! ದುಡ್ಡೈತೆ ಗಟ್ಟಿ" ಅನ್ನುವ ಪಟ್ಕನೆಯೊಡೆಯನಾದ ಮನ್ಯನ ಧೋರಣೆ ಅವನಿಗೆ ಸೇರದು. "ಕಾಯ್ಕೊಟ್ರೆ ದೇವ್ರು ಪರ್ಜಂಡ, ಕಾಸ್ಕೊಟ್ರೆ ಮುನ್ಯಿಂದು ಯೆಂಡ" ಎಂಬ ಅವನ ಉದ್ಗಾರದಲ್ಲಿ ಸ್ವಾರ್ಥ ಸಾಧನೆಗಾಗಿ ದೇವರಲ್ಲಿ ಹರಕೆ– ಪ್ರಾರ್ಥನೆಗಳನ್ನು ಸಲ್ಲಿಸುವವರ ವಿಡಂಬನೆಯಿದೆ: "ನಂ ನೋಡಿ ನಗ್ತಾರೆ ಭಕ್ತುರ್ಗೆ ಬೊಗ್ತಾರೆ" ಎಂಬ ಮಾತಿನಲ್ಲಿಯೂ ಹಲವಾರು ಭಕ್ತರು ರಾವಣ ಸನ್ಯಾಸಿಗಳು ಎಂಬ ಧ್ವನಿಯಿದೆ. ಕುಡಿದು ಉನ್ಮತ್ತನಾಗಿ ತೂರಾಡುತ್ತಿದ್ದಾಗಲೂ "ಕುಡ್ಡಿದ್ದೀಯಾ ರಸ್ತೆ?" ಎಂದು ಅವನು ರಸ್ತೆಗೆ ಸವಾಲು ಹಾಕುವುದು ಅವನ ಜಾಣ್ಮೆಯ ವಿಪರೀತ ಪ್ರಕಾಶಕ್ಕೊಂದು ನಿದರ್ಶನ.

"ಏಳ್ಕೊಳ್ಳೋಕೊಂದೂರು
ತಲೇ ಮ್ಯಾಗ್ ಒಂದ್ ಸೂರು
ಮನ್ಸಾಗ್ಕೆ ಭೂಮ್ತಾಯಿ ಮಂಚ
ಕೈಯಿಂಡ್‌ದೊಳ್ ಪುಟ್ನಂಜಿ
ನಗ್‌ನಗ್ತಾ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ"

ಎಂಬ ಅವನ ತತ್ವಜ್ಞಾನವು ಭಾರತದ ಸಾಮಾನ್ಯ ಹಳ್ಳಿಗರನೇಕರ ಜೀವನ ವಿಜ್ಞಾನವನ್ನು ಸಾರುತ್ತದೆ. ಮಹತ್ವಾಕಾಂಕ್ಷೆಗಳಿಲ್ಲದ ಸಾದಾ ಜೀವನ ನಮ್ಮ ಹಲವು ಹಳ್ಳಿಗರ ಹೃದಯದಲ್ಲಿ ಬೇರುಬಿಟ್ಟಿದೆ.

"ನಮ್ಮ ಊರಿನ ರಸಿಕರ"ನ್ನು ಬರೆದ **ಗೊರೂರು ರಾಮ ಸ್ವಾಮಯ್ಯಂಗಾರ**ರನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಅವರ ರಸಿಕರು ಗ್ರಾಮ್ಯರಾಗಿ. ಕೆಲವೊಮ್ಮೆ ನಾಗರಿಕರಿಗೆ ಹಾಸ್ಯಾಸ್ಪದರಾಗಿ ಕಾಣುವಂತೆ ನಡೆದುಕೊಳ್ಳುತ್ತಾರೆ. ಬಯಲಾಟದಲ್ಲಿ ಪಾತ್ರವಹಿಸುವ ಉಮೇದುವಾರರಲ್ಲಿದು ಎದ್ದು ಕಾಣುತ್ತದೆ. ಹಳ್ಳಿ ಕವಿ ನಾಣಿಯಲ್ಲೂ ಈ ಅಂಶ ಪ್ರಕಟವಾಗುತ್ತದೆ. ಅವರ "ಹಳ್ಳಿಯ ಚಿತ್ರಗಳ"ಲ್ಲಿ ಹೆಚ್ಚಾಗಿ ಗ್ರಾಮೀಣ ರಸಿಕತೆ, ಸಹಕಾರ ಬುದ್ಧಿ. ಜಾತಿದ್ವೇಷದ ಅಭಾವ. ಚಿಲ್ಲರ ಜಂಭದಂಭಗಳು ಬೆರಕೆಯಾಗಿ ನಾನಾ ವ್ಯಾವ ಹಾರಿಕ ಸನ್ನಿವೇಶಗಳ ಮೂಲಕ ಹಡಿಮೂಡಿದ್ದರೂ ಒಟ್ಟಿನಲ್ಲಿ ಅವರ ಪಾತ್ರ ಗಳು Lovable ನಮಗೆ ಪ್ರಿಯವೆನ್ನಿಸುವಂತಿವೆ. ಆ ಪಾತ್ರಗಳ ಪೂಜೆ–ಪುರ ಸ್ಕಾರ. ಆಟ–ಪಾಠ, ಹಬ್ಬ–ಜಾತ್ರೆಗಳ ಸಂಘಟನೆ ಮುಂತಾದವನ್ನು ಓದುವಾಗ ತೃಪ್ತರೂ ಸ್ನೇಹಪ್ರಧಾನರೂ ಸರಸರೂ ಆದ ಜನರ ಸಮಾಜವನ್ನು ಗ್ರಾಮವಾ ವರಣದಲ್ಲಿ ಕಂಡಂತಾಗುತ್ತದೆ. ಅಂದರೆ ಪರಂಪರಾಗತ ಗ್ರಾಮಜೀವನ ಪದ್ಧ ತಿಯ ಒಂದು ಒಳ್ಳೆಯ ಅವಶೇಷವಿದು ಎನ್ನಿಸುತ್ತದೆ. ಆ ಜನರ ಹುಂಬತನ ಅರೆ ಜಾಣ್ಮೆಗಳಷ್ಟೇ ಅವರ ಗ್ರಾಮೀಣತೆಯನ್ನು ಸಾರುತ್ತವೆ. ಆದರವರು ಸುಸಂಸ್ಕೃತರ ಸಹಾನುಭೂತಿಯನ್ನು ಕಳೆದುಕೊಳ್ಳದೆ. ಒಂದು ವಿಧದ ಸಹಜ "ಸಾತ್ವಿಕತೆ"ಯವರೆಂದು ತೋರುವಂತೆ ಚಿತ್ರಿಸಿರುವುದಂ ಇಂದಿನ ಗ್ರಾಮ ಪ್ರಪಂಚದ ನಹರದ ಒಂದು "ಓಯಸಿಸ್ಸೆ"ನ್ನಬಹುದು.

೨

ಬ್ರಿಟಿಷರ ಆಡಳಿತವು ಭಾರತದಲ್ಲಿಯ ಮನೆತನಸ್ಥರ ಗೌರವ ಕಲ್ಪನೆ ಗಳನ್ನು ಬದಲಾಯಿಸುತ್ತ ಅವರು ದಾಸ್ಯದ ಹಂಗಿನರಮನೆಯ ಸುಖವನ್ನು ಗಳಿಸಿ ತೃಪ್ತರಾಗಿರಲು ಭಗೀರಥ ಯತ್ನವನ್ನು ಮಾಡಲು ಪ್ರೇರಿಸಿದ್ದು ಮೊದಲೇ ಶಿಥಿಲವಾಗಿದ್ದ. ಅಸ್ಥಿರತೆಗಿಳಿದು ಶಕ್ತಿಹ್ರಾಸ ಹೊಂದಿದ್ದ ಮತ್ತು ದುರಭಿಮಾನ ವನ್ನು ಬೆಳೆಸಿಕೊಂಡಿದ್ದ ಹಲವಾರು ಮುಖಂಡರ ಧನಹಾನಿಗೆ. ಮಾನಹಾನಿಗೆ ಅಥವಾ ಮಾನಾಭಾಸ ಲಾಭಕ್ಕೆ ಕಾರಣ. ಅಂಥ ಘಟನೆಗಳು ಅನೇಕ ಹಳ್ಳಿ–ಪಟ್ಟಣಗಳಲ್ಲಿ ನಡೆದವು. ಅಂದು ಹಿಂದುಗಳಿಗೆ ಅಂಟಿದ (Inferiority

Complex) ಆತ್ಮಾಧಮ ಭಾವನೆ ಇಂದೂ ಅಳಿಸಿಹೋಗಿಲ್ಲ. ಬಿಳಿಯ ದೇವತೆಗಳ ಧನಬಲ – ಸೈನ್ಯಬಲಗಳು ನಡೆಸಿದ ದರ್ಬಾರಿಗೆ ಭಾರತೀಯ ಅಭಿಮಾನ – ಅಭಿರುಚಿಗಳನ್ನು ಬಲಿಕೊಟ್ಟು ಗಾಂಧಿಯವರ ಮಾತಿನಲ್ಲಿ "Emasculated ಪೌರುಷ ಕಳೆದುಕೊಂಡ" ಮತ್ತು ಪೌರುಷಾಭಾಸವನ್ನು ಮೆಚ್ಚಿಕೊಂಡ ಪ್ರತಿಷ್ಠಿತರು ಬ್ರಿಟಿಷ್ ದೊರೆಗಳಿಂದ ಬಿರುದು - ಬಾವಲಿಗಳನ್ನು ಪಡೆದು ಮಹಾ ಪ್ರತಿಷ್ಠಿತರೆನ್ನಿಸಿಕೊಳ್ಳುವುದಕ್ಕಾಗಿ ಹೆಣಗುವುದನ್ನು ಹಳ್ಳಿಗಳಲ್ಲೂ ಕಾಣಬಹುದಾಗಿತ್ತು. **ಡಾ. ರಂ. ಶ್ರೀ ಮುಗಳಿಯವರು** ಬರೆದ "ನಾಮಧಾರಿ" ಎಂಬ ನಾಟಕವು ಹೀಗೆ ಗ್ರಾಮದ ಗೌಡ ಮಹಾಶಯನೊಬ್ಬನು ರಾವ್‌ಸಾಹೇಬಗಿರಿಯನ್ನು ಗಳಿಸಲು ಹರಕು - ಮುರುಕು ಇಂಗ್ಲೀಷನ್ನು ಕಲಿಯ ಹೋಗಿ, ಯೂರೋಪೀಯ ಉಡುಪನ್ನು ಧರಿಸಲು ಅಭ್ಯಸಿಸಿ, ಮನೆಯ ದಂಪತಿಯನ್ನು ಗೌಡಸಾನಿಯೆಂದು ಅನಾದರಿಸಿ. ಕ್ರೈಸ್ತ ತರುಣಿಯೊಬ್ಬಳೊಡನೆ ತನ್ನ ಕಾರ್ಯದರ್ಶಿಯ ತರಬೇತಿನ ಪ್ರಕಾರ "ಲವ್ವು (Love)" ಮಾಡಲು ಹೋಗಿ, ಸಾರ್ವಜನಿಕ ಭಾಷಣಗಳನ್ನು ಮಾಡಲೆದ್ದು ಮಂಗನಂತಾದ ಕಥೆ. ವಿಷಾದಯಾದ ದುರಂತ ವಾಸ್ತವಿಕವಾಗಿ ಬರುತ್ತದೆ. ಮನುಷ್ಯರಿಗೆ Recognition craze ಮನ್ನಣೆ ದಾಹವು ಹೆಚ್ಚು. ಶಿಶುಗಳಲ್ಲೂ ಪಶುಗಳಲ್ಲೂ ಈ ಮನ್ನಣೆ ಬಯಕೆಯಿರುವಾಗ ಪ್ರತಿಷ್ಠಿತನಾದ ಮಾನವೇಂದ್ರನಲ್ಲಿ ಇರುವುದೇನು ಅಸಹಜ? ಖಂಡಿತವಾಗಿಯೂ ಅಲ್ಲ. ಆದರೆ ಯಾರಿಂದ ಹೇಗೆ ಯಾವುದರ ಮೂಲಕ ಮನ್ನಣೆಯನ್ನು. ಗೌರವವನ್ನು ಪಡೆಯುವುದು ಉಚಿತ. ನ್ಯಾಯ. ಚಿರಸ್ಥಾಯಿಯಾದ ಲಾಭ ಎಂಬುದನ್ನು ವಿವೇಚಿಸಲಾರದ ಧೃತರಾಷ್ಟ್ರರೂ ಶುಕ್ರರೂ ಸಾಮಾನ್ಯ - ಮಾನ್ಯ ಪ್ರಜೆಗಳಾಗಿ ಗ್ರಾಮಸಿಂಹ ದರ್ಪದಿಂದ ಸುತ್ತಲಿನ ಸ್ವಕೀಯರನ್ನು ಬಾಯಿ ಮುಚ್ಚಿಸಿ ಅಪಾತ್ರರನ್ನೋಲೈಸಲೆಂದು ಸರ್ವನಾಶ ಮಾಡಿಕೊಳ್ಳಲು ಛಲಹಿಡಿಯುವುದು ಗ್ರಾಮ್ಯದಲ್ಲಿ ಗ್ರಾಮ್ಯ. ಗ್ರಾಮದ ಪ್ರಾತಿನಿಧಿಕ ಮಹನೀಯನ ಚಾಪಲವನ್ನು ಪ್ರಸ್ತುತ ನಾಟಕವು ಗ್ರಾಮ್ಯವಾದ ಭಾಷೆಯ ಸಂವಾದಗಳ ಮೂಲಕ ಬಹಳ ಚೆನ್ನಾಗಿ ಮೂಡಿಸಿದೆ. ಈ ಗ್ರಾಮ್ಯ ದೌರ್ಬಲ್ಯವು ಸಂತಾಪಕರವಾದರೂ ನಾಟಕದಲ್ಲಿ ಭಾವಿ ರಾವ್ ಸಾಹೇಬನು ಹಾಸ್ಯಾಸ್ಪದ ರೀತಿಗಳಿಂದ ನಡೆದುಕೊಳ್ಳುವುದರಿಂದ ಪ್ರೇಕ್ಷಕರಿಗೆ ನಗೆ ಬರುತ್ತದೆ. ಪ್ರೇಕ್ಷಣಾನಂತರ ಮಾತ್ರ ನಮ್ಮ ಜನದ ಮಂಕುತನದ ಬಗ್ಗೆ ಕೋಪ. ತಾಪ. ದುಃಖ. ದುಮ್ಮಾನಗಳೆಡೆಗೊಡುವ ವಿಚಾರ ತಲೆದೋರುತ್ತದೆ. ಭಾರತದ ಅಂದಿನ ಬಹುಸಂಖ್ಯರ (ಇಂದಿನ ಸಹ–ಎಂಬುದೂ ಹಲವಾರು ಆಧುನಿಕ "ಮಿಡ್ ದಾದಾ"

ರಿಗೆ ಅನ್ವಯಿಸುತ್ತವೆ.) ಅಭಿಮಾನ ಶೂನ್ಯತೆಗೆ ಪ್ರಸ್ತುತ ಕಥಾನಾಯಕನು ಮಹಾ ಸಂಕೇತವಾಗಿದ್ದಾನೆ.

ಆನಂದರ "ಸಾಕೊಂದ ಹುಡುಗಿ" ಯಲ್ಲಿ ಬಸವಿ ಬಿಡುವ ಗ್ರಾಮ ಸಂಪ್ರದಾಯದ ಚಿತ್ರಣವಿದೆ. ಕಥಾನಾಯಕನಿಗೆದುರಾದ ಗೌಡರ ಮಗಳ ಸಂಪ್ರದಾಯ ದಾಸ್ಯದ ದೆಸೆಯಿಂದ ಊರಿನ ಸಾರ್ವತ್ರಿಕ ಕಾಮನೀತಿಯ ಉಲ್ಲಂಘನವಾಗುವುದನ್ನೂ ಆ ಮೂಲಕ ಸಾಮಾಜಿಕರ ಕೌಟುಂಬಿಕ ಜೀವನ ಹದಗೆಡುವುವನ್ನೂ ಅನುಲಕ್ಷಿಸಿ ಆತನು ಆ ಮುಗ್ಧೆಗೆ ಸ್ವಾಭಿಮಾನ–ಸತ್ಯ ಸ್ಫುರಣಗಳುಂಟಾಗುವಂತೆ ಬೋಧ ಮಾಡುತ್ತಾನೆ. ದೇವರಿಗೆ ಬಿಟ್ಟ ಬಸವಿಯು ಹಲವು ಜನರ ಉಪಭೋಗದ ಫಲವಾಗಿ ಉಚ್ಛಿಷ್ಟಳಾಗುವುದರಿಂದ ದೇವ ಭೋಗ್ಯತೆ ಅವಳಲ್ಲುಳಿಯದು ಎಂಬ ಅಂಶ ಮನಸ್ಸಿಗೆ ಖಚಿತವಾದ ಕೂಡಲೇ ಭೋಗ್ಯತಾಯೋಗ್ಯತೆಯುಳ್ಳ ಆ ಗ್ರಾಮಸುಂದರಿ ತನ್ನ ಬಸವಿತನಕ್ಕಾಗಿ ಹೇಸಿ ಅಸುವನ್ನು ನೀಗುತ್ತಾಳೆ. ಈ ಸಣ್ಣ ಕತೆಯ ದೊಡ್ಡ ಕಥಾನಾಯಕನಿಗಾಗ ತಾನು ಮಾಡಿದ ಒಳ್ಳೆಯ ಕೆಲಸದಿಂದ ಕೇಡಾಯ್ತಲ್ಲ ಎಂದು ಸ್ವಲ್ಪ ದುಃಖ ವಾಗುತ್ತದೆ. ಆದರೆ ಬಸವಿಯ ದುರ್ಮರಣ ಅನಿವಾರ್ಯವಾಗಿರಬಹುದು; ಅವಳ ಸಮಾಜ ಅವಳಿಗಿರಗೊಡುತ್ತಿದ್ದಿಲ್ಲ ಎನ್ನಬಹುದು. ಸಮಾಜದ ಅಂಗ ವಾದ ಯಾವ ಜಾತಿಯೂ ಮತವೂ ಬಹುಶಃ ಸೂಳೆಗಾರಿಕೆಯನ್ನು ಬಿಟ್ಟ ಸೂಳೆಗೆ ಗೌರವಾರ್ಹ ವೃತ್ತಿಯಿಂದ ಶೇಷಾಯುಷ್ಯವನ್ನು ಕಳೆಯಲು ಬಿಡುತ್ತಿರಲಿಲ್ಲ ಎಂಬ ಸನ್ನಿವೇಶವಿದ್ದಿರಬಹುದು. ಪರಂಪರೆಯ ಅಂಧಾನುಯಾಯಿಗಳು ಸರ್ವದೇಶ ಕಾಲಗಳಲ್ಲೂ ಹಿಂಸ್ರಜಂತುಗಳಿಗಿಂತ ಹೆಚ್ಚು ಹಿಂಸಾಪರರಾಗಿರುತ್ತಾರೆ (ನವ್ಯತೆಯ ಅಂಧಾನುಯಾಯಿಗಳೂ ಈ ವರ್ಗದಿಂದ ಎಳ್ಳಷ್ಟೂ ಭಿನ್ನರಾಗಿರರು). ಆನಂದರ ಸಣ್ಣ ಕತೆಗಳಲ್ಲಿ ಕೆಲವು ಹೀಗೇ ಗ್ರಾಮ ಪಾತ್ರಗಳ ಮನೋವ್ಯಾಪಾರಗಳಿಗೆ ಕನ್ನಡಿ ಹಿಡಿಯುತ್ತವೆ.

ಕೋ. ಚೆನ್ನಬಸಪ್ಪನವರು "ಮುಕ್ಕಣ್ಣನ ಮುಕ್ತಿ" ಯಲ್ಲಿ ಸಮಾಜದಲ್ಲಿ ಜಾತೀಯ ತಾರತಮ್ಯದ ದೆಸೆಯಿಂದ ಉಚ್ಚರು ನೀಚರನ್ನು ಶೋಷಿಸುವ ಗ್ರಾಮ್ಯತೆ ಯನ್ನು ಚಿತ್ರಿಸಿದ್ದಾರೆ. ಒಕ್ಕಲು ಮಗನೊಬ್ಬನಿಗೂ, ಗೌಡಕುಮಾರನೊಬ್ಬನಿಗೂ ನಡುವೆ ಉಂಟಾದ ಕಲಹ ವಿಲಕ್ಷಣವಾದುದು. ಒಕ್ಕಲುಮಗ ತನ್ನ ಸ್ಥಾನಮಾನ ಗಳಿಗೆ ಮಿಕ್ಕಿದ ಎತ್ತಿನ ಗಂಡ್ಡನನ್ನು ಸಾಕಿದ್ದಾನೆ ಎಂಬುದು ಗೌಡ ಒಡೆಯನ ಮುನಿಸಿಗೆ ಕಾರಣ. ಈ ಮುನಿಸಿನಿಂದ ಗೌಡನು ಒಕ್ಕಲಿಗೆ ನಾನಾ ಪ್ರಕಾರದಿಂದ ತೊಂದರೆ ಕೊಡುತ್ತಾನೆ. ಭಾರತದ ಗ್ರಾಮ ಸಮಾಜವು ಹಿಂದಿನ ರೋಮಿನಲ್ಲಿದ್ದ

Patrician and Plebean ಎಂಬ ಅಥವಾ Bourgeois and Proletarian ಎಂಬಂತಹ ಎರಡು ಭಾಗಗಳಿಂದ ಕೂಡಿತ್ತು ಎಂಬುದಕ್ಕಿದು ಸಾಕ್ಷಿ. ಒಂದು ವಿಶಿಷ್ಟ ಅಧಿಕಾರಗಳ ಮೂಲಕ ಜನ್ಮತಃ ಗಣ್ಯ, ಇನ್ನೊಂದು ಅಂಥ ಅಧಿಕಾರ ಗಳಿಲ್ಲದೆ ಜನ್ಮತಃ ಅಗಣಿತ. ಆನುವಂಶಿಕವೂ ಅನುಜಾತೀಯವೂ ಆದ ಗಣ್ಯತೆ ಕೆಲವರಿಗಷ್ಟೇ ಮೀಸಲು, ಮಿಕ್ಕ ಬಹುಸಂಖ್ಯರು ಅವರ ತೊತ್ತುಗಳು—ಎಂಬ ಗ್ರಹಿಕೆ ಗ್ರಾಮಜೀವನವನ್ನು ನಿಯಂತ್ರಿಸುತ್ತಿದ್ದ ಅವಧಿಯಲ್ಲಿ ಒಕ್ಕಲಿನ ಮುಕ್ಕಣ್ಣ (ಎತ್ತಿನ ಹೆಸರು) ರುದ್ರಸಂಕೇತವಾಗುತ್ತಾನೆ, ಒಕ್ಕಲಿನಲ್ಲಿ ಧರ್ಮಸಂಸ್ಥಾಪನಾ ವೇಶವನ್ನು ತುಂಬುತ್ತಾನೆ. ಈ ಕತೆಯಲ್ಲಿ ಒಕ್ಕಲು ಧೀರೋದಾತ್ತ. ಗೌಡ ಧೀರೋದ್ಧತ - ಖಲನಾಯಕ ಎಂಬುದು ಸ್ಪಷ್ಟ. ಗಣ್ಯತೆಯಿಲ್ಲದವನನ್ನಾಶ್ರಯಿಸಿದ ಪ್ರಾಣಿಗೂ ಗಣ್ಯತೆಯಿಲ್ಲ; ಮೂಲಭೂತ ಯೋಗ್ಯತೆಯಿಂದ ಆ ಪ್ರಾಣಿ ಗಣ್ಯವಾಗಿ ಬಾಳಲು ಗಣ್ಯರು ಬಿಡರು—ಎಂಬುದು ಇಲ್ಲಿ ಕಾಣುವ ಮಾನವಸ್ವಭಾವದ ಚಿತ್ರ.

೩

ಕ್ರಿ. ಶ. 850ರಿಂದ 1150ರ ವರೆಗೆ ಕನ್ನಡ ಸಾಹಿತ್ಯದ ಪ್ರಾಚೀನ ಉಚ್ಛ್ರಾಯ ಕಾಲ ನಡೆಯಿತು. ಆ ಮೇಲೆ 1150ರಿಂದ 1799ರ ವರೆಗಿನ ಕಾಲವು ಈ ಸಾಹಿತ್ಯದ ಮಧ್ಯಯುಗವೆನ್ನಿಸಿದೆ. ಮುಂದೆ ಪ್ರಾರಂಭವಾದ ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಶ್ಮಶಾನ ಶಾಂತಿಯನ್ನು ಕೆಲ ಪ್ರದೇಶದ ಗ್ರಾಮಗಳು ಅನುಭವಿಸುತ್ತ ಉಳಿದರೆ, ಕೆಲ ಪ್ರದೇಶದ ಗ್ರಾಮಗಳು ಅರಿಷಡ್ವರ್ಗಗ್ರಸ್ತರಾದ ಸ್ಥಳೀಯ ಗಣ್ಯರ ಕಾಟದಿಂದ ಸೋತು ಸುಣ್ಣವಾಗುತ್ತ ನಡೆದವು. ಉಳಿದ ಗ್ರಾಮಗಳಲ್ಲಿ ಈ ಎರಡು ಧ್ರುವಗಳ ನಡುವೆ ವಿವಿಧ ಮಟ್ಟಗಳ ಜೀವನ ನಡೆಯಿತು. ಬಿ. ಎಂ. ಶ್ರೀ. ದ. ರಾ. ಬೇಂದ್ರೆ, ಪುಟ್ಟಪ್ಪ ಮಂತಾದ ಸಾಹಿತಿಗಳ ಬಾಲ್ಯದಲ್ಲೇ ಬ್ರಿಟಿಷ್ ಪ್ರಭುತ್ವ ವನ್ನು ವಿರೋಧಿಸುವ ರಾಷ್ಟ್ರೀಯ ಚಳವಳ ಪ್ರಾರಂಭವಾಗಿ ಭರದಿಂದ ಸಾಗು ತ್ತಿತ್ತು. ಉತ್ತರ ಕನ್ನಡ ಜಿಲ್ಲೆಯ ಸಾಮುದ್ರಿಕ ಜನರ ಬಡತನ ಬೆಳೆಯುತ್ತಿತ್ತು. **ದಿನಕರ ದೇಸಾಯಿ** ಅವರು "ಉತ್ತರ ಕನ್ನಡ ಕಚ್ಚೆ" ಎಂಬ ತಮ್ಮ ಪದ್ಯದಲ್ಲಿ ಬಹಳ ರಸವತ್ತಾಗಿ ಅದನ್ನು ಚಿತ್ರಿಸಿದ್ದಾರೆ. ಕಚ್ಚೆಯನ್ನವರು—

"ಬಡ ಕಂಗಾಲರ ಭಾಗ್ಯದ ಚಿಹ್ನಾ !
ಉಡಿದಾರಕೆ ನೇತಾಡುವದಮ್ಮಾ !
ನೇತಾಡಲು ಜೋತಾಡಲು ಚಿಂದೆ
ಕನ್ನಡ ಸಂಸ್ಕೃತಿ ಮೆರೆವುದು ಮುಂದೆ !"

ಎಂದು ಬಣ್ಣಿಸಿರುವುದು ಗ್ರಾಮಸ್ಥರಾದ ಅವರಿಗೆ ತಮ್ಮ ಸಹಜೀವಿಗಳ ದಾರಿದ್ರ್ಯದಿಂದ ಉಂಟಾದ ಸಂತಾಪದ ಮಹೋನ್ನತಿಯನ್ನು ಸೂಚಿಸುತ್ತದೆ. ಕಚ್ಚೆಯುಟ್ಟ ಗ್ರಾಮೀಣಸತ್ತ ಯಾರಾದರೂ ಮೂಗು ಮುರಿದರೆ ದೇಸಾಯಿಯವರ ಸವಾಲು—

“ಆಚೆಗೆ ನೋಡಲು ಎರಡೂ ಕುಂಡೆ
ನಾಚುವುದೇತಕೆ ದೇವರ ರಂಡೆ?”

ದರಿದ್ರರಲ್ಲಿ ಪೌರುಷವನ್ನು ತುಂಬಲೆಂದು ಅವರು—

“ಹೊಡೆ ಬಡಿ ನೀ ಕಂಗಾಲರ ಬಂಡಾ
ಉರುಳಿಸಿ ಬರಿ ದಾರಿದ್ರ್ಯದ ರುಂಡಾ!
ಯಾರಪ್ಪನ ಯಾರವ್ವನ ಹಂಗು?
ಕಾಸಿದ ಕಬ್ಬಿಣಕೆಲ್ಲಿಯ ಜಂಗು?”

ಎಂದು ಘೋಷಿಸಿದ್ದಾರೆ. ಚಾರುದತ್ತನು ಹೇಳಿದಂತೆ “ಸರ್ವಂ ಶೂನ್ಯಂ ದರಿದ್ರಸ್ಯ”. ಇಡೀ ಗ್ರಾಮ-ಗ್ರಾಮಗಳೇ ಭಿಕಾರಿತನಕ್ಕಿಳಿಸಲ್ಪಟ್ಟಾಗ ಕಾವ್ಯವೆಲ್ಲಿ? ಕಲೆಯೆಲ್ಲಿ? ಸಂಸ್ಕೃತಿಯೆಲ್ಲಿ? ನಾಗರಿಕತೆಯೆಲ್ಲಿ? “ದೇವ ಧರ್ಮ ವಿಚಾರ ಸತ್ಯತೆ ಸದಾಚಾರ ಯಾವುದಿದ್ದರು ಉಂಡ ಹೊಟ್ಟೆಗೆಲ್ಲ! ಕಾವರಿಲ್ಲದ ಕರುಣನಂದನರ ಬಾಳಿನಲಿ ಯಾವುದೂ ಸ್ಥಿರವಲ್ಲ ಇದ್ದು ಇಲ್ಲ!” ಅಲ್ಲವೇ? ಭಾರತದ ಮೇಲೆ ಬ್ರಿಟಿಷ್ ಆಳಿಕೆಯಿಂದಾದ ಪರಿಣಾಮವನ್ನು ಇತ್ತೀಚೆಗೆ ವಿವರಿಸಿದ ಪ್ರಾಧ್ಯಾಪಕ ಮಹನೀಯರು ಆ ಪರಿಣಾಮದ ಒಂದು ಮುಖವನ್ನಷ್ಟೇ ಚಿತ್ರಿಸಿದ್ದಾರೆ. (ಡಾ. ಕೆ. ಎಂ. ಪಣಿಕ್ಕರರು ತಮ್ಮ ‘India at cross roads’ ಎಂಬ ಪುಸ್ತಕದಲ್ಲಿ ಕೊಟ್ಟದ್ದೂ ಏಕಮುಖಚಿತ್ರ ಎಂದು ಕೆಲವರ ಮತ.) ಇನ್ನೊಂದು ಮುಖವನ್ನು ಅವರು ಬಹುಶಃ ಸಾಹಿತಿಗಳಿಗೆ ಬಿಟ್ಟುಕೊಟ್ಟಿದ್ದಾರೆ ಎನ್ನಬಹುದು. ಬ್ರಿಟಿಷ್ ಆಡಳಿತ ನಡೆಸಿದ ಆರ್ಥಿಕ ಶೋಷಣೆಗೆ ದಿನಕರ ದೇಸಾಯಿಯವರ ಹಲವಾರು ಕವನಗಳು ಪ್ರಕಟನ ಮಾಧ್ಯಮಗಳಾಗಿವೆ. ಅವುಗಳಲ್ಲಿ ಜೀವನಸತ್ಯ-ಕಾವ್ಯಸತ್ಯಗಳು ಏಕೀಕೃತವಾಗಿದೆ.

ಸು. ರಂ. ಎಕ್ಕುಂಡಿಯವರು 1953ರಲ್ಲಿ ಬರೆದ “ಸಂತಾನ”ದಲ್ಲಿಯ “ರೈತಸಭೆ” ಎಂಬ ಪದ್ಯವು ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಾಂತರಗಳ ಗಣ್ಯ ಸಮಸ್ಯೆಯನ್ನು ವರ್ಣಿಸುತ್ತದೆ. ಅದಾವುದು? ಅನ್ನಕ್ಕೆ ಬ್ರಹ್ಮತ್ವ ಬಂದ ಕಥೆ. ಆಹಾರ ಸಮಸ್ಯೆ. ಆಹಾರದ ಬಿಕ್ಕಟ್ಟನ್ನು ಬಿಡಿಸಲು ಖಾದಿಧಾರಿ ಮುಖಂಡರು ರೈತ ಸಭೆಯೊಂದನ್ನು ಸೇರಿಸುತ್ತಾರೆ.

"ನಮ್ಮ ಮುಖಂಡರು ಮಾತಾಡಿದರು
ಎರಡೂವರೆ ತಾಸು.
ರೈತರ ಮನದಲಿ ಬಿಂಬಿಸುವಂತೆ
ಮೇಜಿನ ಬಳಿ ಗುದ್ದಾಡಿದರು.
....
ಕೊರಳಿಗೆ ಗೆಣಸಿನ ಮಾಲೆಯು ಹಾಕಲು
ಗೌಡ ಪಟೇಲರು ಬಾಗಿರಲು
ನುಡಿಯಿತು ಭಾಷಣಕಾರರ ಕೊರಲು:
ಹಸಿವಾಗಿದೆ ಹೊಟ್ಟೆ"

ಇದಕ್ಕೆ "ಆಹಾರದ ಬಿಕ್ಕಟ್ಟುಂಟು, ಉಪವಾಸ ವ್ರತ ಸಾಧಿಸಿರಿ" ಎಂದು ಪಟೇಲನು ಉತ್ತರ ಕೊಡುತ್ತಾನೆ. ಈ ವಿಡಂಬನ ಕಾವ್ಯವು ರೈತರ ನಡುವೆ ಹೋಗಿ "ಉಪವಾಸ ಮಾಡಿರಿ, ಗೆಡ್ಡೆ ಗೆಣಸುಗಳ ಶೋಧಿಸಿರಿ" ಎಂದು ಮುಂತಾಗಿ ಬೇಜವಾಬ್ದಾರಿಯಿಂದ ಕೆಲಸಕ್ಕೆ ಬಾರದ ಉಪದೇಶಗಳನ್ನು ಮಾಡುತ್ತಾ ತಿರುಗುವ ರಾಜಕೀಯ ಟೊಳ್ಳು ಗಟ್ಟಿಗಳ ಗುಟ್ಟು ಎಚ್ಚತ್ತ ಗ್ರಾಮಸ್ಥರಿಗಂತೂ ಗೊತ್ತಾಗಿದೆ; ಈಗ ಅವರು ಅಂಥಾ ಪಟಾಕಿ ಪ್ರಟ್ಟತನಕ್ಕೆ ಮರುಳಾಗರು— ಎಂಬುದನ್ನು ಬಿಂಬಿಸುತ್ತದೆ: ರಾಜಕೀಯದ ಕೆಲ ಅವ್ಯಾವಹಾರಿಕ ಉಪಕ್ರಮಗಳನ್ನು ಇಂದಿನ ಗ್ರಾಮವಾಸಿಗಳು ಎದುರಿಸಬೇಕಾದ ಪರಿಸ್ಥಿತಿ ಬಂದೊದಗಿದೆ— ಎಂಬುದನ್ನು ಸೂಚಿಸುತ್ತದೆ. ಇದು ವರ್ತಮಾನ ಸತ್ಯವಲ್ಲವೇ ? ಅದೇ ಕವನ ಸಂಗ್ರಹದ "ಮೀನುಪೇಟೆ" ಎಂಬ ಪದವು ಮೀನುಗಾರಿಕೆಯಿಂದ ಜೀವಿಸುವವರ ಗತಿಯನ್ನು—

"ಬಂಡವಲಿನ ಬುಟ್ಟಿಯಲ್ಲಿ
ಜೀತವಾಗಿ ಹುಟ್ಟಿದಲ್ಲಿ
ಬದುಕು ನಿತ್ಯ ದೀನವು"

ಎಂದು ಹೇಳಿ "ವರುಷ ಗಿರುಷ ದೊರೆಯುತಿಲ್ಲ ಇವರ ಬಾಳ ಪಂತಕೆ" ಎಂದು ಸಮುದ್ರ ತೀರದ ಗ್ರಾಮೀಣ ಮೀಂಗುಲಿಗರ ದರಿದ್ರ ಜೀವನವನ್ನು ಕರುಣಾಜನಕವಾಗಿ ಚಿತ್ರಿಸಿದ್ದಾರೆ. ಮೀನು ಮಾರುವವರು ಹೆಚ್ಚಾಗಿ ಹೆಂಗಸರು. "ಕುಳಿತರಿಲ್ಲಿ ಮತ್ಸ್ಯಗಂಧಿ. ಉಂಟು ಕೊಂಡು ಹರಕು ಚಿಂದಿ" ಎಂದು ಕವಿ ಹೇಳುವಾಗ ಗ್ರಾಮ ಜೀವನದ ಅಸಹಾಯಕತೆಯ ಬಗ್ಗೆ ನಿರಾಶೆ ತಾಳುವಂತಾಗುತ್ತದೆ. ಬಂಡವಾಳಗಾರಿಕೆ ನಡೆಸಿದ ಶೋಷಣಾದ ಒಂದು ಚಿತ್ರವನ್ನ

ನಾವು ಕಾಣುತ್ತೇವೆ, ನಮ್ಮ ಗ್ರಾಮ ಸಮುದಾಯಗಳಲ್ಲಿ ಹಲವು ಇಂದಿಗೂ ಹೀಗೆ ಅನ್ಯಾಯಿಗಳ ಆಳಾಗಿ ಜೀವನವನ್ನು ಸವೆಯುವುದು ನಡೆದೇ ಇದೆ. ಅವರಲ್ಲಿ ನಿಧಿಯಿಲ್ಲ. ಆದುದರಿಂದ ಅವರ ಸ್ಥಿತಿಯನ್ನು ಸುಧಾರಿಸುವ ಪ್ರತಿನಿಧಿ ಅಧಿಕಾರಕ್ಕೆ ಬರಲಿಲ್ಲ - ಎಂದು ಯಾರಾದರೂ ಉದ್ಗರಿಸುವಂತಹ ಪರಿಸ್ಥಿತಿ ಇನ್ನೂ ಉಳಿದಿದೆ.

ಗ್ರಾಮ ಭಾರತದ ಶತ್ರುಗಳು ಮೂರು: ದಾರಿದ್ರ್ಯ, ಅಜ್ಞಾನ ಮತ್ತು ರೋಗ: ಅಜ್ಞಾನದಲ್ಲಿ ಮೂಢತೆ – ಮೂರ್ಖತೆಗಳೆಂದು ಎರಡು ವಿಧ. ಮೂಢರು ಕರುಣಾರ್ಹರು, ಮೂರ್ಖರು ದಂಡನಾರ್ಹರು. ಮೂರ್ಖರಲ್ಲಿ ಹೇಡಿಗಳು ಮತ್ತು ಹಠವಾದಿಗಳು ಎಂಬ ಉಪವರ್ಗಗಳಿವೆ. ಸಮಾಜದ ಇತರ ಮೂರ್ಖ ಗುರುಗಳಿಗೆ ಹೆದರಿ ಅಂಧಾಚಾರಪರಾಯಣರಾಗುವವರು ಹೇಡಿಗಳು; ಕೇವಲ ಸ್ವಕಪೋಲ ಕಲ್ಪಿತವಾದ ವಿಲಾಸ ಬುದ್ಧಿಗೆ ಸರ್ವಾಧಿಕಾರವನ್ನಿತ್ತು ಶೋಷಣೆಗಿಳಿಯುವವರು ಹಠವಾದಿಗಳು. **ಶ್ರೀರಂಗರು** ಸಮಾಜ ಸುಧಾರಣೆಯ ಅಂತಃಸೂತ್ರವನ್ನಿಟ್ಟುಕೊಂಡು ಹಲವಾರು ನಾಟಕಗಳನ್ನು ಬರೆದು ಪ್ರಸಿದ್ಧ ರಾದವರು. ಅಂಥ ನಾಟಕಗಳಲ್ಲಿ "ಸಂಧ್ಯಾಕಾಲ" ಎಂಬುದು ಒಂದು. ಅದರ ಕಥಾನಾಯಕ ಪಟ್ಟದಲ್ಲಿರುವ ವೃದ್ಧ ಆಚಾರ್ಯರು ವಿವೇಕಿಯಾದ ಪತ್ನಿಯನ್ನು ಅಸಂತೋಷಪಡಿಸಿ, ಕೃಪಣಾಗ್ರೇಸರ ಚಕ್ರವರ್ತಿಯಾಗಿ ಬಡ್ಡಿಯಿಂದ ಸಂಪಾದನೆ ಮಾಡಿಕೊಂಡು, ವೇಶ್ಯಾ ಸಹವಾಸವನ್ನು ಬಿಡದೆ, ಮಡಿತನ–ದೇವಭೋಳೆತನ ಗಳನ್ನು ಪ್ರದರ್ಶಿಸುತ್ತ ಬದುಕುವ ಹಠವಾದಿಗಳು. ಇಂಥ ಗ್ರಾಮ ಪೂಜಾರಿ ಗಳು ಈಗಲೂ ಸಿಗುತ್ತಾರೆ. ಇವರು ತಾವು ಧರ್ಮದ ಆಧಾರಸ್ತಂಭಗಳೆಂದು ಹೇಳಿಕೊಳ್ಳುತ್ತ ಸಾರ್ವಜನಿಕವಾಗಿ ವ್ರತ–ನಿಯಮ–ಉಪವಾಸ–ಪೂಜೆ–ಪಾರಾ ಯಣಗಳನ್ನು ಮಾಡುತ್ತ, ಗುಪ್ತವಾಗಿ ತೀರ ಅಶುಚಿಕರವೂ ಅನೀತಿಕರವೂ ಆದ ಕಾರ್ಯಗಳನ್ನು ಮಾಡಿ, ಇಂದ್ರಿಯ ತರ್ಪಣದಲ್ಲಿ ಮಗ್ನರಾಗಿರುತ್ತಾರೆ. ಆಚಾರ್ಯ ರಿಗೆ ಅವರ ಮಗನೂ ಆತನ ಸ್ನೇಹಿತನೂ ಪುರಸ್ಕರಿಸುವ ಬಾಲ ವಿಧವಾ ವಿವಾಹವು ರುಚಿಸದು; ಹೊಸ ಕಾಲದವರು ಸಂಧ್ಯಾವಂದನೆಯನ್ನು ಬಿಟ್ಟದ್ದೂ ಚಹ ಮುಂತಾದುವನ್ನು ಸೇವಿಸುವುದೂ ಅವರಿಗೆ ಸೇರದು. ಆದರೆ ಅವರ ಮಗನೂ ಆತನ ಸ್ನೇಹಿತನೂ ಅವರನ್ನು ಎದುರಾ ಎದುರು ಪ್ರತಿಭಟಿಸುವ ಧೈರ್ಯವುಳ್ಳವರಲ್ಲ. ಆದುದರಿಂದ ಏನೇನೋ ವೇಷಹಾಕಿ, ಹಗರಣ ಮಾಡು ವುದರ ಮೂಲಕ ಪ್ರೇಕ್ಷಕರನ್ನು ನಗಿಸುತ್ತಾರೆ. ಆದರೆ ಅಂತ್ಯದಲ್ಲಿ ಆಚಾರ್ಯರು ವೇಶ್ಯೆಯ ಮನೆಯಿಂದ ತಿರುಗಿ ಬಂದು ಮನೆ ಹೊಗುವಾಗ ಬಿದ್ದು ಕಾಲು

ಮುರಿದುಕೊಂಡದ್ದರ ಫಲವಾಗಿ ವಿಧಿಯೇ ಅಥವಾ ಕಾಲವೇ ಅವರ ಮಗನಿಗೆ ವಿವಾಹ ಸ್ವಾತಂತ್ರ್ಯವನ್ನು ಕೊಡಿಸುವುದು – ಎಂಬುದು ಸೂಚಿತವಾಗಿದೆ. ಅಂತೂ ಕೈಕಾಲುಗಳು ಗಟ್ಟಿಯಾಗಿರುವ ವರೆಗೆ ದುಡ್ಡಿನ ಪೆಟ್ಟಿಗೆಯ ಕೀಲಿಕೈಯನ್ನು ದಿನದ 24 ತಾಸು ತನ್ನ ಸೊಂಟದಲ್ಲೇ ಸಿಕ್ಕಿಸಿ ಇಟ್ಟುಕೊಂಡು ಯೋಗ್ಯರಾದ ಹೆಂಡತಿ – ಮಕ್ಕಳ ಅಥವಾ ವಿವೇಕಿಗಳಾದ ಬಂಧುಮಿತ್ರರ ಯಾವ ಸದ್ವಿವೇಕವನ್ನೂ ಪುರಸ್ಕರಿಸದೆ, 'ತಾನು ಕಂಡದ್ದಕ್ಕೇ ಮೂರು ಕೋಡು' ಎಂದು ಅಧಿಕಾರವನ್ನು ಚಲಾಯಿಸುವ ಕುಟುಂಬಕಂಟಕ ಹಾಗೂ ಸಮಾಜಕಂಟಕ ಗಣ್ಯರು ನಾಗರಿಕತೆಗೂ ಸಂಸ್ಕೃತಿಗೂ ಕೊಡುವ ಪೆಟ್ಟು ಸಾಮಾನ್ಯವಾದುದಲ್ಲ. ಮಾರ್ಜಾರ ಸನ್ಯಾಸಿಗಳಿಲ್ಲದ ದೇಶ – ಕಾಲಗಳಿಲ್ಲವೆಂದು ಯಾರಾದರೂ ಹೇಳಬಹುದು. ಆದರೆ ಅಂಥವರ ಪ್ರಮಾಣ ಬಹಳ ಹೆಚ್ಚುತ್ತ ಹೋದಾಗ ಇಡೀ ಸಮಾಜವೇ ಭ್ರಷ್ಟಾಚಾರಮಯವಾಗಿ, ದೇಶಕ್ಕೆ ದೇಶವೇ ಪರತಂತ್ರಕ್ಕಿಳಿಯುತ್ತದೆ. ಆದುದರಿಂದ ಸಮಾಜವೂ ರಾಜ್ಯಾಧಿಕಾರಿಗಳೂ ಮೊದಲು ಸುಮ್ಮನಿದ್ದು ಕೊನೆಗೆ ಉಗ್ರದಂಡರಾಗಬಾರದೆಂದೂ ಮತ್ತೊಂದು ತುದಿಗೆ ಹೋಗಿ ಆ ಮೇಲೆ 3 ಅತ್ಯಂತ ಶಿಥಿಲದಂಡರಾಗಬಾರದೆಂದೂ ತೋರುವ ವಿಚಾರವು ಈ ನಾಟಕದ ಗ್ರಾಮವೀರ ಕಥಾನಾಯಕನ ದರ್ಬಾರಿನಿಂದ ವಿಚಾರಪರರ ತಲೆಯಲ್ಲಿ ಮೂಡದಿರದು. ಧರ್ಮಪೀಠಗಳ ಅಂಕೆ ಕಡಿಮೆಯಾಗುತ್ತಿರುವ ಇಂದಿನ ಕಾಲದಲ್ಲಿ ಅವುಗಳ ಬದಲು ಸಮಾಜ ನೀತಿಯನ್ನು ರೂಪಿಸಲು ಮತ್ತಾವ ಸಂಸ್ಥೆಯೂ ಮುಂದಾಗದಿರುವಾಗ, ಗ್ರಾಮ ಪಟ್ಟಣಗಳೆರಡರಲ್ಲೂ ನಾನಾಂಥ ಗೋಮುಖವ್ಯಾಘ್ರಗಳ ಹಾವಳಿಯನ್ನು ಕಾಣುವಂತಾಗಿದೆ.

3 ಫಜಲ್ ಅಲಿಯವರಿಗೆ ರಾಜಾಜಿ ಹಾಕಿದ ಸವಾಲಿಲ್ಲಿ
ಸಾಂದರ್ಭಿಕ – ಕರ್ಮವೀರ ನವೆಂಬರ್ 1, '64 ಪುಟ 8

೪

ಭಾರತ ದೇಶದಲ್ಲಿ ನಿಸರ್ಗ ಸೌಂದರ್ಯಕ್ಕೆ ಹೆಸರಾದ ರಾಜ್ಯಗಳೆಂದು ಕರೆಯಲ್ಪಡುವ ಪ್ರಾಂತಗಳೆಂದರೆ ಒಂದು ಕಾಶ್ಮೀರ. ಎರಡು ಮೈಸೂರು. ಹೀಗಿರುವಾಗ ಗ್ರಾಮಗಳ ಜನರ ಸಾಮಾಜಿಕ. ಆರ್ಥಿಕ. ಧಾರ್ಮಿಕ ಪರಿಸ್ಥಿತಿಗಳಲ್ಲಿ ಎಂಥ ಪರಿವರ್ತನವಾದರೂ ಪ್ರಾಕೃತಿಕ ಪರಿಸರ ನಿತ್ಯವಾಗಿ ಉಳಿದಿದೆ. ಪ್ರಕೃತಿಯೆಂದರೆ ನೀರು, ನೆಲ. ಬಾನು. ತಾರೆ. ಸೂರ್ಯ. ಚಂದ್ರ. ಗಿರಿ. ನದಿ. ಮೈದಾನ. ಗಿಡ. ಮರ. ಬಳ್ಳಿ. ಹೂ. ಹಣ್ಣು. ಕಾಯಿ. ಹೊಲ. ಗದ್ದೆ. ತೋಟ—

ಎಂದು ರೂಢಿಯ ತಿಳಿವಳಿಕೆ. ಮನುಷ್ಯನು ವಸತಿಗಾಗಿ, ವ್ಯವಸಾಯಕ್ಕಾಗಿ ಕಾಡನ್ನು ಕಡಿದು ನಾಡನ್ನಾಗಿ ಮಾಡುತ್ತ ಬಂದರೂ ಕರ್ನಾಟಕದ ಮಲೆನಾಡೂ ಅದರ ಸುತ್ತಮುತ್ತಲಿನ ಜಿಲ್ಲೆಗಳೂ ಇಂದಿಗೂ ಸಾಕಷ್ಟು ಚೆನ್ನಾಗಿ ಹಸಿರು ಹೊದೆದಿವೆ. ಹೊಳೆ, ಕೆರೆ, ಬೆಟ್ಟಗಳಂತೂ ರಸಿಕರಿಗೆ ಮೊದಲಿನಂತೆಯೇ ಕರೆಗೊಡುತ್ತಿವೆ. 'ಪ್ರಕೃತಿಗೂ ಪದ್ಯಕ್ಕೂ ಗಂಟು' ಎಂಬ ಮಾತಿಗೆಡೆಕೊಡುವಂತೆ ಆಧುನಿಕ ಕನ್ನಡ ಕವಿಗಳೆಷ್ಟೋ ಜನ ಕುವೆಂಪುಗಳಂತೆಯೇ ತಮ್ಮ ಕವಿತ್ವದ ಮೂಲ ಪ್ರೇರಣೆಯನ್ನು ಮೊದಲು ಗ್ರಾಮಾವರಣದ ಪ್ರಾಕೃತಿಕ ಪರಿಧಿಯಿಂದಲೇ ಪಡೆದಿದ್ದಾರೆ. ಗ್ರಾಮರಸಿಕರ ನಿತ್ಯ ಸ್ಫೂರ್ತಿಯ ಉತ್ಸಾಹವು ನಿಸರ್ಗದ ಎದೆಯಿಂದಲೇ ಚಿಮ್ಮುತ್ತದೆ. ಆದುದರಿಂದ ನಿಸರ್ಗವು ಇಲ್ಲಿ ಗ್ರಾಮ ಜೀವನದ ಅವಿನಾಭಾವಿಯಾದ ಅಂಗ ಎಂದರೆ ತಪ್ಪಾಗಲಾರದು. **ಚೆನ್ನವೀರ ಕಣವಿ** ಅವರ "ಭಾವ ಜೀವಿ" ಯನ್ನು ಕಂಡರೆ ಅಲ್ಲಿ—

> "ಪ್ರಕೃತಿ ಮಾತೆಯ ಮಡಿಲ ಹಸರು
> ಕಂಸುರಿನ ಮೈದುಲ ತಲ್ಪದಲಿ
> ಹಾಯಾಗಿ ಪೈಚಾತಿರೆ,
>
> ಪಡುವಣದ ಬಾನದೇಗುಲುದೆದುರು
> ಕಿರಿಮೋಡ ಮೌನದಲಿ ತಲೆಬಾಗಿ
> ಕೈಮುಗಿದಿರೆ"

ಎಂಬುದಾಗಿ ಮೊದಲೇ ಪ್ರಕೃತಿಯ ಧ್ಯಾನವನ್ನು ಗದ್ಯಶೈಲಿಯಿಂದ ಮಾಡಲಾಗಿದೆ. ಕೀಟಲೆ ಕೋಟಲೆಗಳನ್ನು ತಾಳಲಾರದ ಕವಿಯು ಶಾಂತಿಯನ್ನರಸುತ್ತ—

> "ಅದಕ್ಕಾಗಿ ಪ್ರಕೃತಿಮಾತೆಯ ಮಡಿಲಿನಾಸರೆಗೆ
> ಆಸತ್ತು ಬೇಸತ್ತು ಬಂದೆನಿಂತು;
> ಶಾಂತಿ ಬಯಸಿ ನಿಶಾಂತ ಏಕಾಂತಕೇನೋಂತ
> ಮನಕೆಂದು ದೊರಕೀತು ಅಮೃತಬಿಂದು ?"

ಎಂದು ಪ್ರಕೃತಿಗೆ ಶರಣಾಗತನಾದುದೂ ಸ್ಪಷ್ಟವಾಗಿದೆ. ತನ್ನ ಗ್ರಾಮಾವರಣವನ್ನು ತಾನು ಬಾಲ್ಯದಲ್ಲಿ ಕಂಡ ಹಾಗೆ ಚಿತ್ರಿಸ ಹೊರಟ ಕವಿಯು: ಗುಡ್ಡ ಕಿರಿಹಳ್ಳ. ಆಲ, ಎಲೆವಳ್ಳಿ ತೋಟ, ಈಶ್ವರನ ಗುಡಿ. ಕಲ್ಲುಕಟ್ಟೆ, ಮಾದರಕೇರಿ, ಕೆಮ್ಮರಡಿಗಳನ್ನು ಹೆಸರಿಸಿ - ಹಳ್ಳಿಯ ಆಟಗಳಾದ ಚಿನ್ನಿಕೋಲು, ಬೆಲ್ಲವತ್ತದ ಕಾಯನ್ನು ಜಿಜ್ಜಿ ಶಬ್ದಮಾಡುವುದು, ಕಣ್ಣುಮುಚ್ಚಾಲೆ, ಗೊಂಬೆ ಮದುವೆ

ಮುಂತಾದವನ್ನು ಹೇಳಿ - ಲಂಬಾಣಿಗಳು, ಜೋಳದ ಪಯಿರು. ಕೊಲ್ಹಾರಿ ಚಕ್ಕಡಿ, ಲಾವಣಿ, ದೆವ್ವಗಳ ಕತೆ, ಸಾಕಿದ ಬೆಕ್ಕು, ಕಮ್ಮಾರ ಮಾನಪ್ಪನ ಕುಲುಮೆ, ಕುಂಬಾರನ ತಿಗುರಿ, ಕೆರವು ಹೊಲಿಯುವ ಮಾದರವನು, ದನಕಾಯುವವ, ಕೆಲಸಿಗ, ಮಾಸತಿ ಕಲ್ಲು, ವೀರಗಲ್ಲು, ದೇವತಾರಾಧನೆ ಮುಂತಾದವನ್ನು ಅನುಕ್ರಮವಾಗಿ ಉಲ್ಲೇಖಿಸಿ, ಸಾಮಾನ್ಯ ಹಳ್ಳಿಯ ವಸತಿಸ್ಥಳದ ಆವಣವೊಂದರ ಮಾದರಿಯನ್ನು ಪ್ರತ್ಯವೇಕ್ಷಕನಂತೆ ಕೊಟ್ಟಿದ್ದಾನೆ. ಈ ಮಾದರಿಯು ಹಿಂದಿನ ಕಾಲದ ಸ್ವಯಂಪೂರ್ಣ (Self-sufficient) ಸ್ವಾವಲಂಬಿ (Self-dependent) ಮತ್ತು ಸರ್ವಾಂಗ ಸಮನ್ವಿತ (Self-contained) ಗ್ರಾಮವೊಂದರ ಅವಶೇಷ ವಾಗಿ ತೋರುತ್ತದೆ. ಜೀವನಾವಶ್ಯಕ ಉದ್ಯೋಗಗಳಿನ್ನೂ ಪೂರ್ಣವಾಗಿ ಅಲ್ಲಿಂದ ಚದರಿಹೋಗಿಲ್ಲ; ಪಟ್ಟಣೀಕರಣದ ಪ್ರವೃತ್ತಿ (Urbanising Tendency) ಬಹಳವಾಗಿ ತಲೆಹಾಕಿಲ್ಲ. ಇಂಥ ಗ್ರಾಮಗಳು ಬಯಲು ಸೀಮೆಯಲ್ಲಿ ಇನ್ನೂ ಉಳಿದಿವೆಯೆನ್ನಬಹುದು. ಗ್ರಾಮ ಸಮಾಜದ ಸುಸಂಘಟಿತವಾದ ಪ್ರಾಚೀನ ಪಂಚಾಯತ ಪದ್ಧತಿಯನ್ನು ಅಭ್ಯಸಿಸುವವರು ಇಂಥ ಗ್ರಾಮಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು. ಧಾರವಾಡ ಜಿಲ್ಲೆಯ ಕೆಲಭಾಗಗಳು ಪೂರ್ಣ ಬಯಲು ಸೀಮೆಯ ಅಂಶಗಳಿಂದ ಕೂಡಿಲ್ಲವಾದುದರಿಂದ ಮಲೆನಾಡಿನ ಸೆರಗಿನ ಪ್ರಾಕೃತಿಕ ಹಿನ್ನೆಲೆ ಕೆಲಮಟ್ಟಿಗೆ ಅಲ್ಲಿ ಕಂಡುಬರುತ್ತದೆ.

ಗೋಪಾಲಕೃಷ್ಣ ಅಡಿಗರು ತಮ್ಮ "ಭಾವತರಂಗ"ದ "ಒಳತೋಟಿ" ಯಲ್ಲಿ ಮೇಲಿನಂತೆಯೇ ಪೀಠಿಕಾರೂಪದಲ್ಲಿ ತಮ್ಮ ಹಳ್ಳಿಯ ಪರಿವೇಶವನ್ನು ಚೆಂದವಾದ ಛಂದದಲ್ಲಿ ಕೊಡುತ್ತಾರೆ:

"ತಡಿಯಲ್ಲಿ ಸಾಲುಸಾಲಾಗಿ ನಿಂತಿವೆ ತೆಂಗು
ಬುವಿಯ ಹಸುರನು ಬಾನಿಗೊಸಗೆ ಒಡಿದು
ತಡಿಕಡಲುಗಳ ಪ್ರೇಮಜೀವನದ ಸಂಕೇತ
ಬುವಿ ಬಾನುಗಳ ಹೃದಯಗೀತವೆನಲು

. . . .

ಮೂಡುಗಡೆ ಸಾಲು ಬೆಟ್ಟಗಳು ಕಂಗೊಳಿಸುತಿವೆ
ನಾಡಿದನು ಕಾವ ಬೆಸದದಟರಂತೆ,
ಕಾಡುಗಳ ಹಸುರುವಸನವ ತೊಟ್ಟು ಮುಗಿಲುಗಳ
ಮಣಿಕಿರೀಟವನಿಟ್ಟು ತಲೆಯ ಮೇಲೆ,

. . . .

ಆ ಬೆಟ್ಟಗಳ ಮೂಲದಿಂದ ವಾರಿಧಿ ವರೆಗೆ
ಸೋಪಾನರೂಪದಲಿ ಹೊರಳಿ ಬಂದು
ಋತುಋತುಗೆ ಕಾಲಕಾಲಕೆ ಬಣ್ಣಬಣ್ಣದಲಿ
ಕಂಗೊಳಿಸುತಿಹುದು ಕಳಕಳಿಸಿ ಹೊಲವು."

ಇದೇ ಪರಿಸರದ ಇತರ ಲಕ್ಷಣಗಳನ್ನು **ನನ್ನ** "ಮೇಘನಾದ"ದ "ಕನ್ನಡ ಕಡಲುಸೀಮೆ"ಯಲ್ಲಿ ಕಾಣಬಹುದು.

"ಹೆಜ್ಜೆ ಹೆಜ್ಜೆಗೊಂದು ಹೊಳೆ
ಗೆಜ್ಜೆಗಾತಿಯೊಂದು ಕಳೆ
ಹಚ್ಚ ಹಸಿರು ತುಂಬು ಬೆಳೆ
ಬೆಟ್ಟದಟ್ಟಹಾಸ–ಮಳೆ !
ದೋಣಿಸೇಣಿ ಹಡಗಗಿಡಗ
ಹತ್ತಿಬರುವ ಕಡಲ ಗುಂಡಂಗ
ಕೇಳಿ ಕೇಳಿ ನುಡಿಯ ಬೆಡಗ
ಕಲಿತ ಜನವ ನೋಡು ಹುಡಂಗ !"

ಎಂದು ಆರಂಭಿಸಿ, ಸಾಮುದ್ರಿಕ ಗ್ರಾಮೀಣರ ಕೃಷಿಕ ಜೀವನದಲ್ಲಿ ಕಂಡುಬರುವ ತೆಂಗು, ಪಚ್ಚೆಪಯಿರ ರಂಗು, ಒಕ್ಕಲುಗಿತ್ತಿಯರು ಹಾಡಿಕೊಳ್ಳುತ್ತ ಗದ್ದೆ ಕೆಲಸ ಮಾಡುವುದು, ಅವರು 4 ಗುರುಬನ್ನು ಧರಿಸಿರುವುದು ಮತ್ತು ನಿಷ್ಕಂಚುಕರಾಗಿರುವುದು; ಆ ಗ್ರಾಮೀಣರ ಮಾತಿನಲ್ಲಿ ಪ್ರತಿಯೊಂದು ಪದದ ರೂಪವನ್ನೂ ಸಂಕ್ಷೇಪಿಸುವ 5 ವೈಶಿಷ್ಟ್ಯ, ಯಕ್ಷಗಾನ ಕಲಾ ವೈದಗ್ಧ್ಯ, ಬಲಾರಾತಿಯಾದ ಮತ್ತು ಬಲಾಧಿದೇವತೆಯಾದ (ಮಳೆರಾಯ) ಇಂದ್ರನ ಸ್ಥಾನದಲ್ಲಿ ಗ್ರಾಮ ದೇವತೆಯಾದ ಜಟ್ಟಿಗನನ್ನು ಪೂಜಿಸುವುದು, ವರ್ಷದಲ್ಲಿ ಎರಡು ಮೂರು ಬೆಳೆ ಬೆಳೆಯುವುದು ಮುಂತಾದ ಅಂಶಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಕಡಲು ಕನ್ನಡ ಮಲೆನಾಡಿನಂಚು, ಮಲೆನಾಡು; ಅಲ್ಲಿ ಅತ್ಯಂತ ಪ್ರಾಚೀನ ಕುಲದವರು ವಿವಿಧ ವನಗ್ರಾಮಗಳಲ್ಲಿ ನೆಲೆಸಿದ್ದಾರೆ. ಕಾರರು, ಮೊಗೇರರು, ಮಲೆಕುಡಿಯರು, ಹಾಲಕ್ಕಿ ಒಕ್ಕಲು, ಮುಕರಿಗಳು, ಸಿದ್ಧಿಗಳು ಅಂಥ ಪ್ರಾಚೀನ ಕುಲಜರಲ್ಲಿ ಗಣ್ಯರು. ಕಾಸರಗೋಡಿನಿಂದ ಕಾರವಾರದ ವರೆಗಿನ ತೀರ ಗ್ರಾಮಗಳು ಇಡಿ ಕರ್ನಾಟಕದಲ್ಲಿ ವಿಶಿಷ್ಟ ಸಂಪ್ರದಾಯವುಳ್ಳಂಥವು. ಅವರೆ ಐತಿಹಾಸಿಕ ಆಘಾತಗಳನ್ನು ಸಾವಿರಾರು ವರ್ಷಗಳಿಂದ ಅನುಭವಿಸುತ್ತ ಬಂದ ಆ ಗ್ರಾಮಪ್ರಪಂಚದ ಕೆಲ ತುಂಡು ಪಾಳೆಯಗಾರರಾದರೋ ನನ್ನ "ರಸಮಂಜ್ಞ"ದ "ನನ್ನ ಠೀವಿ"ಯಲ್ಲಿರುವ ಹಾಗೆ

‘ ಎಲೆಯಡಿಕೆ ಬೀಡಿ ಸಿನೆಮಾದಿ ಚಟಗಳ ದಾಸ
ಹುಲು ಹರಟೆ ಹೊಡೆವ ಗೆಳೆಯರ ನಿತ್ಯ ಸಹವಾಸ
ಮಲಿನತನು ಹೊದೆದ ಮಲಿನಾಂಬರಂಗಳ ವೇಷ
ಮಲಿನ ಭಾಷಾ ವಿಶೇಷ
ಎಲಿಲಿ ನನ್ನೊಳೆ ಮರೆವುವುಂಡು ಮಲಗುವ ಸುಲಭ
ಕಲೆಯನಳವಡಿಸಿಕೊಂಡಿರುವ ಗಜಗಮನ ನಾನ್
ಅಲಿನನೆಯ ಶಿಲೆಬೆಲೆಯ ಬಿಲುನಗೆಯ ಬಿರಿಬಾಯ
ಕಲಿಕಾಮುಕರ್ಮಶೇಷ ”

ಎನ್ನಿಸಿರುವುದು ಅಲ್ಲಿಯ ವಿಡಂಬನೀಯಾಂಶ. ಈ ಅಂಶವನ್ನೀಗ ಸರ್ವಗ್ರಾಮ ಸಾಧಾರಣವೆನ್ನಲೂ ಬಹುದು. ಹೀಗೆ ಸರ್ವಗ್ರಾಮ ಸಾಧಾರಣವಾಗಿರುವ ಅಂಶವೆಂದರೆ ಪಟ್ಟಣಿಗತನವನ್ನು ಬೆಳೆಸಿಕೊಳ್ಳುವ ಪ್ರವೃತ್ತಿ. ಉಕ್ತ ಸಂಗ್ರಹದ “ಗೌರಿನ ಹಬ್ಬದ ಜೆಡಗಿ” ನಲ್ಲಿ ಪದವೀದಾನ ಸಮಾರಂಭದಲ್ಲಿ ಪದವೀಧರರನ್ನು ಕಂಡ ಭಾವಿಕ ಹಳ್ಳಿಗನು —

“ ಬುದ್ಧಿವಂತ ಮಂದಿ ಏನ್ಲ !
ಬೆದರೀಕಿ ಅಂಬೋದೇ ಇಲ್ಲ !
ನಾವೂ ಹುಟ್‌ಕ್ಯಾರ್ ಪರ್ಯೋಜ್ನೇನು ?
ಇದ್ರೇ ಇರ್ ಬೇಕ್ ಇವ್ರಂಗ್ ನಾನೂ ! ”

ಎಂದು ಹೇಳುವುದರಲ್ಲಿ ಪಟ್ಟಣದ ವಿದ್ಯಾವಂತ ನೌಕರ - ಚಾಕರರ ಬಾಹ್ಯಜೀವನದ ಆಡಂಬರದ ಆಭಾಸಿಕ ಗೌರವಾರ್ಹತೆಗೆ ಒಂದು ಕ್ಷಣಕಾಲ ಮನಸೋತ ಅಂಶವು ಧ್ವನಿತ. ವೈಬಗ್ಗಿ ದುಡಿಯುವುದರಲ್ಲಿ ತೃಪ್ತಿ – ಅಭಿಮಾನಗಳನ್ನು ತಾಳುತ್ತಿದ್ದ ನಮ್ಮ ಹಳ್ಳಿಗರಲ್ಲಿ ಮೆಲ್ಲಗೆ (ಜಹದ ಮೂಲಕ ಪಟ್ಟಣಗಳ ಸೆರಗಿನಲ್ಲಿ ಬಂದು ಹೋದುದರ ಫಲವಾಗಿ) ದೇಹಶ್ರಮವಿಲ್ಲದೆ (ಬುದ್ಧಿ ಶ್ರಮ ಬಹಳ ಬೇಕಾಗಿಲ್ಲವೆಂದು ನಂಬಿ) ಚೆನ್ನಾಗಿ ಉಂಡುಟ್ಟು ಷೋಕಿ ಜೀವನ ನಡೆಸುವ ಆಸೆ ಮೂಡುತ್ತಿರುವುದು ಗೋಚರವಾಗುತ್ತದೆ. ಇದು ಬಹಳ ಇತ್ತೀಚೆಗಿನ ಗ್ರಾಮೀಣಮನಃಪ್ರಣಾಳಿ. ಅದರಲ್ಲೂ ನಗರ--ಪಟ್ಟಣಗಳಿಗೆ ಅತಿ ಸಮೀಪದಲ್ಲಿರುವ ಗ್ರಾಮಗಳಲ್ಲಿ ಈ ಮನೋಧರ್ಮ ರೂಢಿತವಾಗುತ್ತಿರುವುದು ಕಂಡು ಬರುತ್ತದೆ. ಆದರೆ ಸಂಸ್ಕೃತ ಭಾವಿಕ ಹಳ್ಳಿಗನು ಪಟ್ಟಣೀಕರಣಕ್ಕೆ ಸುಲಭವಾಗಿ ಬಲಿಯಾಗುವ ಮನೋಧರ್ಮದವನಾಗಿಲ್ಲ.

4 ಮಳೆಯಿಂದ ಸಂರಕ್ಷಿಸಿಕೊಳ್ಳಲು ಕಂಬಳಿ ಕೊಪ್ಪೆಯ ಆಕೃತಿಯಲ್ಲಿ ತರಗು ಮತ್ತು ತೆಮೆದಬ್ಬೆಗಳಿಂದ ತಯಾರಿಸಿದ ವಾರಿತ್ರ.

5 "ಕನ್ನಡ ಸಾಹಿತ್ಯಪರಿಷತ್ಪತ್ರಿಕೆ" "ಕುಂದಗನ್ನಡ" ಲೇಖನ ಮಾಲೆ—ಈ ಲೇಖಕನಿಂದ.

ಕೆ. ವಿ. ಸುಬ್ಬಣ್ಣನವರ "ಪೂವು ಚೆಲ್ಲಿದ ಹಾದಿಯಲ್ಲಿ" ಎಂಬ ಕವನ ಸಂಗ್ರಹದಲ್ಲಿ ಶುದ್ಧ ಮಲೆನಾಡಿನ ಗ್ರಾಮೀಣ ನಿಸರ್ಗಾವರಣ ಚೆನ್ನಾಗಿ ಮೂಡಿದೆ.

ನಂದನವನ ಮಾರ್ಗ ಹಾದಿ
ಅಚ್ಛೋದದ ಸರಸು ಕೆರೆ,
ದಿವ್ಯವೆಲ್ಲಿ ಸಂಜೆಗೆ!
ಹೊರೆ ಹೊರೆ ಹೊರೆ ಹೂ ಸುರಿದಿರೆ
ತೆರೆ ತೆರೆ ನೊರೆಯಾಡುವ ಕೆರೆ
ಆಯ್ದು ಮೂಲೆಗಟ್ಟಿದೆ!
ನಾಗವಲ್ಲಿಯುಟ್ಟ ಕೌಂಗು
ತೆಂಗು ಬಾಳೆಯತ್ತಣಿಂದೆ
ಬಿಂಬ ನೋಡುತೊಲೆದಿದೆ
ಚಿತ್‌ತರಂಗ ರಂಗದಲ್ಲಿ
ಸವಿಗನಸುಗಳುರುಳುವವೊಲು
ಬೆಳ್ಳಕ್ಕಿಯ ಸಾಲ್ಗಳು........."

ಇಂಥ ಸೃಷ್ಟಿಯ ಆವರಣದ ಅಂಚಿನಲ್ಲಿ ಬದುಕುವ ಗ್ರಾಮೀಣರನ್ನು ಕಾವ್ಯಾಚಾರ್ಯ **ಕಡೆಂಗೋಡ್ಲು ಶಂಕರಭಟ್ಟರು** "ನಲ್ಮೆ" ಎಂಬ ಸಂಗ್ರಹದ 'ಹೊನ್ನಿಯ ಮದುವೆ"ಯಲ್ಲಿ—

"ಬಂದುದ ನುಡಿವರು
ಕಂಡೆಡೆ ನಡೆವರು
ಸಂಜೆಯ ನೆಳಲೊಂದಕೆ ಹೆದರಿ
ನೊಗಗಳ ನೇಗಿಲ
ಹೊಲಗಳ ಸೋಗಿಲ
ಬಿಡುವರು ಮನೆ ಬಾಗಿಲ ಸೇರಿ

ಚಿಂದಿಯನುಟ್ಟೇ
ಹಾಳೆಯ ತೊಟ್ಟೇ
ಇದೆ ಸಿಂಗರವೆಂದೊಸೆಯುವರು
ಹೊಸ ಬೆಡಗಿನ ಕೈ
ತಿದ್ದಿಸದಿಹ ಮೈ
ಕೆಸರೇ ಸಾಕೆಂದೊಲಿದಿಹರು
ಬಳಿಯೊಳೆ ಕೆರೆ, ತೊರೆ
ಮರ ಬಳ್ಳಿಯ ಹೊರೆ,
ಜೀವದ ತುರುಗಳ ಮೇವುಗಳು
ಅಂಗಳದಲಿ ಹಂ-
ಲ್ಲೊಟ್ಟಿಲ ತೊಟ್ಟಿಲ
ಏರಿ ಮೆರೆವ ತುರು ಮಂದೆಗಳು."

ಎಂಬ ರೀತಿಯಿಂದ ವರ್ಣಿಸಿದ್ದಾರೆ. ಈ ಕವನವು ಗ್ರಾಮೀಣರ ಒಂದು ಮಾದರಿಯನ್ನು (Idealised) ಆದರ್ಶರೂಪಕ್ಕೆ ಎತ್ತಿ, (Plain living and high thinking) ಸರಳ ಜೀವನ ನಡೆಸುವ ಉದಾತ್ತ ವಿಚಾರವುಳ್ಳದ್ದನ್ನಾಗಿ ನಮ್ಮೆದುರಿಡುತ್ತದೆ. ಇಂಥ ಸುಸಂಸ್ಕೃತ ಗ್ರಾಮೀಣರೂ ನಮಗಿಂದು ಸಿಗುತ್ತಾರೆ. ಆದರೆ ವಿರಳ: (ನಗರಗಳಲ್ಲೂ ವಿರಳ!) ಭಾರತದ ಎಲೆವನೆಯ ರಿಸಿಗಳು ಹೀಗೆಯೇ ಇರುತ್ತಿದ್ದರಂತೆ. ಆದರೆ ಅವರ ಆಶ್ರಮ ಜೀವನವು ಸ್ವಯಂವೃತ (Self-chosen): ಇಂದಿನ ಇವರದು ಸಂಪೂರ್ಣವಾಗಿ ಸ್ವಯಂವೃತವೆನ್ನಲು ಸಾಧ್ಯವಾಗದು. ಐತಿಹಾಸಿಕ ಆಘಾತ-ಪ್ರಘಾತಗಳ ಪರಿಣಾಮವಾಗಿ ಬಂದೊದಗಿದ ದಾರಿದ್ರ್ಯವು ಇಂಥ ಹಳ್ಳಿಗರನ್ನು ಸರಳಜೀವನಕ್ಕೆಳೆಸಿರಬೇಕು. ಆದರೆ ಶತಮಾನಗಟ್ಟಲೆ ಭೌತಿಕ ಸುಖದಲ್ಲಿ ಚಿಂದಿಬಾಳನ್ನು ಬಾಳಿ, ಅದನ್ನು ವಿಧಿವತ್ತವೆಂದು ಸ್ವೀಕರಿಸಿ, ಇದ್ದುದರಲ್ಲೇ ಕೆಲಮಟ್ಟಿನ ತೃಪ್ತ ಜೀವನವನ್ನು ಸಾಗಿಸುತ್ತ ಬಂದುದು ಒಂದು ದೃಷ್ಟಿಯಿಂದ ಪ್ರಶಂಸನೀಯ ಎಂಬುದು ಕವಿಯಿಂಗಿತ.

ಡಿ. ಎಸ್. ಕರ್ಕಿ ಅವರ "ಭಾವ ತೀರ್ಥ"ದ "ಚೆಲುವು ಒಲವು"—

"ಬೆಟ್ಟದೋರೆಯಲ್ಲಿ ಸೂರ್ಯ
ಚೆಲುವ - ತೇರನೇರೆ
ಉಕ್ಕುವೊಲವೆ ಉದಯರಾಗ
ಬಣ್ಣವೆಲ್ಲಿ ಬೇರೆ ?

ಗಿರಿಯ ಮೇಲೆ ಚಂದ್ರ ಬಿಂಬ
ನೀಲದಲ್ಲಿ ತೇಲೆ
ನನ್ನ ಒಲವು ಅದನು ನೋಂಕಿ
ಗೈವುದಮೃತಲೀಲೆ"

ಎಂದು ಮುಂತಾಗಿ ಗ್ರಾಮಾವರಣವಾಗಿ ಅನೇಕ ಕಡೆ ನಿಂತ ಗುಡ್ಡ ಬೆಟ್ಟಗಳ ಈಶ್ವರತ್ವವನ್ನು ನಮ್ಮೆದುರಿಡುತ್ತದೆ.

ಕೆ. ವಿರೂಪಾಕ್ಷ ಗೌಡರ "ಬಿಳಿಯ ಹಾಳೆಯ ಮೇಲೆ"ನ "ಗ್ರಾಮ ಪಂಚಾಯಿತಿ"ಯು ಮೇಲೆ ಕೊಟ್ಟ ನಿಸರ್ಗಾವರಣದಲ್ಲಿ ವಾಸವ ಮಾಡುತ್ತಿರುವ ಇಂದಿನ 'ಗ್ರಾಮ್ಯ'ವನ್ನು ತೋರಿಸುತ್ತದೆ. ಪ್ರಜಾಪ್ರಭುತ್ವವು "ಗ್ರಾಮ ಪಂಚಾಯಿತಿ" ಎಂಬ ಕರುವನ್ನು ಹಾಕಿತು. ಆ ಕರುವಿನ ರೂಪದ ಕಾಮಧೇನುವು ದೊಡ್ಡದಾದಾಗ—

"ಹಾಲು ಹಿಂಡುವುದಂತು ಬಹಳ ರಂಭಾಟಂತೆ
ಬಲ್ಲವರೆ ಬಾಲವನು ಮುದಂಡುವಂತೆ
ಇತ್ತ ಹಸುವಿನ ಒದೆತ, ಅತ್ತ ಮಕ್ಕಳ ಕುದಿತ
ಮಡದಿ ಹಾಲಿಲ್ಲೆಂದು ಸಿಡುಕುವಂತೆ"

೫

ಮಿರ್ಜಿ ಅಣ್ಣಾರಾಯರ "ನಿಸರ್ಗ"ವೆಂಬ ಕಾದಂಬರಿಯು ಗ್ರಾಮೀಣ ಬಾಳಿನ ಒಂದು ದುರಂತ ಚಿತ್ರವನ್ನು ಕೊಡುತ್ತದೆ. ಇದರಲ್ಲಿ ಶೃಂಗಾರವು ಪ್ರಧಾನ ರಸ. ಇದರ ಪಾತ್ರಗಳು ಆಡುವ ಭಾಷೆ ಶುದ್ಧ ಗ್ರಾಮ್ಯ. ಅವುಗಳ ಕೌಟುಂಬಿಕ ಹಾಗೂ ಸಾಮಾಜಿಕ ಮೌಲ್ಯಗಳೂ ನಂಬಿಕೆಗಳೂ ನಡಾವಳಿಗಳೂ ಗ್ರಾಮ ಸಹಜವಾಗಿವೆ.

ಮರುದಿವಸ ಊರೆಲ್ಲ ಬಾಳೆಯ ಹಣ್ಣುಗಳನ್ನು ಬೀರಿದರು; ಸೊಸೆ ಮನೆಗೆ ಬಂದ ಉಬ್ಬಿನಲ್ಲಿ ಚಿಮ್ಮವ್ವ ಸ್ವಲ್ಪ ಹಣ್ಣು ಕಡಿಮೆ ಬೀಳಲು, ತಾನೇ ಹನ್ನೆರಡಾಣೆಯ ಹಣ್ಣುಗಳನ್ನು ಕೊಂಡು ಊರಲ್ಲಿ ಒಂದು ಮನೆಯೂ ನಿಲ್ಲದಂತೆ ಬೀರಿದಳು. 'ಇದ್ದ ಒಬ್ಬ ಮಗಾ, ನಮ್ಮ ಮನೀಗಿ ಊರಿಂದ ಬಾಳಿಕಾಯಿ ಬರತಾವ, ಇವ ಯಾಸರ ಆಗಲಿ ಇನ್ನ ಮೂರನಾಲ್ಕ ಮಂದಿ ಸೊಸೆದೇರ ಬರಾವರ ಇದಾರು ಆಗ ಬೀರಿದರೆ ಬಂದ್ರೋತ ಅನ್ನೂ ಹಂಗ ಯಾನ ಐತಿ? ಅಂದ ಮಾಲಿ ಒಬ್ಬಂಗಿ ಕೊಟ್ಟ ಒಬ್ಬರಿಗೆ ನಾಯಾಕ ಬಿಡಲಿ ?' ಎಂಬುದೇ ಅವಳ

ಮನದ ಆಶಯವಾಗಿತ್ತು. ಅಕ್ಕಾತ್ಮಾಯಿಯು ಓರಿಹಿರಿ ಹಿಗ್ಗಿದಳು. ತನ್ನ ಜೊತೆಗೆ ಆಡಲು ಅಣ್ಣನ ಹೆಂಡತಿ ಬಂದಳೆಂದು. ತಾರಕ್ಕ ಅತ್ತೆಯ ಮನೆಗೆ ಬಂದ ಆ ದಿನ ಇಳಿಹೊತ್ತಿನಲ್ಲಿ ಅವ್ವ ತನಗೆ ಬಾಳೇಹಣ್ಣುಗಳನ್ನು ತಿನ್ನಲು ಕೊಡಲು —

"ತಾರಕ್ಕಗ ಬಾಳಿಕಾಯಿ ಕೊಡುವುದುಲ್ಲಾ......? ಎಂದು ಕೇಳಿದಳು."

ಇದೊಂದು ವಾಕ್ಯೋಚ್ಚಯವನ್ನು (Paragraph) ಕೇವಲ ಮಾದರಿಗಾಗಿ ಕೊಡಲಾಗಿದೆ. ಕುಟುಂಬ ಜೀವನವೇ ಪ್ರಪಂಚವೆಂದು ಅವರಲ್ಲಿ ನಡೆವ ವಿವಾಹ ಮುಂತಾದ ಶುಭಕಾರ್ಯಗಳನ್ನು ಚಿಲ್ಲರೆ ವಿವರಗಳ ಗುಣ - ದೋಷ - ವಿಮರ್ಶೆ. ತೃಪ್ತಿ - ಅತೃಪ್ತಿಗಳನ್ನು ವಿಚಾರ ವಿಷಯಗಳನ್ನಾಗಿ ಸಾಮಾಜಿಕರು ತೆಗೆದುಕೊಂಡು ಆಯುಷ್ಯದ ಬಹುಭಾಗವನ್ನು ಕಳೆಯುವುದು ಗ್ರಾಮೀಣರಲ್ಲಿ ಇತ್ತೀಚಿನ ವರೆಗೆ ಬಳಕೆಯಲ್ಲಿತ್ತು. ರಾಜಕೀಯ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳು ಕದಡದಿದ್ದ ಒಂದು ತರದ ಪ್ರಶಾಂತಾವಸ್ಥೆಯಲ್ಲಿದ್ದುದು ಬಹುಶಃ ಈ ಪ್ರವೃತ್ತಿಗೆ ಕಾರಣ ವಾಗಿರಬೇಕು, ಆಯಾ ವರ್ಗದ ಜನರು ತಮ್ಮ ತಮ್ಮ ಸ್ಥಾನಮಾನಗಳು ಇಷ್ಟೇ ಎಂಬ ಸ್ಥಿರ ವಿಶ್ವಾಸದಿಂದ ತಮ್ಮ ತಮ್ಮ ಆಸೆ ಆಕಾಂಕ್ಷೆಗಳನ್ನು ರೂಪಿಸಿ ಕೊಳ್ಳಲು ಬಹಳ ವಿಚಾರಮಾಡುವ ಆವಶ್ಯಕತೆಯನ್ನು ಕಾಣದೆ ಹೋದುದರಿಂದ ಸಾಮಾನ್ಯವಾಗಿ ಉಂಡುಟ್ಟು ಬಾಳುತ್ತಿದ್ದ ಗ್ರಾಮೀಣ ಮನೆತನದವರು ಲಗ್ನ ವನ್ನು ಸಾಮಾಜಿಕವಾದ ದೊಡ್ಡ ಲಕ್ಷ್ಯವನ್ನಾಗಿ ಮಾಡಿಕೊಂಡದ್ದನ್ನು ಕೆಳಗಿನ ಶ್ಲೋಕವು ಸ್ಪಷ್ಟಗೊಳಿಸುತ್ತದೆ,

"ಕನ್ಯಾವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಂ
ಬಾಂಧವಾ ಗುಣ ಮಿಚ್ಛಂತಿ ಮಿಷ್ಟಾನ್ನ ಮಿತರೇ ಜನಾಃ

ಅದೇ ಮೇರೆಗೆ ಯಶಸ್ವಿಯಾದ ವಿವಾಹ ಸಂಬಂಧವನ್ನು —

"ಯಯೋರೇವ ಸಮಂ ವಿತ್ತಂ ಯಯೋರೇವ ಸಮಂ ಶ್ರುತಂ
ತಯೋರ್ವಿವಾಹಃ ಸಖ್ಯಂಚ ನ ತು ಪುಷ್ಟವಿಪುಷ್ಟಯೋಃ"

ಎಂಬ ಶ್ಲೋಕವು ಸೂತ್ರಿಸಿ ಹೇಳುತ್ತಿದೆ. ವಿವಾಹವು ಊರಿನವರಿಗೆ ಹಬ್ಬ. ಜಾತ್ರೆಗಳಷ್ಟೇ ಸಾರ್ವತ್ರಿಕ ಎನ್ನಿಸಿದ್ದು ಇಂಥ ಕಾದಂಬರಿಗಳಲ್ಲಿ ಪ್ರಕಟವಾಗಿದೆ: ಅದರ ಪೂರ್ವಾಪರಗಳಿಗೆ ಸಂಬಂಧಿಸಿದ ರೂಢಿ ನಿಯಂತ್ರಿಕ ಕಾರ್ಯಾಂಗಗಳನ್ನು ಹಾಗೇ ಗ್ರಾಮದ ಸರ್ವರಿಗೂ ಚರ್ವಣ ವಸ್ತು ಎಂಬುದೂ ಇವುಗಳಲ್ಲಿ ಮೂಡಿ ಬಂದಿದೆ. ಜೊತೆಗೆ ಮನೆಯವರಿಗೂ ನೆಂಟರಿಗೂ ಇನ್ನಷ್ಟು ಹೆಚ್ಚು ಕಾಲ ಅವು ವೈಯುಕ್ತಿಕವಾದ ಪ್ರೀತಿ, ದ್ವೇಷ. ಸಮಾಧಾನ. ಅಸೂಯೆ ಮುಂತಾದ ಭಾವೋ

ದ್ರೇಕಗಳಿಗೂ ಅವುಗಳಿಂದ ಪ್ರೇರಿತವಾದ ವರ್ತನೆಗಳಿಗೂ ಕಾರಣವಾಗುವುದು ಸ್ವಾಭಾವಿಕವೆನ್ನಿಸಿತ್ತು.

ರಾವ ಬಹದ್ದೂರರ "ಗ್ರಾಮಾಯಣ"ವು ನಾನಾ ಗ್ರಾಮಪಾತ್ರಗಳು ನಾನಾ ಸನ್ನಿವೇಶಗಳಲ್ಲಿ ಸಿಕ್ಕಿದಾಗ ನಡೆದುಕೊಳ್ಳುವ ಚಿತ್ರಗಳ ಒಂದು ಮಾಲೆ ಎನ್ನಬಹುದು. ಅರಿ ಷಡ್ವರ್ಗದ ಆಡುಂಬೊಲವಾದ ಅದರ ಗ್ರಾಮ ಪ್ರಪಂಚವು ಬಹಳ ವಿಸ್ತಾರವೂ ವಿಪುಲ ವಿವರ ಪೂರ್ಣವೂ ಆಗಿವೆ. ಅವರಲ್ಲಿ ಬರುವ ಮಠಾಧಿಪತಿಯು ಒಬ್ಬ ದೈತ್ಯ ಧರ್ಮಶೀಲ. ಅತನ "ಕೌರವ್ಯಕೋಲಾಹಳ"ವು ಅಲ್ಲಿಯ ಗ್ರಾಮಜೀವನಕ್ಕೆ ಮರಂತವನ್ನು ತರುವ ಶಕ್ತಿ. ನ್ಯಾಯವಾದಿಯಾದ ಪಟೇಲನನ್ನು ಅಲ್ಲಿ ಯಾವ ಭಗವಂತನೂ ಶಂಖ-ಚಕ್ರ-ಗದಾ-ಪದ್ಮಧಾರಿಯಾಗಿ ಎತ್ತಿ ಹಿಡಿಯಲು ಬರುವುದಿಲ್ಲ. ಅದರ ವಸಂತಸೇನೆಯಾದ ಚಿಮಣವ್ವನನ್ನು ಉದ್ಧರಿಸಲು ಯಾರೂ ಸಮರ್ಥರಾಗುವುದಿಲ್ಲ. ಅಲ್ಲಿಯ ಪ್ರಾಮಾಣಿಕ ಬ್ರಾಹ್ಮಣನ ಪಾಡು ನಾಯಿ ಪಾಡು. "ಯತೋ ಧರ್ಮಸ್ತತೋ ಜಯಃ" ಎಂಬ ನ್ಯಾಯಸೂತ್ರ ಅಲ್ಲಿ ಹರಿದುಹೋಗುತ್ತದೆ. ಚಿಮಣಿಯ,...,ನ ಪಾಡೂ ಹಾಗೆ ಸತ್ಯಕ್ಕೆ ಸಾವು ಉಂಟು ಎಂಬುದನ್ನು ಸಾರುತ್ತದೆ. ಸಾಮಾಜಿಕ ಬಹು ಸಂಖ್ಯರ ದಬ್ಬಾಳಿಕೆಯು ವೈವಿಧ್ಯ ಓದುಗರನ್ನು ಹೆದರಿಸುವಷ್ಟಿದೆ. ಮಹಾಪೂರ ಮತ್ತು ಪ್ಲೇಗು ಊರನ್ನು ಮುಗಿಸುವುದು ಸಾಂಕೇತಿಕವಾಗಿದೆ. ಕಲಿಯುಗದ ಅಂತ್ಯದಲ್ಲಿ ಮುಕ್ತರಾಗಲು ಯಾವ ಪ್ರಯತ್ನವನ್ನೂ ಮಾಡದೆ ಪಾಪಿಷ್ಠರನ್ನು ಲಯದ ಮೂಲಕ ವಿಧಿಯು ತನ್ನ ಲೋಕಕ್ಕೊಯ್ದಿಟ್ಟು ಕೆಲಕಾಲಾನಂತರ ಪುನಃ ಸೃಷ್ಟಿಯನ್ನಾರಂಭಿಸುವಾಗ ಅವರನ್ನು ಅವರವರ ಪಾಪ ಪ್ರಮಾಣಕ್ಕೆ ಸರಿಯಾದ ರೂಪ-ಆವರಣಗಳನ್ನಿತ್ತು ಹುಟ್ಟಿಸುತ್ತಾನೆ—ಎಂಬ ನಂಬಿಗೆಯಲ್ಲಿರುವ ಲಯ ರೂಪದ ಅವಧಿಯುಕ್ತ ಮೋಕ್ಷದಂತೆ ಊರು-ಹೊಲಗೇರಿಗಳ (The good and the evil forces) ನಡುವೆ ನಡೆದ ಸಂಗ್ರಾಮದಲ್ಲಿ ಹೊಲೆಗೇರಿಯ ಪ್ರಭಾವ ಹೆಚ್ಚಾದಾಗ ಇಡಿ ಗ್ರಾಮಕ್ಕೆ ನೆರೆ – ಪ್ಲೇಗುಗಳು "ಲಯ - ಮೋಕ್ಷ" ವನ್ನು ಕೊಡುತ್ತವೆ. ಗ್ರಾಮಜೀವನದ ನೈತಿಕ ಅಧಃಪತನದ ಭೀಕರ ಸ್ವರೂಪ ವನ್ನಿಲ್ಲಿ ಕಾಣಬಹುದು; ಧರ್ಮಭ್ರಷ್ಟನ್ನ ಅಧಾರ್ಮಿಕರ ಅರುಚಿಕರವಾದ ವರ್ಚಸ್ವಿತ್ವ ವನ್ನಿಲ್ಲಿ ಗುರುತಿಸಬಹುದು. ಹಿಂದೆ ಸಮಾಜದ ಆರೋಗ್ಯವನ್ನು ಕಾಯ್ದ ಮಠವೇ ಈಗ ಆರೋಗ್ಯ ಶತ್ರುವಾದ ವಿಪರೀತದಶೆಗೀಗ ಅನೇಕ ಗ್ರಾಮಗಳು ನಿದರ್ಶನ ಕೊಡಬಲ್ಲವು. "ಪಾಪವು ರಕ್ತಬೀಜ ರಾಕ್ಷಸನಂತೆ, ಕೊಂದರೆ ಸಾಯ ಲಾರದ ವಸ್ತುವೆಂದರೆ ಅದೊಂದೇ"—ಎಂಬ ಶಾಶ್ವತ ಸತ್ಯವನ್ನು ಸಮಾಜದ

ಮುಖಕ್ಕೆ ಬರೆಕೊಟ್ಟಂತೆ "ಗ್ರಾಮಾಯಣ" ಎಚ್ಚರಿಸಿ ತೋರಿಸುತ್ತದೆ. ಈ ಪಾಪಕ್ಕೆ ಗ್ರಾಮಸ್ಥರೊಡನೆ ಸರಕಾರಿ ನೌಕರರೂ ಪಾಲುದಾರರಾಗಿರುವುದಿಲ್ಲಿ ವಿಶೇಷ! ಈ ವಿಶೇಷ ಕಾರಣದ ಪ್ರಾಧಾನ್ಯವನ್ನು ಬಹಳ ಜನ ಇನ್ನೂ ಅರಿತಿಲ್ಲ.

ಬಸವರಾಜ ಕಟ್ಟೀಮನಿಯವರ "ಜರತಾರೀ ಜಗದ್ಗುರು" ವೆಂಬ ಕಾದಂಬರಿಯು ನಮ್ಮ ಗ್ರಾಮಸಮುದಾಯಗಳ ನೈತಿಕ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವುದರಲ್ಲಿ ಮಠ - ಮಾನ್ಯಗಳು ವಹಿಸಿದ ಪಾತ್ರವನ್ನು ಚೆನ್ನಾಗಿ ಚಿತ್ರಿಸುತ್ತದೆ. ಅದೊಂದು ಕಪಟ ಸನ್ಯಾಸಿಯ ಕಾರಭಾರ. ಯಾವ ಸಂಸ್ಥೆ ಕೆಟ್ಟು ಹೋದರೂ ಸಮಾಜಕ್ಕೆ ಹಾನಿ. ಆದರೆ ಧರ್ಮಸಂಸ್ಥೆ ಕೆಟ್ಟರೆ ಎಲ್ಲದಕ್ಕಿಂತ ಹೆಚ್ಚು ದೀರ್ಘ ಕಾಲಿಕವೂ ಆಳವೂ ಆದ ಹಾನಿಯುಂಟಾಗುತ್ತದೆ. ವಿಶ್ವದ ಉಳಿವಿರುವುದು ವಿಶ್ವಾಸದಲ್ಲಿ. ವಿಶ್ವಾಸದ ಮೂಲಾಧಾರವು ಧರ್ಮಪೀಠಗಳೆನ್ನಿಸಿದ ಮಠಗಳು. ಕಾರಂತರ "ಗರ್ಭಗುಡಿ" ಯಂತಹ ನಾಟಕಗಳೂ ಹೀಗೇ ಧರ್ಮದ ಅಧಿಕಾರ ಪೀಠವನ್ನೇರುವ ನಡೆಸುವ ಕಾಮಾಚಾರ— ವಾಮಾಚಾರಗಳನ್ನು ಬಯಲಿಗೆಳೆಯುತ್ತವೆ. Social Desintegration ಸಾಮಾಜಿಕ ಸಹಭಾವನೆ ಒಡೆದು ನುಚ್ಚುನೂರಾಗಲು ನಮ್ಮಲ್ಲಿಂದು ಈ ಬಗೆಯ "ಧರ್ಮಗ್ಲಾನಿ" ಬಹುಮಟ್ಟಿಗೆ ಕಾರಣವಾಗಿದೆಯೆನ್ನಬಹುದು. ಬಸವ ರಾಜರ ಜಗದ್ಗುರು ಕಪಟಾಚಾರದ ವಿಶ್ವರೂಪ ದರ್ಶನವನ್ನು ಮಾಡಿಸುತ್ತಾನೆ. ಮುಗ್ಧರನ್ನು ಮೋಸಗೊಳಿಸುವ ಅವನ ಕೃತ್ಯ ಕೊನೆಗೆ ಬಯಲಿಗೆ ಬಿದ್ದು ಅವನು ಸ್ಥಾನಭ್ರಷ್ಟನಾಗುತ್ತಾನೆ ಎಂಬುದು ಅಪೇಕ್ಷಿತ ನಿಗಮನ. 'ವಿಜ್ಞಾನರಹಿತವಾದ ಧರ್ಮ ಕುರುಡು, ಧರ್ಮರಹಿತವಾದ ವಿಜ್ಞಾನ ಕುಂಟು' ಎಂದ ಐನ್‌ಸ್ಟೀನ್ ಮಹಾತ್ಮನ ಮಾತಿಲ್ಲಿ ಸ್ಮರಣೀಯ. ಬೌದ್ಧಿಕ ಜಾಗರ ಜನರಲ್ಲಿಲ್ಲದಾಗ ಧರ್ಮಧ್ವಜರ ಸರ್ವಾಧಿಕಾರ ನಡೆಯುವುದು ಸಹಜ.

ಉಪಸಂಹಾರ

ಕೌಟಿಲ್ಯನ ಹೇಳಿಕೆಯಂತೆ ನೂರರಿಂದ ಐನೂರರ ವರೆಗಿನ ಸ್ವತಂತ್ರರಾದ ಕೃಷಿಕರಿರುವ ವಸತಿ ಸ್ಥಳಕ್ಕೆ ಹಳ್ಳಿಯೆಂದು ಹೆಸರು. ಒಂದು ಹಳ್ಳಿ ಇನ್ನೊಂದರಿಂದ ಒಂದೆರಡು ಕೂಗಳತೆಗಳಲ್ಲಿರುವುದೆಂದು ಅವನ ಅನುಭವ. 'ಮಾನಸಾರ' ದಲ್ಲಿ 8 ಬಗೆಯ ಹಳ್ಳಿಗಳನ್ನು ಹೇಳಲಾಗಿದೆ. 'ಕಾಮಿಕಾಗಮ' ದಲ್ಲಿ 15 ತರದ ಗ್ರಾಮಗಳ ಉಲ್ಲೇಖವಿದೆ. ಹಳ್ಳಿಗಳು ಸಾಮಾನ್ಯವಾಗಿ ಪೂರ್ವ–ಪಶ್ಚಿಮವಾಗಿ ಹಬ್ಬಿರುತ್ತಿದ್ದವು. ಮಹಾಭಾರತದಲ್ಲಿ ಮುಳ್ಳು ಮನೆಗಳುಳ್ಳ ಹಳ್ಳಿಗಳ ವರ್ಣನೆ

ಇದೆ. ಯಾಜ್ಞ್ಯವಲ್ಕ್ಯ ಸ್ಮೃತಿಯು ಹಳ್ಳಿಗಳಿಗೆ ಕೋಟೆಗಳಿರುತ್ತಿದ್ದವೆಂದು ಹೇಳಿದೆ.

'ಗ್ರಾಮ' ಎಂದರೆ ಮೂಲತಃ "ಸಭೆ," ಯಾರ ಸಭೆ? ಆಯುಧ ಪಾಣಿಗಳದ್ದು. ಅದರ ತಾತ್ಪರ್ಯ "ಸಮುದಾಯ Chmmune" ಎಂದು. ಈ ಸಮುದಾಯದ ಅಧ್ಯಕ್ಷನಾದ ಗ್ರಾಮಣಿಗ (ಗ್ರಾಮಿಕನಿಗೆ) ಗ್ರಾಮವೃದ್ಧರು ಸಲಹೆಗಾರರು. ಗ್ರಾಮವೃದ್ಧರನ್ನು "ಭೋಜಕ"ರೆಂದು ಕರೆಯಲ್ಪಡುತ್ತಿದ್ದ ಜಮೀನುದಾರರು ಅನಂತರ ಆದೇಶಿಸಿದರು. ಗ್ರಾಮೇಯಿಕ ಅಥವಾ ಗ್ರಾಮ ಭೃತಕನು ಗ್ರಾಮಕ್ಕೂ ರಾಜಧಾನಿಗೂ ನಡುವಣ ಸಂಪರ್ಕಕ್ಕೆ ಕಾರಣನಾದ ರಾಜ ಸೇವಕ. ಅಂದರೆ ಪ್ರಾಚೀನ ಕಾಲದಿಂದಲೂ ನಮ್ಮ ಹಳ್ಳಿಗಳು ಸ್ವಯಂಭೃತ ಸ್ವಯಂಶಿಷ್ಟ, ಸ್ವಯಂಪುಷ್ಟ ಸಂಸ್ಕೃತಿಕೇಂದ್ರಗಳಾಗಿದ್ದವು. ಆದರೆ ಬ್ರಿಟಿಷ್ ಆಡಳಿತ ಬಂದ ಮೇಲೆ ಅವುಗಳ ಸ್ವಶಾಸನಾಧಿಕಾರ ಮೊಟಕಾಗುತ್ತಾ ಹೋಗಿ, ಅಲ್ಲಿಯ ಸಮಾಜದ ಅಂಗಗಳು ಸಳಿಸಿಹೋಗಿ, ಬಹಳ ಕ್ಷುದ್ರವಾಗುತ್ತ ನಡೆದುದ ರಿಂದ ಪುನರುಜ್ಜೀವಿಸಲ್ಪಟ್ಟ ಪಂಚಾಯತ ಪದ್ಧತಿಯನ್ನು ಸಹ ಚೆನ್ನಾಗಿ ಬಳಸಿ ಕೊಂಡು ತಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳಲಾರದ ಸ್ಥಿತಿಗೆ ಅವುಗಳಲ್ಲಿಷ್ಟೋ ಇಳಿದುಹೋಗಿರುವುದು ಸಾಹಿತಿಗಳಿತ್ತ ಬಹುಸಂಖ್ಯ ಗ್ರಾಮಜೀವನ ಚಿತ್ರಗಳಿಂದ ಸ್ಪಷ್ಟವಾಗುತ್ತದೆ. ಆದರೆ "ಕಾಲೋ ಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ" ಎಂಬ ಪ್ರತ್ಯಾಶೆಯುಳ್ಳ ಭವಭೂತಿಗಳಾಗಿ ಬದುಕಿ ಬಂದ ನಾವು ಸದ್ಯದಲ್ಲೇ ಅವು ಪುನರುತ್ಥಾನ ಹೊಂದುವುದನ್ನು ಕಾಣುವಂತಹ ಕಾರ್ಯಗಳನ್ನು ಮಾಡಲು ಸಿದ್ಧರಾಗಿರುವೆವಲ್ಲವೇ ?

2. "Journal of the Karnataka University" Vol. VIII P. 286: "The Political and Administrative Impact of British Rule on India."

by **A. M. Rajasekhariah.**

ತಿರುಮಲಾರ್ಯನ ಗದ್ಯ

'ಪದ್' ಎಂದರೆ ಹೋಗು, ಚಲಿಸು, ಹತ್ತರಿಸು, ಸಂಪಾದಿಸು: ನಾಮಪದವಾದರೆ ಅದಕ್ಕೆ ಪಾದ, ಚತುರ್ಥಾಂಶ, ಕಾಲು ಎಂದರ್ಥ. ಬಹುಶಃ ನಾಲ್ಕು ಸಲ ಕಾಲು ಹಾಕುವದಕ್ಕೆ ಅನುಗುಣವಾಗಿ ಮೊದಲು ರಚಿಸಿದ ಪಾದ ಪದ್ಧತಿಯು ಪದ ವಿನ್ಯಾಸ ಪದ್ಯವಾಗಿರಬೇಕು. ಕುಣಿತವಿಲ್ಲದ ನಾಗರಿಕತೆಯಿಲ್ಲ, ತಾಳವಿಲ್ಲದ ಕುಣಿತ ಅಸಂಸ್ಕೃತ. 'ತಾಲಾನುಸಾರೇಣ ಪತಂತಿ ಧಾರಾಃ' ಎಂಬಂತೆ, 'ಪದ ವಿನ್ಯಾಸ ಮಾತ್ರೇಣ ಯಯಾ ನಾಪಹೃತಂ ಮನಃ' ಎಂಬ ಪ್ರಸಿದ್ಧಿ ಸೂಚಿಸುವಂತೆ ಪದ್ಯ ತಯಾರಾಗಿರಬೇಕು. ತದ್ವಿರುದ್ಧ ಗತಿ ಗದ್ಯದ್ದು. 'ಗದ್' ಎಂದರೆ ಮಾತಾಡು, ಹೇಳು, ಕಥಿಸು, ಗಣಿಸು, ಸಾರು, ಗರ್ಜಿಸು, ವಾಕ್ಯ ಪ್ರಯೋಗಮಾಡು ಎಂದಾಗುತ್ತದೆ. ಆದುದರಿಂದ, ಹೆಜ್ಜೆಯಿಕ್ಕುವ, ತಾಳಹಾಕುವ, ನಾಲ್ಕರ ಅಳತೆಗೊಳಪಡುವ ಪದ್ಯದಿಂದ ಗದ್ಯ ಭಿನ್ನವಾಯಿತು. ಆದರಿಂದಲೋ ಏನೋ ದಂಡಿ 'ಓಜಸ್ಸಮಾಸ ಭೂಯಸ್ತ್ವಮೇತದ್ಗದ್ಯಸ್ಯ ಜೀವಿತಂ' ಎಂದು ಹೇಳಿದ. ಅಕ್ಷರ ಮಾತ್ರೆಗಳ ಸಂಖ್ಯಾ ಪರಿಮಿತಿಯಿಲ್ಲದ ವಿವಕ್ಷಾಪೇಕ್ಷಿಯಾದ ವಾಕ್ಯರಚನೆ ಗದ್ಯಕ್ಕೆ ಅಸ್ಥಿಪಂಜರವಾಯಿತು. ರಚನೆಯಲ್ಲಿ, ಬಂಧದಲ್ಲಿ ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚಿನ ಅನಿರ್ಬಂಧ ದೊರಕಿತು.

ಪ್ರಾಚೀನ ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ಮಾರ್ಗಕ್ಕೆ ಸೇರಿದ್ದು: ಸಂಸ್ಕೃತದಲ್ಲಿ ಕಾವ್ಯವನ್ನು ಗದ್ಯ, ಪದ್ಯ, ಮಿಶ್ರ ಎಂದು ಮೂರು ವಿಭಾಗ ಮಾಡುತ್ತಾರೆ. ಮಿಶ್ರವರ್ಗದಲ್ಲಿ ದೃಶ್ಯವಾದ ರೂಪಕ ಮತ್ತು ಶ್ರವ್ಯವಾದ ಚಂಪೂ ಬರುತ್ತವೆ. ತಿರುಮಲೆಯಾರ್ಯನ ಚಿಕ್ಕದೇವರಾಜ ವಿಜಯವು ಒಂದು ಚಂಪೂ ಕಾವ್ಯ. ಅವನ ಕಾಲ ಕ್ರಿ. ಶ. 1645. ಈತನು ಮೈಸೂರಿನ ಚಿಕ್ಕದೇವ ಮಹಾರಾಜರೊಡನೆ ಬಳೆದು, ಮಿತ್ರನಾಗಿ ವಿದ್ಯಾಭ್ಯಾಸ ಮಾಡಿದನೆಂದೂ ತಿಳಿದು ಬರುವುದರಿಂದ ಆತ ಬಳಸಿದ ಭಾಷೆ ನಡುಗನ್ನಡ ಕಾಲದ ಹಳಗನ್ನಡ. ಪದ್ಯಗಳು ಕಂದವನ್ನುಳಿದರೆ ವೃತ್ತಗಳ ಜಾತಿಗೆ ಸೇರಿದವು. ಅಂದರೆ ಗಣಪದ್ಧತಿಯು ಅಕ್ಷರವೃತ್ತ. ಗದ್ಯವು ಸುಖವಾಗಿ ಪರಂಪರಾಗತ, ಪ್ರಾಸಪರಿವೇಷ್ಟಿತ. ತನ್ನ ಭಾಷೆಯ ಬಗ್ಗೆ ತಿರುಮಲಾರ್ಯ ತಾನೇ ಹೇಳಿಕೊಂಡಿದ್ದಾನೆ:

ಸಕ್ಕದ ಕನ್ನಡವೆರಡರೊ
ಳೆಕ್ಕಸರಂಗೊಳ್ವುದೋಜೆಗಬ್ಬಂ ರಸದಿಂ
ದುಕ್ಕಳಿಸಿ ಪಾಯ್ವುಪೆರ್ದೊರೆ
ಗಕ್ಕುಮೆ ತಡೆ ಪಳ್ಳದಿಂಟೆ ಕಿರುದೊರೆನೆರೆಗಳ್

ತತ್ಸಮ ಮತ್ತು ದೇಶ್ಯ ತದ್ಭವಗಳ ಏಕಾವಳಿಯಂತೆ ಈತನ ಮಾತು ಹಳ-ನಡು ಹೊಸಗನ್ನಡ: ಉದ್ದಕ್ಕೂ ಈ ಮಾರ್ಗವನ್ನೇ ಹಿಡಿದಿದೆ, ಕೆಲಕಾಲದಲ್ಲಿ ಕೆಲ ಪ್ರಬಂಧಗಳಲ್ಲಿ ಕೆಲ ಕವಿಗಳು ಹೆಚ್ಚು ಅಥವಾ ಕಡಿಮೆ ತತ್ಸಮಗಳನ್ನು ಬಳಸಿರುವುದೊಂದೇ ಗಮನಾರ್ಹ ವಿಷಯ; ಸಾಮಾನ್ಯವಾಗಿ ಪ್ರಾಚೀನ ಪದ್ಧತಿಯ ಕನ್ನಡ ಚಂಪುಗಳೆಲ್ಲ 'ಸಂಸ್ಕೃತ ಭೂಯಿಷ್ಠ'ವೆನ್ನಬೇಕು. ಅದರ ಶತಾಂಶವನ್ನು ಬಹಳ ಹೆಚ್ಚಿಸಿದವ ಷಡಕ್ಷರಿ. ಅಂಥ ಕವಿಗಳು ಕೂಡ ದೇಸಿಯ ಬೆಡಗನ್ನು ಮರೆತಿಲ್ಲ. ಆದ್ದರಿಂದ ಕೇಳುವುದಕ್ಕೆ ಸಂಸ್ಕೃತ ಕಾವ್ಯಕ್ಕಿಂತ ಹಳಗನ್ನಡ ಕಾವ್ಯ ಹೆಚ್ಚು ಇಂಪು. ಸಂಸ್ಕೃತ ಪದಸೌಂದರ್ಯದ ಜೊತೆಗೆ ಎರಡನೆಯದರಲ್ಲಿ ಬಿಂದ್ವಂತಪದ ಹೆಚ್ಚಾಗಿರುವ ಹಳಗನ್ನಡ ಮಾಧುರ್ಯವೂ ಸೇರಿರುತ್ತದೆ. ಈ ದೃಷ್ಟಿಯಿಂದ ಹಳಗನ್ನಡ ಕಾವ್ಯಗಳು ಸಂಸ್ಕೃತ ಕಾವ್ಯಗಳ ಮುಂದಿನ ಹೆಜ್ಜೆ ಎನ್ನಬಹುದು. ಆದ್ದರಿಂದಲೇ ಆ ಕವಿಗಳಲ್ಲಿ ಹಲವರು ಉಭಯ ಕವಿಗಳೆನಿಸಿದ್ದರು. ಕನ್ನಡ ಸಾಹಿತ್ಯ ಸರಸ್ವತಿಗೆ ಪದ ಭಾವ ಸಂಪತ್ತಿಗಳೆರಡಕ್ಕೂ ಸಂಸ್ಕೃತ ಕನ್ನಡವೆಂಬೆರಡು ಮೊಲೆಗಳಿರುವುದು ಒಳ್ಳೆಯದೇ ಆಗಿದೆ. ಆ ಸಾಹಿತ್ಯದಲ್ಲಿ ಎರಡರ ಹಾಲೂ ಸಮರಸವಾಗಿ ಹರಿದುಬಂದಿರುವುದು ಸ್ಪಷ್ಟವಾಗಿಯೇ ಇದೆ. ತಿರುಮಲಾರ್ಯನು, "ಆದರ್ಶ ಶೈಲಿಯಲ್ಲಿ ಶಬ್ದಾರ್ಥದ ನುಡಿಕಟ್ಟು ನುಣುಪಾಗಿರಬೇಕು ಅಥವಾ ಸುಕುಮಾರವಾಗಿರಬೇಕು, ಶ್ರುತಿ ಪೇಶಲವಾಗಿರಬೇಕು, ಶ್ರುತಿ ಸುಭಗವಾಗಿರಬೇಕು – Literature is word–music ಎಂಬಂತೆ ಇಂಪಾಗಿರಬೇಕು, ಲಲಿತವಾಗಿರಬೇಕು; ಅರ್ಥಗತಿಯ ವೈವಿಧ್ಯಕ್ಕನುಗುಣವಾದ ವೃತ್ತಿಭೇದಗಳಿಂದ ಸಮನ್ವಿತವಾಗಿರಬೇಕು. ರೀತಿಯ ಜೊತೆಗೆ ಶಬ್ದಾಲಂಕಾರ ಅರ್ಥಾಲಂಕಾರಗಳೂ ಉಚಿತವಾಗಿರಬೇಕು, ಭಾವರಸಗಳು ತಮ್ಮ ಮುದ್ರೆಯೊತ್ತಿರಬೇಕು" ಎಂದಿದ್ದಾನೆ. ಹೀಗೆ ಗುಣ - ರೀತಿ - ಅಲಂಕಾರ - ರಸ ಪದ್ಧತಿಗಳಲ್ಲಿ ಹೇಳಿದ ಗ್ರಾಹ್ಯಾಂಶಗಳೆಲ್ಲವೂ ತನ್ನ ಕಾವ್ಯದಲ್ಲಿ ಬರುವಂತೆ ಕವಿ ಚಿಕ್ಕದೇವರಾಜ ವಿಜಯವನ್ನು ಬರೆಯ ಹೊರಟಿದ್ದಾನೆ. ಈ ಅಂಶಗಳು ಗದ್ಯ - ಪದ್ಯಗಳಿಗೆ ಸಾಧಾರಣ; ಕಥನ, ವರ್ಣನ, ವಿವರಣ. ವಿವೇಚನಗಳೆಂತೋ ಅಂತೆಯೇ ಇವೂ. ಆದರೆ ಗದ್ಯದಲ್ಲಿಯ ವಿಶೇಷವೆಂದರೆ ನಿಯತವಾದ ಅರ್ಥಸಹಜಯುತಿ ಮತ್ತು ಛಂದೋರಾಹಿತ್ಯ.

ಉಪೋದ್ಘಾತ ರೂಪದ 59 ಪದ್ಯಗಳಾದ ಬಳಿಕ ವಚನ ಅಥವಾ ಗದ್ಯವು ಪ್ರಸ್ತುತ ಕಾವ್ಯದಲ್ಲಿ ಪ್ರಾರಂಭವಾಗುತ್ತದೆ. ಅದೆಂತಿದೆಯೆನೆ—

ಇಂತು ತನ್ನ ಪರಮ ಪದದೋಳ್ ವೈಕುಂಠಪುರದ ಮಧ್ಯದೋಳ್ ಸಾಸಿರಗಂಬದ ಮಹಾಮಣಿ ಮಂಡಪದೊಳಿರ್ದರಸುಗೆಯ್ಯುತೆ ತನ್ನೊಳಿರ್ಪ ನಿತ್ಯಮುಕ್ತರ ನೆರೆವಾಳ್ತೆಯೊಳಳ್ತಿವಡುತ್ತುಂ ಪ್ರಳಯ ಕಾಲದೊಳವ್ಯಕ್ತ ಸೂಕ್ಷ್ಮ, ಪ್ರಕೃತಿಯೊಳಡಂಗಿ ಮಯಣದೊಳ್ ಪುದುಂಗಿದ ಚಿನ್ನದೊರೆ ಪುಡಿಯಂತೆ ರೂಪಳಿದಿರ್ಪ ಬದ್ಧಾತ್ಮವರ್ಗದ ದುರ್ಗತಿಯಂ ಕಳೆಯಲೆಂದು ಸರ್ವಂಗೈಯಲೆಳಸಿ.

ಇದೊಂದು ವಾಕ್ಯಾರ್ಥ. ಮುಂದೆ ಪದ್ಯ ಶುರುವಾಗುತ್ತದೆ. ಅಂದರೆ ರೇಲ್ವೆ ಬೋಗಿಗಳನ್ನು ಗುಣಿಕೆಗಳಿಂದ ಸಂಬಂಧಿಸುವಂತೆ ಈ ಗದ್ಯಭಾಗ ಅರ್ಥಾನು ಸಾರವಾಗಿ ಹಿಂದು ಮುಂದಿನ ಪದ್ಯಗಳನ್ನು ಜೋಡಿಸುತ್ತದೆ. ದೇವಸ್ಥಾನಗಳಲ್ಲಿ 'ಸಾಹಿತ್ಯಮುಪಧಾರಯ' ಎಂದ ಕೂಡಲೇ ಹೇಳುವ ಚೂರ್ಣಿಕೆಗಳಂತೆ ಸದ್ಯದ ಗದ್ಯವು ಇಂದಿನ ವಾಕ್ಯಗಳಲ್ಲಿ ಉಚ್ಚಾರ ಅರ್ಥಗಳಿಗನುಗುಣವಾಗಿ ಅಲ್ಪವಿರಾಮಾದಿ ಚಿಹ್ನೆಗಳನ್ನು ಹಾಕುವಂತೆ ನಡುನಡುವೆ ವಿರಾಮ ಸ್ವಾಯತ್ತತೆವಡೆದ ಚಿಕ್ಕ ದೊಡ್ಡ ಪದಗಳ ಪುದುವಾಳ್ತೆಯನ್ನು ಬಿಂಬಿಸುತ್ತದೆ. ಇಲ್ಲಿಯ ಸಕ್ಕದ ಕನ್ನಡ ಮಿಶ್ರಣವು ಮುತ್ತುಮೆಳಸುಗಳನ್ನು ಕೋದಂತಿರದೆ ಮುತ್ತುಹವಳಗಳನ್ನು ಕೋದಂತಿದೆ. ಒಂದು ಸರಳವೂ ಸುಂದರವೂ ಇಷ್ಟಾರ್ಥ ವ್ಯವಚ್ಛೇದಕವೂ ಆದ ಉಪಮಾಲಂಕಾರವೂ ಇಲ್ಲಿ ಬಂದಿದೆ. ಮೇಣದಲ್ಲಿ ಹುದುಗಿದ ಚಿನ್ನದ ಪುಡಿ ಅದೃಶ್ಯವಾಗಿರುವಂತೆ ಬದ್ಧಾತ್ಮರ ಮೂಲ ಆತ್ಮಸ್ವರೂಪವು ಅಜ್ಞಾನಾಂಧಕಾರದಿಂದ ಆಚ್ಛಾದಿತವಾಗಿ ತಿಳಿಯದಂತಾಗಿರುವುದೆಂಬ ಮಾತು ತತ್ತ್ವಾರ್ಥವನ್ನು ತಿಳಿಯಾಗಿ ಹೇಳಬಲ್ಲ ಕವಿಶಕ್ತಿಗೆ ಒಂದು ನಿದರ್ಶನವಾಗಿದೆ.

'ಅನುಪ್ರಾಸಪ್ರಿಯಾ ಗೌಡಾಃ' ಎಂಬ ಮಾತು ದಾಕ್ಷಿಣಾತ್ಯರೆಲ್ಲರಿಗೂ ಬಹುಶಃ ಸಲ್ಲಬಹುದು. ಪದದ ದ್ವಿತೀಯಾಕ್ಷರ ಪ್ರಾಸವಂತೂ ಕನ್ನಡದಲ್ಲಿ ಸುಪ್ರಸಿದ್ಧ. ಮೊದಲಿನಿಂದಲೂ ಗದ್ಯಪದ್ಯಗಳೆರಡರಲ್ಲೂ ಅನುಪ್ರಾಸವು ಪಂಡಿತ ಪಾಮರ ಉಭಯರಂಜಕವಾಗಿತ್ತೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಮೂಡಲಪಾಯದ ಬಾಣಾಸುರ ಕಥೆಯ ಈ ಕೆಳಗಿನ ಬಲರಾಮನ ಮಾತನ್ನು ಅವಲೋಕಿಸಿರಿ: 'ಎಲೈ ತ್ರ್ಯಕ್ಷನೇ, ಈ ಕ್ಷಿತಿಯೊಳ್ ಭಿಕ್ಷಾಟನಮಂ ಮಾಡಿ.' ಮಾಡಿ ಉಂಡು (ತಿರುಗುವ) ಕುಕ್ಷಿಂಭರ (ನಾದ) ಬೋಳ ಜಂಗಮನೆ. ನಿನಗೇತಕ್ಕೆ ಇಷ್ಟು ಮಮಕಾರ. ಲಕ್ಷ್ಯಾಲಕ್ಷ್ಯ ವಿಚಕ್ಷಣ ಅಕ್ಷೀಣ ಬಾಹು ಬಲದಕ್ಷ (ನಾದ ನಾನು) ಈ ಕ್ಷಣವೇ ನನ್ನ ಅಕ್ಷಯವಾದ ಹಲಾಯುಧದಿಂದ ನಿನ್ನನ್ನು ಶಿಕ್ಷಿಸಲಿಂ ರಕ್ಷಿಸುವ ನಾಥನಾರು?" ಇದೊಂದು

ಜಾನಪದ ವಾಗ್ವೈಖರಿಯ ಉದಾಹರಣೆ. ಇದರ ಜೊತೆಗೆ ಚಿಕದೇವರಾಜ ವಿಜಯದ ಮುಂದಿನ ವಚನವನ್ನಿಟ್ಟು ನೋಡೋಣ.

'ಇಂತೀಯಾದವರ್ ವಹುಗಡಲ ನಡುವಿನೆಡೆಯೊಳಿಡಿ ಕವಲೊಡೆಯುನ ಬೀಡಿನ ಪಡಿನೆಳಲಂತೆ ಕಡುಬೆಡಂಗುವಡೆದ ದ್ವಾರಾವತೀ ಪುರಮಂ ಪರಿಪಾಲಿಸುತ್ತು ಮಿದಾನತೆಂ ತಮ್ಮ ಕುಲದೇವತೆಯುಂ ಕುಲಧನಮುಮಪ್ಪ ನಾರಾಯಣನ ಚರಣಾರವಿಂದ ದ್ವಂದ್ವ ಸಂದರ್ಶನೋತ್ಕಂಠೆಯಿಂ ಭೂವೈಕುಂಠಾಪರಾಭಿಧಾನ ಮಾದ ಯಾದವಾಚಲಕೈತಂದು'—ಇಲ್ಲಿ ಕ್ರಿಯಾಪದವಿಲ್ಲ; ಪೂರ್ಣ ಕ್ರಿಯಾಪದ ಇದರ ಮುಂದೆ ಬರುವ ಪದ್ಯದಲ್ಲಿದೆ.—

ಅಕಲುಷಿತಾಶಯ ದ್ರವಿಡ ಸಂಸ್ಕೃತ ವೇದವಚೋವಿತಾನ ಶಾ। ಣಕ ಕಣದಿಂ ಯತೀಂದ್ರ ಶುಭಸೂಕ್ತಿ ಸುಧಾರಸ ಸೇಕದಿಂದೆಯುಂ॥ ಪ್ರಕಟಿತಮಾದ ಯಾದವ ಗಿರೀಶನ ಪಾದನಖಾನಘಾಂಶುವಿಂ। ಸಕಲ ತಮಂಗಳಂ ಕಳೆದು ಸಂತಸಭಾಜನರಾದರಾದಿಯೋಳ್ ॥ ಯಾದವರು ಸಂತಸ ಭಾಜನರಾದರು ಎಂಬ ಪ್ರಧಾನ ವಾಕ್ಯ ಹೀಗೆ ಗದ್ಯಪದ್ಯಗಳಲ್ಲಿ ಹಂಚಿಹೋಗಿದೆ. ಈ ಕ್ರಮವನ್ನು ಈ ಚಂಪುವಿನ ಉದ್ದಕ್ಕೂ ಕಾಣಬಹುದು. ಇದೋ ಇಲ್ಲಿ ಮತ್ತೆ ನೋಡಿ:

'ವರವಂತಿಯಿಂ ನರತತಿಯುಂ
ಪೊರೆದತಿಯಂತ್ರಣದಿನಖಿಲಲೋಕ ಶರಣ್ಯಂ
ನರಸನೃಪಂ ಸುರಸಕೃಪಂ
ಸರಸಮುಪಾರೂಢಿಗೆಯ್ದು ಪೊರೆದಂ ದಿವಮಂ'

'ಅವಂ ನರಸನೃಪಂ ದಿವಮಂ ಪೊರೆದಂ' ಎಂಬ ಪ್ರಧಾನ ವಾಕ್ಯ ಇಲ್ಲಿ ಹಂಚಿಹೋಗಿದೆ.

ಮಹಾಭಾರತದಲ್ಲಿ ನಡುನಡುವೆ 'ಭೀಷ್ಮ ಉವಾಚ' 'ಯುಧಿಷ್ಠಿರ ಉವಾಚ' ಎಂಬಂತಹ ಪದಪುಂಜಗಳನ್ನು ನಾವು ನೋಡುತ್ತೇವೆ. ಈಗ 'ಭೀಷ್ಮ ಹೇಳಿದ, ಯುಧಿಷ್ಠಿರ ಹೇಳಿದ' ಎಂಬವು ಮುಂದಿನ ಅನುಷ್ಟುಪ್ಪುಗಳಲ್ಲಿ ಅಡಕವಾಗಿರುವುದಿಲ್ಲ. ಈ ತುಣುಕುಗಳು ಗದ್ಯದ ರೂಪದವು. ಈ ಕ್ರಮ ರಾಮಾಯಣದಲ್ಲಿ ಕಂಡುಬರುವುದಿಲ್ಲ. ಈ ಕ್ರಮವನ್ನು ವ್ಯಾಸರು ಅನುಸರಿಸಿದ್ದು ಕವಿತೆಯೊಳಗೇ ಅಂಥ ಪದಗಳನ್ನು ಅಡಕ ಮಾಡಲು ತಿಳಿಯದುದರಿಂದ ಎಂಬುದು ಸುಳ್ಳು. ಪದ್ಯಕ್ಕೆ ಗದ್ಯದ ಹಿನ್ನೆಲೆಯಿದ್ದರೆ ಚೆಂದ ಎಂಬ ಕಲ್ಪನೆಯ ಪ್ರಾಥಮಿಕ ಅಸ್ಪಷ್ಟ ಅವಸ್ಥೆಯೇ ಇದಕ್ಕೆ ಬಹುಶಃ ಕಾರಣವಾಗಿರಬಹುದು; ಇದೇ ಚಂಪುವಿನ ಆದಿಕಾರಣವಿರಬೇಕೆನಿಸುತ್ತದೆ. ಭಾಷಣದ ನಡುನಡುವೆ

ಪದ್ಯಗಳನ್ನೆತ್ತಿ ಉದಾಹರಿಸುವ ಪ್ರವೃತ್ತಿಯೇ ಇದರ ಮಾನಸಭೂಮಿಕೆ. ವಾಕ್ಯಗಳ ನಡುನಡುವೆ ಯತಿ, ನಿಲುಗಡೆ ವಿರಾಮಗಳು ಬರುವಂತೆ ಪದ್ಯಪ್ರವಾಹದ ನಡುನಡುವೆ ಹೀಗೆ ಅಸಂಪೂರ್ಣ ಕ್ರಿಯಾಪದವುಳ್ಳ ಗದ್ಯ ವಾಕ್ಯವು ಬಂದು. ಹಿಂದಿನ ಪದ್ಯದಲ್ಲಿ ಹೇಳಿದ ಅಂಶವನ್ನು ಮುಂದೆಳೆದುಕೊಂಡು ಮುಂದಿನ ಪದ್ಯಕ್ಕೆ ಉಪೋದ್ಘಾತ ರೂಪದಿಂದ ಬೆಳೆಸಿ ಅಂಟಿಸಿ ಹಾದಿ ಹಚ್ಚಿಬಿಡುವ ಸರಣಿ ಕನ್ನಡಿಗರಿಗೆ ರಮ್ಯವೆನಿಸಿರಬೇಕು—ಈ ಚಂಪುವಿನ ಪದ - ವಾಕ್ಯಗಳ ಗತಿಯನ್ನು ಅವಲೋಕಿಸಿದರೆ, ಜಿಗಿತದ ಸ್ಪರ್ಧೆಯಲ್ಲಿ ಜಿಗಿತಗಾರ ಮೊದಲು ಸುಮಾರು ದೂರ ಹಿಂದಿನಿಂದ ಓಡಿಬಂದು ಗಡಿಗೆರೆಯಲ್ಲಿ ಕೊನೆಯ ಹೆಜ್ಜೆಯಿಟ್ಟು ಅಲ್ಲಿಂದ ಮುಂದೆ ಹಾರುವ ವ್ಯವಸ್ಥೆ ಕಂಡುಬರುತ್ತದೆ. ಗಡಿಗೆರೆಯ ಹಿಂಭಾಗದ ಓಟ ಇಲ್ಲಿಯ ಗದ್ಯ, ಮುಂದಿನ ಜಿಗಿತ ಪದ್ಯ; ಈ ಕ್ರಮದಲ್ಲಿ ಕಥನೀಯ, ವರ್ಣನೀಯ ಅಥವಾ ವಿವರಣೀಯ ಭಾವ ಈ ಚಂಪುವಿನಲ್ಲಿ ಆವೇಶಾಂಶವನ್ನೇರಿ ಸಾಗುತ್ತದೆ. ಯಕ್ಷಗಾನದಲ್ಲಿ ಭಾಗವತರ ಪದ ಮತ್ತು ನಟರ ಅರ್ಥಗಾರಿಕೆ ಒಂದಾದ ಮೇಲೊಂದರಂತೆ ಬರುವುದಕ್ಕೂ ಈ ಸೊಗಸಿನ ಕಲ್ಪನೆಯೇ ಕಾರಣ. ಸಂಗೀತಕ್ಕೆ ಪಕ್ಕವಾದ್ಯಗಳಿದ್ದಂತೆ ಕಾವ್ಯದ ಪದ್ಯ ಪ್ರವಾಹದ ಸೊಗಸನ್ನು ಎತ್ತಿತೋರಿಸಲು ನಿಂತ ಬಂಡೆಗಳು ಈ ಗದ್ಯ ಖಂಡಗಳು. ಇವು ಸಾಮಾನ್ಯವಾಗಿ ಛಂದೋಬಂಧವಿಲ್ಲದ ಪದ್ಯರೂಪದವೇ. ಕಥನ ವರ್ಣನಗಳೆರಡನ್ನೂ ಪದ್ಯಗಳಂತೆಯೇ ಇವೂ ಮಾಡುತ್ತವೆ. ಅವೂ ಕಾವ್ಯವಾಣಿಗಳು, ಇವೂ ಕಾವ್ಯವಾಣಿಗಳು. ಗತಿಯ ಯತಿಭೇದವೊಂದೇ ಗಣ್ಯ. ತಾರತಮ್ಯ. ಚಿಕ್ಕದೇವರಾಜ ವಿಜಯದ ಗದ್ಯದಲ್ಲಂತೂ ಈ ಅಂಶ ಸುಸ್ಪಷ್ಟವಾಗಿ ತೋರುತ್ತದೆ. ಈ ಕೆಳಗಿನ ಪದ್ಯ ಗದ್ಯಗಳ ಕಾವ್ಯತ್ವವನ್ನು ನೋಡಿರಿ.

ಮೊಗವುಂ ಮೈಯ್ಯುಂ ಪೊಗರುಂ
ಮಿಗೆ ಸೊಗಸಂ ಪಡೆಯೆ ಕಂಡು ಕಳವಳದಿಂದ
ನ್ನೆಗಮಿಂದು ಕಾಮಸೂರ್ಯರ್
ಜಗುಳ್ದರ್ ಕರೆ ರೂಪುಗೊಂಡು ನಿಮುಬವಣೆಗಳಿಂ ॥

ಮತ್ತಮಿವಂ ಧರ್ಮದೊಳ್ ಧರ್ಮಸುತನಂ ನೇಮದೊಳ್ ರಾಮಚಂದ್ರನಂ ದೊರೆಗೊಂಡು ತನ್ನಂ ಬಳಿಸುವಾಳ್ದಿಯ್ವ ಅನುಜರ್ವೆರಸು ಸಂತಸದೊಳ್ ತನ್ನ ಬೀರಮಂ ಬಲ್ವಗೆಗಳರಿಕೆಗಾಳಿಗದೊಳೆ ಬಿನ್ನಾಣಂ ಪೊರ್ದಿದರಂ ಪೊರೆವುದರೊಳ್ ಔದಾರ್ಯಮನೋದಾಳಿ ಪಾರ್ವರೊಳ್ ವಿಕ್ರಮಂ ನಂಬಿದರೊಳ್ ಸೊಬಗಂ ಕೈವಿಡಿದ ರಾಣಿಯರೊಳ್ ಕಡುಪಂ ಕಳ್ಳರೊಳ್ ಪ್ರೇಮಂ ಪ್ರಜೆದ

ರೊಳ್ ಆಸೆಯುಂ ಜಪದೊಳ್ಭಕ್ತಿಯುಂ ಪುರುಷೋತ್ತಮನೊಳ್ ಪುದುಂಗಿಸಿ ಪದುಳದೊಳಿರ್ಪಂ ॥

ಹಿಂದಿನ ಉದಾಹರಣೆಗಳಲ್ಲಿ ಗದ್ಯಕ್ಕೆ ಪದ್ಯ ಪೂರಕವಾಗಿದ್ದರೆ ಇಲ್ಲಿ ಪದ್ಯಕ್ಕೆ (ವ್ಯಾಕರಣ ದೃಷ್ಟಿಯಿಂದ) ಗದ್ಯಪೂರಕವಾಗಿದೆ, ಅರ್ಥಪೂರ್ತಿಗೆ ಕಾರಣವಾಗಿದೆ. A good simile is the sun-shine of wisdom—ಒಳ್ಳೆಯ ಉಪಮಾಲಂಕಾರವು ವಿವೇಕ ಸೂರ್ಯ ಪ್ರಕಾಶವೇ ಸರಿ, ಎಂಬ ಮಾತಿಲ್ಲಿ ನೆನಪಾಗುತ್ತದೆ. ಕವಿ ಕೊಟ್ಟ ಉಪಮಾ ಮಾಲಿಕೆ ಪುಷ್ಪಮಾಲಿಕೆಯಂತೆ ಸುಂದರವಾಗಿದೆ, ಅರ್ಥಪ್ರಭಾವಯುಕ್ತವಾಗಿದೆ, ಶ್ರುತಿದುಷ್ಟ, ಅರ್ಥದುಷ್ಟ, ಕಲ್ಪನಾದುಷ್ಟ ಮತ್ತು ಶ್ರುತಿಕಷ್ಟ ಎಂಬ ಯಾವ ದೋಷಕ್ಕೂ ಎಡೆಗೊಡದೆ, ದೇಶ-ಕಾಲ-ಕಲಾ-ಲೋಕ-ನ್ಯಾಯ ಆಗಮಗಳಾವುದಕ್ಕೂ ವಿರೋಧ ಬರಲು ಅವಕಾಶ ಕೊಡದೆ ರಸ-ಭಾವಾನುಗುಣವಾಗಿ ಓಜಸ್ಸು, ಪ್ರಸಾದ, ಮಾಧುರ್ಯಗಳನ್ನು ಅಳವಡಿಸಿಕೊಂಡು ಹೋಗುವ ತಿರುಮಲಾರ್ಯನ ಗದ್ಯಗತಿ ಸರ್ವಾಕರ್ಷಣೀಯವಾಗಿದೆ. ಈತನ ಗದ್ಯದಲ್ಲಿ ಬಾಣನಂಥ ಬಾಣಸಂತಾನ ಸದೃಶ ಸಮಸ್ತ ಪದಗಳಾಗಲಿ, ಷಡಕ್ಷರಿಯ ಶೈಲಿಯ ಪದ್ಯದಲ್ಲಿ ಅಲ್ಲಲ್ಲಿ ಕಂಡುಬರುವಂಥ ಅತ್ಯನುಪ್ರಾಸಪ್ರಿಯತೆಯಾಗಲಿ ಕಂಡು ಬರುವುದಿಲ್ಲ. ಈತನ ಗದ್ಯಶೈಲಿಯು ಪಂಪನ ಮಾತಿನಲ್ಲಿ ಹೇಳುವುದಾದರೆ 'ಹಿತಮಿತ ಮೃದು ವಚನಂ, ಲಲಿತ ಮಧುರ ಸುಂದರ ವೇಷಂ' ಎನ್ನಬೇಕು.

ಒಳ್ಳೆಯ ಕಾವ್ಯವೆಂದರೆ, the refined gold was imperishable thought wronght up in richest lace of words–ಅತಿನುಣುಪಾದ ಪದಸೂತ್ರಗಳಿಂದ ಸಮೆದು ಬಟ್ಟೆಯಲ್ಲಿಟ್ಟ ಅವ್ಯಯ ಭಾವರೂಪದ ಮಿರುಗು ಬಂಗಾರ ಎಂಬಂತೆ ತಿರುಮಲಾರ್ಯನ ಗದ್ಯದ ಪದವಿನ್ಯಾಸಪದ್ಧತಿ. ಅದು ತನ್ನ ವಕ್ರೋಕ್ತಿಗಳ ವೈಭವದಿಂದ ನಡೆವ ರೀತಿಗೆ ಮತ್ತೊಂದು ಉದಾಹರಣೆಯನ್ನು ಎತ್ತಿಕೊಳ್ಳೋಣ:

'ಮತ್ತಮಚಲ ನಾಗಿಯುಂ ಅಕಠಿನ ಸ್ವಭಾವನುಂ,
ರತ್ನಾಕರನಾಗಿಯುಂ ಜಾಡ್ಯರಹಿತನುಂ, ಭಾಸ್ವಂತನಾಗಿ
ಯುಂ ಸೌಮ್ಯನುಂ, ಜೈವಾತೃಕನಾಗಿಯುಂ ದೋಷಾನು
ಷಂಗ ರಹಿತನುಂ ಜಿಷ್ಣುವಾಗಿಯುಂ ಬಲೋಲ್ಲಾಸಕನುಂ
ಶುಚಿಯಾಗಿಯುಂ ಶುದ್ಧವರ್ತ್ಮನುಂ, ಸಮವರ್ತಿಯಾಗಿಯುಂ
ಸಂಜೀವಕನುಂ, ಪುಣ್ಯಜನನಾಗಿಯುಂ ವಿಬುಧ
ಸೇವ್ಯನುಂ, ಪ್ರಚೇತನಾಗಿಯುಂ ದಾಕ್ಷಿಣ್ಯನಿರತನುಂ,

ಪವನನಾಗಿಯುಂ ಸುಸ್ಥಿರನುಂ, ರಾಜರಾಜನಾಗಿಯುಂ
ಶಮಣೀಯ ಶ್ರೀಕನುಂ, ಮಹೇಶನಾಗಿಯುಂ ಕ್ರತುಪಾಲನು
ಮೆನಿಸಿರ್ಕುಂ'

ಎಂಬಂತಹ ವರ್ಣನಾ ವೈಖರಿಯನ್ನು ನೋಡಿದರೆ—

'ನಿರಂತರ ರಸೋದ್ಗಾರ ಗರ್ಭಸಂದರ್ಭನಿರ್ಭರಾಃ
ಗಿರಃ ಕವೀನಾಂ ಜೀವಂತಿ ನ ಕಥಾ ಮಾತ್ರಮಾಶ್ರಿತಾಃ'

ಎಂಬ ಮಾತೂ Art is expression ಎಂಬ ನುಡಿಯೂ ಸರ್ವದಾ ಸತ್ಯವೆನಿಸಂತ್ತವೆ.

ಈತನ ಗದ್ಯಬಂಧದ ಮುಖ್ಯ ಲಕ್ಷಣವೆಂಬುದು ಅದರ ಸರಳತೆ ಮತ್ತು ಚಮತ್ಕೃತಿಗಳಲ್ಲಿದೆ. 'ರಸೇ ಸಾರಃ ಚಮತ್ಕಾರಃ' ಎಂಬುದು ಹೇಗೆ ಪದೇಪದೇ ನೆನಪಿಗೆ ಬರುತ್ತದೆ ಎಂಬುದನ್ನು ವಸಂತಕನ ಸಂವಾದವನ್ನು ಪರಾಂಬರಿಸಿದರೆ ಸ್ಪಷ್ಟವಾಗುತ್ತದೆ. ಈ ಸಂವಾದದಲ್ಲಿಯ ಚಾತುರ್ಯ ಮಾಧುರ್ಯಗಳನ್ನೂ ಪದಸಂಯೋಜನೆಯ ಪದಪನ್ನೂ ದೇಸಿಯ ಸಾಸವನ್ನೂ ಬಿಮುಪಿನ ಬೆಡಗನ್ನೂ ತದ್ಭವದ ಮುದ್ದಾಪವನ್ನೂ ಸಿಂಗರದ ರಂಗನ್ನೂ ನುಡಿಯ ಹೊನಲ್ನಡೆಯನ್ನೂ ಮೆಚ್ಚದ ರಸಿಕನುಂಟೇ? ಇಂಥ ವಚನರಚನಾ ವೈದಗ್ಧ್ಯವನ್ನು ಕಂಡೇ ಸತ್ಕಾವ್ಯವು "The music of thought canveyed in the music of language" ಭಾವಸಂಗೀತವನ್ನು ಭಾಷಾಸಂಗೀತದಲ್ಲಿ ಹೇಳುವ ಕಲಾಕೃತಿಯೆಂದು ತಿಳಿದವರು ಹೇಳಿರಬೇಕೆನಿಸುತ್ತದೆ. ತಿರುಮಲಾರ್ಯನ ಗದ್ಯ ನಿಜವಾಗಿಯೂ ಹೃದ್ಯ. ಇಂಥ ಗದ್ಯಗಳ ಪರಿಚಯುವನ್ನು ಮೊದಲು ಮಾಡಿಕೊಳ್ಳುವುದು ಉಪಯೋಗನ್ಮುಖರಾದ ಹೊಸಗನ್ನಡ ಗದ್ಯಕಾರರಿಗೆ ಬಹಳ ಪ್ರಯೋಜನಕರ. ಆದರಿಂದ ಅವರಿಗೆ ಕನ್ನಡ ನುಡಿಯ ನುಣುಪು, ಜಾಣು, ಇಂಪು, ಸೊಂಪುಗಳು ಚೆನ್ನಾಗಿ ಅವಗತವಾಗುತ್ತವೆ. ಪದದರಿದ್ರತೆಯಿಂದ ಕನ್ನಡ ಬರವಗಳಲ್ಲಿ ಆಂಗ್ಲಪದಗಳನ್ನು ನಿವಾರ್ಯವಾಗಿ ಬಳಸುವ ದುಷ್ಪ್ರವೃತ್ತಿಗೆ ಎಡೆಯುಂಟಾಗದು.

ಕತೆ

'ಕತೆ' ಹೀಗಿರಬೇಕು, ಹಾಗಿರಬೇಕು ಎಂದು ಆಂಗ್ಲ ವಿಮರ್ಶಾ ಸಾಹಿತ್ಯದಿಂದ ಕದ್ದು ಅನೇಕರು ಅನೇಕ ಲೇಖನಗಳನ್ನು ಬರೆದಿರಬಹುದು, ಬರೆಯುತ್ತಿರಬಹುದು; ಬರೆದದ್ದನ್ನು ಅನೇಕರು ಓದಿರಬಹುದು, ಪಾಠ ಹೇಳಿರಬಹುದು. ಇಷ್ಟೆಲ್ಲ ಆದರೂ ಕಡೆಯಲ್ಲಿ ಸಾತ್ವಿಕ ವಿಮರ್ಶಕನು "ತತಃ ಕಿಂ, ತತಃ ಕಿಂ, ತತಃ ಕಿಂ, ತತಃ ಕಿಂ?" ಎಂದು ಕೇಳಬೇಕಾಗಿದೆ. ಏಕೆಂದರೆ, ಉಪದೇಶದಲ್ಲಿ ಸುಲಭವಾದದ್ದು ಆಚರಣೆಯಲ್ಲಿ ಸುಲಭವಾಗಿರಬೇಕೆಂದು ಎಲ್ಲಿ ನಿಯಮವಿದೆ? ಅಲ್ಲದೆ, "ಎಂಜಿನಿಯರ್" ಹಾಕಿಕೊಟ್ಟ "ಪ್ಲಾನಿ"ನಂತೆ ಮನೆ ಕಟ್ಟಬಹುದಾದ ಮಾತ್ರಕ್ಕೆ ವಿಮರ್ಶಕ ಹೇಳಿದ ನಿಯಮಗಳನ್ನು ಮೇಲ್ಪಂಕ್ತಿಯಾಗಿಟ್ಟುಕೊಂಬಷ್ಟರಿಂದ ಕಥಾದಿ ಸಾಹಿತ್ಯವನ್ನು ತಯಾರಿಸಲು ಬರುವುದೆಂದು ನಂಬುವವರಂ ಸಾಹಿತ್ಯವೆಂಬ ಶಬ್ದವನ್ನು ಉಚ್ಚರಿಸಲು ಕೂಡ ಅರ್ಹರಲ್ಲ. ಇಂದು ಕನ್ನಡ ಸಾಹಿತ್ಯ ರಾಶಿಯಲ್ಲಿ ಕಥೆಗಳ ಕಂತೆಗೇನಂ ಕಡಿಮೆ ಇಲ್ಲ; ಆದರೆ ಅವುಗಳಲ್ಲಿ ಬಹುಸಂಖ್ಯಾತ ಕೃತಿಗಳು ಹೆತ್ತವರಿಗೆ ಮಾತ್ರ ಮುದ್ದಾದ ಹೆಗ್ಗಣಗಳಾಗಿವೆ.

"ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಂ । ನ ಹಿ ವಂಧ್ಯಾವಿಜಾನಾತಿ ಗುರ್ವಿಂ ಪ್ರಸವವೇದನಾಂ, ಪ್ರಸವವೇದನೆಯನ್ನು ಬಂಜೆ ಹೇಗೆ ತಿಳಿಯಲಶಕ್ತಳೋ ಹಾಗೇ ವಿದ್ವಾಂಸನ ಪರಿಶ್ರಮವನ್ನು ವಿದ್ವಾಂಸನಲ್ಲದೆ ಪಾಮರನು ಅರಿಯಲಾರನು" ಎಂಬುದನ್ನು ಎಷ್ಟು ಸಲ ಹೇಳಿದರೂ ಕಡಿಮೆಯೇ. ಆಡಿದರೆ ನಿಷ್ಠುರವೆನಿಸಬಹುದಾದರೂ ಆಡದೆ ಗತ್ಯಂತರವಿಲ್ಲ. ನಮ್ಮ ಪ್ರಸಿದ್ಧ ಲೇಖಕರಲ್ಲೇ ಹಲವರು ಕಿರಿಯರನ್ನು ತಪ್ಪು ಮಾರ್ಗಕ್ಕೆಳೆಯುತ್ತಿದ್ದಾರೆ. ಪ್ರೋತ್ಸಾಹ ಕೊಡುವ ನೆಪವೊಡ್ಡಿ ಅವರಿಂದ ಪಡೆಯಬಹುದಾದ ಸ್ತುತಿಗೆ ಬಾಯಿನೀರು ಬಿಟ್ಟು, ಗುಣದೋಷ ವಿಮರ್ಶೆ ಮಾಡದೆ, ಅವರನ್ನು ಸನ್ಮಾರ್ಗಕ್ಕೆ ಹಚ್ಚದೆ, ತಂಮ ತೋರಿಸಿದ್ದೆಲ್ಲ 'ಪರವಾಯಿಲ್ಲ' ಎಂದು ಹಿರಿಯರು ತಲೆ ಅಲ್ಲಾಡಿಸಿದ್ದರಿಂದಲೇ ಇಂದು ಶ್ರೀಮಾನ್ ಶ್ರೀರಂಗರು ಮೊನ್ನೆ ಕಾಸರಗೋಡಿನ ಸಾಹಿತ್ಯಗೋಷ್ಠಿಯಲ್ಲಿ ಹೇಳಿದಂತೆ ಓದುವವರಿಗಿಂತ ಕಥೆಕವನಾದಿಗಳನ್ನು ಬರೆಯುವವರೇ ಹೆಚ್ಚೆಂಬಷ್ಟಾಗಿ ಹೋಗಿದೆ. ಒಬ್ಬೊಬ್ಬ ವೃತ್ತಪತ್ರ ಸಂಪಾದಕರ ದಫ್ತರವನ್ನು ಎತ್ತಿದರೆ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಿಂದ ವಕೀಲ ವೈದ್ಯಾದಿ ನಾನಾ ವರ್ಜೆಯಂ ವಿದ್ಯೆ, ಬುದ್ಧಿ, ಸಂಸ್ಕಾರ ನ್ಯೂನತೆಯುಳ್ಳ ಲೇಖಕ ಮಹಾಶಯರ ಸುವರ್ಣಾಕ್ಷರ ಲಿಖಿತ ಕಥೆ ಮತ್ತು ಕವನಗಳ ಸಂತೆಯನ್ನು ಕಾಣ

ಬಹುದು. ಇಂಥವರು ತಮ್ಮ ಲೇಖನ ಅಚ್ಚಾದರೆ ಮಾತ್ರ ಓದುವವರಲ್ಲದೆ ಸಾಹಿತ್ಯಾಭ್ಯಾಸವನ್ನು ಎಂದೂ ಮಾಡರು; ಒಮ್ಮೆ ಮುಟ್ಟಿಹೋದರೆ ಅದು ಏನಾದರೂ ಕಳವುಮಾಡಲೆಂದು ಮಾತ್ರ. ಇಂಥ ದುಃಸ್ಥಿತಿಯಲ್ಲಿ ಸಂಪಾದಕ ವರ್ಗದವರೂ ಜನರ ಅಜ್ಞಾನವನ್ನೂ ಲೇಖಕರ ಲೇಖಕಂ ಮನ್ಯತೆಯನ್ನೂ ದುರುಪಯೋಗಪಡಿಸಿಕೊಂಡು ಅನೇಕ ವೇಳೆ ಲೇಖಕ ವಾಚಕರ ಅಭಿರುಚಿಯನ್ನು ದುರ್ಮಾರ್ಗಕ್ಕೆ ಒಯ್ಯಲು ನೆರವಾಗಿ ತಮ್ಮ ಅಜ್ಞಾನಜನ್ಯ ಶೌರ್ಯವನ್ನು ಬೆಳಸಿ ಕೊಂಡು ಜೀವನ ನಿರ್ವಹಣ ಮಾಡುತ್ತಿರುವುದೂ ಸಾಹಿತ್ಯದ ಕೊಲೆಗೆ ಕಾರಣವೆನಿಸಿದೆ.

ಕಲೆಗೆ ಸ್ಫೂರ್ತಿಯೇ ತಂದೆ, ಅಭ್ಯಾಸವೇ ತಾಯಿ. ಸ್ಫೂರ್ತಿಗೆ ಆತ್ಮದ ಅಂತಃಸತ್ವವೇ ಆಕರ. ಹೀಗಿರುವುದರಿಂದ ಕೇವಲ ತರ್ಕಶುದ್ಧ ನಿಯಮಗಳ ಪಾಲನೆಯಿಂದ ಕಥಾದಿ ಸಾಹಿತ್ಯ ಪ್ರಪಂಚದಲ್ಲಿ ಯೋಗ್ಯವಾದ ಕೃತಿ ಹುಟ್ಟದು. 'ನಾನೃಷಿಃ ಕುರುತೇ ಕಾವ್ಯಂ' ಎಂಬುದನ್ನು ನೂರು ಸಲ ಹೇಳಿದರೂ ಸಾಲದು. ಎಲ್ಲ ಕಲಾಕೃತಿಗಳ ಅನುಶೀಲನದಿಂದ ಲಭಿಸುವ ಆನಂದಕ್ಕೂ ರಸವೆಂದೇ ಕರೆಯು ಲಾಗುತ್ತದೆ. ಅಂತಹ ಆನಂದಕ್ಕೆ ರಮ್ಯತೆಯೇ ಕಾರಣ; ರಮ್ಯತೆಗೆ ಅದ್ಭುತ ಆಧಾರ, 'ರಸೇ ಸಾರಶ್ಚಮತ್ಕಾರಃ' ಎಂಬ ವಾಕ್ಯ ಇದೇ ಮಾತನ್ನು ವಿವರಿಸು ತ್ತದೆ. ಎಲ್ಲ ಭಾವ, ಎಲ್ಲ ರಸದಲ್ಲೂ ಕೆಲವಂಶ ಲೋಕಸೀಮಾತಿವರ್ತಿತ್ವವಿರು ತ್ತದೆ. ಈ ಲೋಕೋತ್ತರತೆ ಇಲ್ಲವೆ ಅತಿ ಲೌಕಿಕತೆ ಅದ್ಭುತದ ಜನಕ; ಅದ್ಭುತ ದಿಂದ ರಮ್ಯತೆ, ರಮ್ಯತೆಯಿಂದ ಆನಂದ (ಪರನಿರ್ವೃತಿ) ಉಂಟಾಗುತ್ತದೆ. ಒಂದು ಕತೆಯು ಎಷ್ಟೇ ಲಕ್ಷಣಬದ್ಧವಿರಲಿ, ದೇಶೋದ್ಧಾರಕ್ಕೆ ಬರೆದುದಿರಲಿ, ಅದರಲ್ಲಿ ಕಥಾತ್ವ (ಎಂದರೆ ರಸವತ್ತೆ) ಇಲ್ಲದಿದ್ದರೆ ಅದು ಸಿಂಗರಿಸಿದ ಹೆಣಕ್ಕೆ ಸಮಾನ.

ಜನತೆಯ ಅನ್ನ. ವಸ್ತ್ರ. ರೋಗ. ದಾರಿದ್ರ್ಯ, ಅಜ್ಞಾನ ಇತ್ಯಾದಿಗಳ ಪ್ರಶ್ನೆಯನ್ನು ಬಿಡಿಸುವ ಕಥೆ ಬೇಕು. ಕವನ ಬೇಕು ಎಂದು ಕೂಗುವುದಿಂದು ಬೇಸರ ಹುಟ್ಟಿಸುವಷ್ಟಾಗಿದೆ. ಏಕೆಂದರೆ ಹೀಗೆ ಕೂಗುವವರಿಗೆ ಸಾಹಿತ್ಯ ಶಬ್ದದ ಅರ್ಥವೇ ಗೊತ್ತಿಲ್ಲ; ಸಾಹಿತ್ಯಕ್ಕೂ ಶಾಸ್ತ್ರಕ್ಕೂ ಭೇದವೇನೆಂಬುದು ತಿಳಿದಿಲ್ಲ; ತರ್ಕಕ್ಕೂ ಕಲೆಗೂ ವ್ಯತ್ಯಾಸವೇನೆಂಬುದು ಅರಿಯರು. ಗಂಜಿಗೆ ಪಾಯಸ ಗಳನ್ನು ಒಟ್ಟಿಗೆ ಕಲಸಿ ಸುರಿಯುವ ಈ ರಸಿಕಾಗ್ರೇಸರ ಚಕ್ರವರ್ತಿಗಳು ದೇಹ ಪೋಷಣೆಗೆ ಅಗತ್ಯವಾದ ವ್ಯವಹಾರ ಶಾಸ್ತ್ರವನ್ನೂ ಕರಣಶುದ್ಧಿಗೆ, ಮಾನಸಿಕ ಆನಂದಕ್ಕೆ ಅಗತ್ಯವಾದ ಸೂಕ್ಷ್ಮ ಕಲಾಕೃತಿಗಳನ್ನೂ ಹಿಂದುಮುಂದಿನಾಲೋಚನೆ

ಯಿಲ್ಲದೆ ತಳಿಕೆಹಾಕಿ ಸಾಹಿತ್ಯವೆಂದರೆ ಸರ್ವರೋಗ ಸಂಜೀವಿನಿಯೆಂದು ದೊಡ್ಡ ಮಾತಾಡಿ ತಮ್ಮ ಸಣ್ಣ ಕೃತಿಗಳಿಂದ ಯುಕ್ತ ವಿಮರ್ಶೆಗೆ ಬಾಹಿರರಾಗಿ ನಿಲ್ಲುವುದಿಂದು ರೂಢಿಯಾಗಿಹೋಗಿದೆ! 'ಬೊಗಳುವ ನಾಯಿ ಕಚ್ಚುವುದಿಲ್ಲ. ಕಚ್ಚುವ ನಾಯಿ ಬೊಗಳುವುದಿಲ್ಲ' ಎಂಬಂತೆ ಈ ಸನ್ಮಾನ್ಯ ಭಾಷಣಕಾರರು ಭಾಷಣದ ಆದರ್ಶವನ್ನಲ್ಲದೆ ಕೃತಿಯ ಆದರ್ಶವನ್ನು ಬರೆಹಗಾರರಿಗೆ ಹಾಕಿಕೊಟ್ಟಿಲ್ಲ.

ಇಬ್ಸನ್, ಟಾಲ್‌ಸ್ಟಾಯ್ ಮೊದಲಾದ ವಿಶ್ವಸಾಹಿತಿಗಳು ತಮ್ಮ ಕಲಾಕೃತಿಗಳಿಂದ ಜನರ ಭಾವನೆಯನ್ನು ಉದ್ರೇಕಿಸಿ, ಕಲಕಿಸಿ, ಪಕ್ವಮಾಡಿ ಅವರ ಜೀವನವನ್ನು, ದೃಷ್ಟಿಯನ್ನು ಬದಲಿಸಿ ಒಂದು ಕ್ರಾಂತಿಯನ್ನೇ ಉಂಟುಮಾಡಿರಬಹುದು. ಆದರೆ ಅಂಥವರು ಅತಿ ವಿರಳ. ಸಾಮಾನ್ಯ ಸಾಹಿತಿಗಳಿಂದ ಸಂತೆಯಲ್ಲಿ ಸಿಗುವಷ್ಟು ಪರಿಮಾಣದಿಂದ ಜೀವನ ಪರಿವರ್ತಕ ಸಾಹಿತ್ಯ ಬೇಕೆಂದು ಅಪೇಕ್ಷಿಸುವುದು ಮೂರ್ಖತನ. ಇನ್ನು ಉತ್ತಮ ಸಾಹಿತ್ಯಗಳಲ್ಲಾದರೂ ಮನಃಪರಿವರ್ತನವು ಒಂದೇ ಪ್ರಮಾಣದಿಂದ, ಒಂದೇ ಕಾಲದಲ್ಲಿ ಇಡೀ ಜನತೆಯ ದೃಷ್ಟಿಯಲ್ಲಿ ಉಂಟಾಗದು. ಸನ್ನಿವೇಶಭೇದ, ಎದುರಿಗಿರುವ ಸಮಸ್ಯಾಭೇದ, ಜನರ ವಿದ್ಯೆ ಸಂಸ್ಕಾರಗಳು ಇವುಗಳ ಮೇಲೂ ಅದು ಅವಲಂಬಿಸಿದೆ.

ಕಥೆಗಳಲ್ಲಿ ಸಣ್ಣಕತೆ ಒಂದು ವಿಶಿಷ್ಟ ಬಗೆಯದು; ಕಾದಂಬರಿಗಳದು ಮತ್ತೊಂದು ಬಗೆ. ಸಾಮಾನ್ಯ ನೀಳ್ಗತೆಗಳಲ್ಲಿಯ ಲಕ್ಷಣಗಳು ಎಲ್ಲ ಬಗೆಯಲ್ಲೂ ಸಾಮಾನ್ಯವಾಗಿ ಇದ್ದೇ ಇರುತ್ತವೆ. ವಸ್ತು, ಸನ್ನಿವೇಶ, ಪಾತ್ರ, ತತ್ವಭಾವ ಇವುಗಳ ಕಥನ ವರ್ಣನಗಳು ಕಥೆಯ ಹೂರಣ. ಈ ಎಲ್ಲವೂ ಇದ್ದರೂ ಒಂದೊಂದು ಬಗೆಯ ಕಥೆಯಲ್ಲಿ ಇವುಗಳಲ್ಲಿ ಒಂದೊಂದು ಪ್ರಧಾನವಾಗಿರಬಹುದು, ಎದ್ದುಕಾಣುವಂತಿರಬಹುದು.

ಅತ್ಯಂತ ಸರಳವಾದುದು ವಸ್ತುಪ್ರಧಾನ ಕಥೆ; ಆ ಮೇಲೆ ಸನ್ನಿವೇಶ ಪ್ರಧಾನವಾದುದು. ಇಂತಹ ಕಥೆಗಳಲ್ಲಿ ಪಂಡಿತರಿಂದ 'ತುಚ್ಛ'ವೆಂದು ಕರೆಯಲ್ಪಡುವ ಪತ್ತೆದಾರಿ ಕಥೆಗಳು ಬಹು ಮುಖ್ಯವಾದುವು. ಕನ್ನಡದಲ್ಲಿ ಮೂಲ ಮತ್ತು ಭಾಷಾಂತರಿತವಾದ ಅನೇಕ ಪತ್ತೇದಾರಿ ಕಥೆಗಳಿವೆ. ಆದರೆ ಉಳಿದೆಲ್ಲ ಸಾಹಿತ್ಯ ವಿಭಾಗಗಳಲ್ಲಿರುವಂತೆ ಇಲ್ಲಾದರೂ ಭಷಾಂತರಿತ ಕಥೆಗಳೇ ಹೆಚ್ಚು ಚೆನ್ನಾಗಿರುವಂಥವು, ಅದ್ಭುತರಮ್ಯವೆನಿಸಿ ಚಿತ್ತಾಕರ್ಷಕವೆನಿಸುವುವು ಸಿಕ್ಕುತ್ತವೆ. ಮನುಷ್ಯನು ಮಾತು ಕಲಿತಂದಿನಿಂದ ಅತ್ಯಂತ ಸರಳವಾಗಿ ನಡೆದುಬಂದಿರುವ ಈ ಕಥನ ಕಲೆಗೆ ಭಯ ಅದ್ಭುತಾದಿಗಳ ನಿರೂಪಣಕ್ಕೆ ಅವರದೇ ಆದ ಒಂದು ಸ್ಥಾನವಿದೆ. ಇಂದಿನ, ಹಿಂದಿನ ಇಲ್ಲವೆ ಮುಂದಿನ ಕನಸುಗಳನ್ನು ಎಲ್ಲ ಸಾಹಿತ್ಯ

ದಲ್ಲಿಯಂತೆ ಇಲ್ಲಾದರೂ ಚಿತ್ರಿಸಬಹುದು. Romance—ಶೃಂಗಾರವಿದ್ದರೆ ಇದರ ಬಣ್ಣ ಏಂಗಡಿಸುತ್ತದೆ. ಏಕೆಂದರೆ, None but the brave deserve the fair—ಸಾಹಸಿಗಳಾದ ಶೂರರಲ್ಲದೆ ಇನ್ನಾರೂ ಸುಂದರಿಯರನ್ನು ವರಿಸುವ ಯೋಗಲರ್ಹರಲ್ಲ. ಸಾಹಿತ್ಯದಲ್ಲಿ ಮುಗ್ಧಮನಸ್ಕರನ್ನು ಪ್ರವೇಶಿಸಲು ಇದೇ ಪ್ರಥಮ ಮಾರ್ಗ. ಭಯಂಕರ, ಅದ್ಭುತ, ಚಮತ್ಕಾರ, ಸುಕುಮಾರಾಂತ ವಸ್ತು ಇಲ್ಲವೆ ಸನ್ನಿವೇಶ ಇಲ್ಲಿಯ ಜೀವಾಳ.

ಪಾತ್ರಪ್ರಧಾನ ಕಥೆಗಳಿಗೆ ಬಂಕಿಮರ ಕಾದಂಬರಿಗಳನ್ನೋದಬಹುದು: ಶರತ್ ಬಾಬುಗಳ ಕಥೆ ಕಾದಂಬರಿಗಳನ್ನು ನೋಡಬಹುದು. ಪ್ರಧಾನ ಅಪ್ರಧಾನ ಪಾತ್ರಗಳಲ್ಲಿ ಪ್ರತಿಯೊಂದರಲ್ಲೂ ವೈಲಕ್ಷಣ್ಯ, ವೈಶಿಷ್ಟ್ಯಗಳಿದ್ದೇ ಇರುತ್ತವೆ; ಸಮಸ್ಯಾತ್ಮಕ ನಡತೆ, ಸಂಶಯಾತ್ಮಕ ಭಾವ ಇವುಗಳಿಂದ ಅದ್ಭುತವಾಗಿ ಓದುಗರ ಪ್ರತೀಕ್ಷೆ ಕುತೂಹಲಗಳು ಕೆರಳುತ್ತವೆ. ನಾಯಕ ನಾಯಿಕೆಯರ ಉದ್ದೇಶ ಕೇವಲ ಶೃಂಗಾರ, ಸಾಹಸ, ದೇಶೋದ್ಧಾರ ಯಾವುದಾದರೊಂದಿರಬಹುದು. ಅಂತ್ಯವು ಸುಕುಮಾರ ಇಲ್ಲವೆ ಅವಿದ್ಧವಿರಬಹುದು. ಸಾಮಾಜಿಕ ಕಥೆ ಕಾದಂಬರಿಗಳಲ್ಲಿ ಈ ಪಾತ್ರಪೋಷಣೆಯು ರಸಾವಹತ್ವವನ್ನು ಚೆನ್ನಾಗಿ ಕಾಣಬಹುದು. ಪಾತ್ರಗಳ ದ್ವಿಮುಖೀಭೂತ ಬುದ್ಧಿಯ ದ್ವಂದ್ವ ಘರ್ಷಣ, ಒಲೆತಗಳಿಂದ ರಸಿಕರ ಹೃದಯವನ್ನು ಮಥಿಸಲಾಗುತ್ತದೆ. ಇಂಥ ಕಥೆ ಕಾದಂಬರಿಗಳಲ್ಲಿ ದೇಶೋದ್ಧಾರ, ಸಮಾಜೋದ್ಧಾರಗಳನ್ನು ಸಾಧಿಸಲು ಬಹಳ ಅವಕಾಶವಿದೆ. ಏಕೆಂದರೆ, ಸದ್ಯದ ಸಮಾಜ ಜೀವನದ ಒಂದು ಮಾದರಿಯನ್ನೇ ವಸ್ತುವಾಗಿ ಇಲ್ಲಿ ತೆಗೆದುಕೊಳ್ಳಲಾಗುವುದರಿಂದ ಕಥಾಂತ್ಯದಲ್ಲಿ ಒಂದು ಸಾಮಾಜಿಕ ಸಮಸ್ಯೆಯನ್ನು ಹಾಗೇ ಇಡುವುದು ಇಲ್ಲವೆ ಅದರ ಉತ್ತರವನ್ನು ಕೊಡುವುದು ಈ ಎರಡು ಕ್ರಮಗಳಿರುತ್ತವೆ. 'ದುರ್ಗೇಶ ನಂದಿನಿ'ಯಲ್ಲಿ ಪಾತ್ರ ವೈಚಿತ್ರ್ಯವನ್ನೂ 'ಆನಂದ ಮಠ'ದಲ್ಲಿ ದೇಶೋದ್ಧಾರದ ಸಾಹಸವನ್ನೂ ಕಾಣಬಹುದು. 'ವಂಗಿಪ ಯುದ್ಧ' ಮುಂತಾದ ಇಂದಿನ ಕಾದಂಬರಿಗಳಲ್ಲಿ ವಸ್ತುಸ್ಥಿತಿಯ ಯಥಾವತ್ತಾದ ಚಿತ್ರಣವಿದ್ದು, ಲೌಕಿಕರಿಗೆ ಜೀವನ ಸಂಗ್ರಾಮದಲ್ಲಿ ಪರರ ಸುಖದುಃಖ, ಕಷ್ಟನಷ್ಟ, ತೊಂದರೆ ತಾಪತ್ರಯಗಳ ಪರಿಚಯ ಮಾಡಿಕೊಡಲಾಗುವುದು: ಅದರಿಂದ ಅವರಿಗೆ ವಿವೇಕೋದಯವುಂಟಾಗಬಹುದು: ಅದರಿಂದ ಪರಿಸ್ಥಿತಿಯ ಪರಿಜ್ಞಾನ ಅಳವಟ್ಟು ಕರ್ತವ್ಯ ಚಿಂತನ ಪರರನ್ನಾಗಿ ಮಾಡಬಹುದು. ಈ ಕಾಂತಾಸಮ್ಮಿತಿಯ ಉಪದೇಶವು ಪರಿಣಾಮಕಾರಿಯಾದುದೆಂಬಲ್ಲಿ ಸಂದೇಹವಿಲ್ಲ—ಮುಗ್ಧಾಂತಃಕರಣದಲ್ಲಿ ಸಂಪೂರ್ಣ ಫಲಕಾರಿಯಾದರೂ ಅದು ವ್ಯವಹಾರಕುಶಲರನ್ನು ಮುಟ್ಟದು.

ವ್ಯಾಪಾರಿ ಬುದ್ಧಿಯವರು ಹಳೆಯಕಾಲದ ಅತ್ತೆಯರು ತಾವು ತಂತಮ್ಮ ಅತ್ತೆಯರಿಂದ ಹೊಂದಿದ ಕಷ್ಟಗಳಿಂದ ಬುದ್ಧಿಗಲಿಯದೆ (ಅಂತಃಕರಣ ಕದಡಿ, ತಮ್ಮ ಸೊಸೆಯನ್ನು ಸರಿಯಾಗಿ ನೋಡಿಕೊಳ್ಳಬಯಸದೆ) ಪ್ರತೀಕಾರ ಮನೋಭಾವದಿಂದ ಅದೇ ತರಹದ ಚಿತ್ರಹಿಂಸೆಯನ್ನು ಕೊಡುವಂತೆ ಕಥೆಯಲ್ಲಿದ್ದುದು ಕಥೆಯಲ್ಲಿ ಮಾತ್ರವೆಂದು ಗಣಿಸಿ, ಅಲ್ಲಿ ಕೊಟ್ಟ ಯಾವ ಸೂತ್ರ ವಾಕ್ಯ ಸದ್ಬೋಧವನ್ನೂ ಲೆಕ್ಕಿಸರು, ಆಚರಣೆಗೆ ತರಲೊಲ್ಲರು. ಇಂಥ ಬುದ್ಧಿಯವರೇ ಹಣವಂತರಲ್ಲಿ ಹೆಚ್ಚಾಗಿರುವುದರಿಂದ ಸಾಮಾನ್ಯ ಸಾಹಿತ್ಯ ಕಲೆಗಳಿಂದ ಇವರ ಗುಣವನ್ನು ಪರಿವರ್ತಿಸಲು ಅಸಾಧ್ಯವಾಗಿರುವುದು.

ತತ್ವಪ್ರಧಾನವಾದ ನೀಳ್ಗತೆಗಳಲ್ಲಿ ವಿಚಾರವಾಹಿನಿಯು ರಸವಾಗಿ ಹರಿಯುತ್ತದೆ; ಹೃದಯದಲ್ಲಿ ಹೊಕ್ಕು ಮಿದುಳಿನಲ್ಲಿ ಮೂಡಿ ಬುದ್ಧಿಯನ್ನು ಕೆಣಕುತ್ತದೆ—ತನ್ಮೂಲಕ ಹೃದಯವನ್ನು ಪ್ರಚೋದಿಸುತ್ತದೆ. ಇದು ಅತ್ಯಂತ ಕಷ್ಟವಾದ ಕಲೆ. ಪ್ರಚಾರಾತ್ಮಕ, ವೈರಾಗ್ಯ ವೇದಾಂತದ ರಗಳೆಯೆಂದು ಹಳಬರಿಂಥವನ್ನು ತಿರಸ್ಕರಿಸಬಹುದಾದುದರಿಂದ ಗ್ರಂಥಕರ್ತನು ಬಹು ಜಾಣ್ಮೆಯನ್ನು ವೆಚ್ಚಮಾಡಿ ಕಲ್ಪನಾಚಿತ್ರವನ್ನು ಸತ್ಯಾಭಾಸರೂಪಕ್ಕೆ ತರಬೇಕು. ಅನೇಕ ಸಾಮಾಜಿಕ ಸಮಸ್ಯೆ, ಧಾರ್ಮಿಕ ಪ್ರಶ್ನೆ, ಸಾಂಸಾರಿಕ ಒಗಟು, ಚಿತ್ತಚಾಂಚಲ್ಯ. ವ್ಯಕ್ತಿಗಳ ಸ್ವಭಾವ ಶೌರ್ಯ ಇತ್ಯಾದಿಗಳನ್ನು ಮನೋವಿಶ್ಲೇಷಣಾತ್ಮಕವಾಗಿ ತರ್ಕರಸಚಮತ್ಕಾರಗಳಿಂದ ಚಿತ್ರಿಸಲಿಲ್ಲಿ ಅವಕಾಶವಿದೆ. ಸಮಾಜದ ಪ್ರಾಮಾಣಿಕ ಬುದ್ಧಿವಂತರ ಮೇಲೆ ನಿಜವಾಗಿಯೂ ಇಂತಹ ಕಥೆ ಕಾದಂಬರಿಗಳು ಸತ್ಪರಿಣಾಮವನ್ನುಂಟುಮಾಡಿ, ಅವರ ಜೀವನದ ಗುರಿಯನ್ನು ತಿದ್ದಿ, ಆ ಪ್ರಕಾರ ಕಾರ್ಯಪ್ರವೃತ್ತರನ್ನಾಗಿ ಮಾಡಬಲ್ಲುದಾಗಿದೆ. 'ವಿಶ್ವಾಮಿತ್ರ ಸೃಷ್ಟಿ,' 'ಕಾರಣಪುರುಷ' ಇಂಥವುಗಳಲ್ಲಿ ಈ ತತ್ವಪ್ರಧಾನತೆಯನ್ನು ಕಾಣಬಹುದು. 'ಎರಡು ಧ್ರುವ' ಮತ್ತೊಂದು ಉದಾಹರಣೆ; 'ಗಂಡು ಹೆಣ್ಣಿನ ಸಮಸ್ಯೆ' ಇನ್ನೊಂದು.

ಭಾವಪ್ರಧಾನವಾದುದು ಮೃದುಗತೆ; ಶೃಂಗಾರ ಕರುಣಾದಿ ರಸಸ್ಯಂದಿ Melodramatic: ವಿಭಾವನಾದ್ಯಲಂಕಾರ ವಿಶಿಷ್ಟವಾದುದು. ಕಥನಕವನಗಳು ಇದಕ್ಕೆ ತಕ್ಕ ರೂಪ ಕೊಡಬಲ್ಲವು. ಪಾರಿಜಾತದ ನಯ ಇಲ್ಲಿದೆ. ಬಾಹ್ಯ ಸೃಷ್ಟಿ ಮನೋಮಾರ್ದವಗಳ ವಿವರಪೂರ್ಣ ವರ್ಣನೆ ಇದರಲ್ಲಿ ಬರುತ್ತದೆ. ನಾಟಕೀಯತೆ ಇಲ್ಲಿ ಹೆಚ್ಚು. ರಸಾವೇಶ ತೀವ್ರ ಅಥವಾ ಮಂದಗತಿಯಲ್ಲಿರಬಹುದು. ಇದೂ ಒಂದು ಕರ್ತೃಕೌಶಲನಿಕಷವಾದ ಕಲೆಯೇ. ಸ್ವಭಾವಸೂಕ್ಷ್ಮತೆ ಸಂಸ್ಕಾರ ಗೌರವಗಳುಳ್ಳ ಪಾತ್ರಗಳನ್ನು ಇಲ್ಲಿ ಕಾಣಬಹುದು. ಇಲ್ಲಿಯು

ನಾಯಕರು ಸಾಮಾನ್ಯ ಧೀರಲಲಿತರೂ ಧೀರಶಾಂತರೂ ಇರುತ್ತಾರೆ; ನಾಯಿಕೆಯರು ಶಕುಂತಲೆಯಂಥವರು: ಪ್ರಸಂಗ ಕರುಣ ಇಲ್ಲವೆ 'ಸರಸ.' ಈ ಮಾದರಿ ಸಂಸ್ಕಾರಸಂಪನ್ನರನ್ನು ಸತ್ಪ್ರವೃತ್ತಿಯಲ್ಲಿ ಮುನ್ನಡೆಸಬಲ್ಲುದು; ಲೋಕೋತ್ತರ ಸಾತ್ವಿಕತೆಗೊಯ್ದು ಮುಟ್ಟಿಸಬಹುದು. 'ದಿ' ರವೀಂದ್ರರ ಕಥೆಗಳಲ್ಲಿ ಕೆಲವು ಈ ಮಾದರಿಯಲ್ಲಿವೆ.

ವಸ್ತು, ಸನ್ನಿವೇಶ, ಪಾತ್ರ, ತತ್ವ, ಭಾವಗಳ ವಿವರಣ ಇಲ್ಲವೆ ಕಥನ ವರ್ಣನಾ ಕ್ರಮದಲ್ಲಿ ಅಸ್ಪಷ್ಟಾರ್ಥ, ಅಸಂತ್ಯ, ಅಸಹಜತೆ, ಸ್ಥೂಲತೆಗಳು ತಲೆದೋರಿದರೆ ಬರೆಹಗಾರ ಕೃತಕೃತ್ಯನೆನಿಸನು. ಇಡೀ ಕತೆಯೇ ಕೃತಕವೆನಿಸಿ, ನೀರಸ, ರಸಾಭಾಸ, ರಸಭಂಗ, ಉದ್ದೇಶ ಹಾನಿಗಳನ್ನುಂಟುಮಾಡಬಹುದು. ಇದಕ್ಕೆ 'ಸಾಹಿತ್ಯರತ್ನ' ಒಂದು ನಿದರ್ಶನ. ಕೇವಲ ನಾಡಿಗರ ಅಶನವಸನ ಅಜ್ಞಾನ ರೋಗಗಳ ಪಟ್ಟಿಯನ್ನೂ ದಂಡ ಹಿಡಿದ ವಸಿಷ್ಠನಂತೆ ಕಥಾನಾಯಕನು ಅಗವುಳನ್ನು ಪರಿಹಾರ ಮಾಡುವ ಲೀಲೆಯನ್ನೂ ಕೊಡುವುದು ವಿಸಂಗತವೆನಿಸಿ ಹಾಸ್ಯಾಸ್ಪದವಾಗುವುದು. ಸಾಹಸಕಥನ ಅವಾಸ್ತವವಾದರೆ "ಸ್ಟಂಟ್ ಪಿಕ್ಚರ್" ಎನ್ನಿಸಿ ಕತೆ ಕಲೆಗೆಡುವುದು. ಕನ್ನಡದ ಇಂದಿನ ಸ್ವತಂತ್ರ ಕಥೆಗಳಲ್ಲಿ ಇನ್ನೂ ಸಾಕಷ್ಟು ಪರಿಪಾಕ ಕಾಣುವುದಿಲ್ಲ: ಲೇಖಕರ ಹೃದಯ ಭಾವತುಂಬಿ, ಅನುಭವ ಗ್ರಾಹಿ, ಸಂಸ್ಕಾರಶಾಲಿ ಆಗಲು ಇನ್ನೂ ಕಾಲ ಹಿಡಿಯಬಹುದು. ಆಗ, ಅದಾದ ಮೇಲೆ ಮಾತ್ರ ನಾವು ಅವರಿಂದ ವಿಶ್ವಸಾಹಿತ್ಯದ ಮಾಲೆಗೆ ಸೇರಿಸಲರ್ಹವೆನಿಸುವ ಕಥಾದಿ ಕಲಾಕೃತಿಗಳನ್ನು ನಿರೀಕ್ಷಿಸಬಹುದು. ಅಲ್ಲಿಯ ವರೆಗೆ ಕನ್ನಡಿಗರು ತಾಳ್ಮೆಯಿಂದಿರಬೇಕು. ಮಹಾತ್ಮ ಗಾಂಧಿ, ನೇತಾಜಿ ಸುಭಾಷ್‌ಚಂದ್ರ ಬೋಸ್, ಅರವಿಂದ ಘೋಷ್, ಶಿವಾಜಿ, ಲೋಕಮಾನ್ಯ ಗಂಗಾಧರ ತಿಲಕ್, ನೆಹರು, ಸರದಾರ್, ತಾರಾಸಿಂಗರಂತಹ ವೀರರನ್ನು ಚೆನ್ನಾಗಿ ಅರ್ಥಮಾಡಿ ಅರಗಿಸಿಕೊಂಡ ಸಂಸ್ಕಾರ ಸಂಪನ್ನ ಲೇಖಕರಿಗೆ ದೇಶೋದ್ಧಾರಕ ಸಾಹಿತ್ಯ ರಚನೆಯಲ್ಲಿ ಒಳ್ಳೆಯ ಭವಿಷ್ಯವಿದೆ. ಅಂಥವರು ಬೆಳಕಿಗೆ ಬರುವರೆ? ಕನ್ನಡ ಕಥಾ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನ ಬಂದೀತೇ? ಇಲ್ಲವೆ 'ಕಾಲೋಹ್ಯಯಂ ನಿರವಧಿಃ' ಎಂದು ರಸಿಕರು ಕೈಕಟ್ಟಿ ಕುಳ್ಳಿರಬೇಕೇ?

ಹರಟೆ

"ಯೋಗ್ಯವಾದ ವಸ್ತುವಿಲ್ಲದಾಗ ಹರಟೆ ಆರಂಭವಾಗುತ್ತದೆ; ಹರಟೆಯು ತನ್ನ ಬೇಟೆ ಸಾಯುವ ತನಕ ತಡೆಯದೆ, ಮೊದಲೇ ಅದನ್ನು ನುಂಗಿ ಬಿಡುವ ಮಾಂಸಾಹಾರಿ ಮೃಗ—ಹರಟುವುದೂ ಸುಳ್ಳು ಹೇಳುವುದೂ ಅವಳಿ – ಜವಳಿ ಅಕ್ಕತಂಗಿಯರು" ಎಂಬ ಮಾತುಗಳು ಎಲ್ಲರಿಗೂ ಸುಪರಿಚಿತ.

ಅಷ್ಟೇನೂ ಯೋಗ್ಯವೆನ್ನಿಸದ ವಿಷಯ ಹರಟೆಯದು – ಎಂಬ ಅಭಿಪ್ರಾಯವು ಹರಟೆಯ ಒಂದು ಲಕ್ಷಣವನ್ನು ಹೇಳುತ್ತದೆ. ಯಾವುದಕ್ಕೆ ಯೋಗ್ಯವಲ್ಲದ್ದು ? ಮಾತಾಡಲು ಕುಳಿತವರ ಸ್ಥಾನಮಾನಗಳಿಗೆ, ವ್ಯಕ್ತಿತ್ವಕ್ಕೆ, ಚಾರಿತ್ರ್ಯಕ್ಕೆ ಅಥವಾ ಕುಳಿತಂಥ ದೇಶ – ಕಾಲ – ಸಂದರ್ಭಗಳಿಗೆ ! ಆದರೆ ಅನೌಚಿತ್ಯಕ್ಕಿಂತ ಹೆಚ್ಚಿನ ರಸಭಂಗಕಾರಣವಿನ್ನೊಂದಿಲ್ಲವೆಂಬ ವಿಮರ್ಶ ನೀತಿಯಿದೆ. ಇದಕ್ಕೇನೆನ್ನಬೇಕು ?

ಹಾಸ್ಯವು ನವರಸಗಳಲ್ಲಿ ಬಹಳ ವಿಲಕ್ಷಣವಾದುದು. "ಅನೌಚಿತ್ಯವು ಹಾಸ್ಯದ ಆತ್ಮ" ಎಂಬ ಒಂದು ಹೇಳಿಕೆಯಿದೆ. ಆದರೆ 'ಅಯುಕ್ತ', 'ಅಯೋಗ್ಯ' 'ಅನುಚಿತ' ಎಂದು ಯಾವುದನ್ನಾದರೂ ಸರ್ವ ಸಂದರ್ಭಗಳಲ್ಲೂ ಹೇಳಲು ಸಾಧ್ಯವೇ ? ಸಾಧ್ಯವಿಲ್ಲ, ಸಂದರ್ಭವಶಾತ್ ಗುಣವು ದೋಷವಾದೀತು, ದೋಷವು ಗುಣವೆನಿಸೀತು, ಹೀಗೆ ಹರಟೆಯಲ್ಲೊಂದು ಖಾಸಗಿತನವಿದೆ, ಶ್ರಾವಕ – ವಾಚಕ ವರ್ಗಗಳ ಹೆಚ್ಚಿನ ಪರಿಚಯಜನ್ಯವಾದ ಕ್ಷಮಾಗುಣವನ್ನು ಗೃಹೀತವೆಂದಿಟ್ಟುಕೊಂಡು ಮುನ್ನಡೆಯುವ ಮನಃಪ್ರಣಾಳಿ ಅಡಗಿದೆ. ಇದು ಹಾಸ್ಯ - ಹರಟೆಗಳಿಗೆ ಸಾಧಾರಣ. ಆದರಿಂದಲೋ ಏನೋ ಹರಟೆ ಅನೇಕ ಸಂದರ್ಭಗಳಲ್ಲಿ ತಿಳಿಹಾಸ್ಯದ ಶೈಲಿಯಲ್ಲೇ ಸಾಗುತ್ತದೆ.

ಆದರೆ ಹರಟೆಯ ಸ್ಥಾಯಿಭಾವ ಯಾವಾಗಲೂ ಹಾಸ್ಯವೇ ಆಗಿರುತ್ತದೆ ಎಂಬ ನಿಯಮವಿಲ್ಲ; ಅದರ ಸ್ವರೂಪ ಗದ್ಯವೇ ಆಗಿರಬೇಕೆಂದೂ ಯಾರೂ ಸರ್ವಾಧಿಕಾರೋಕ್ತಿಯನ್ನಾಡಲಾರರು. ಗದ್ಯವನ್ನು ಹರಟೆಗನ್ವಯಿಸುವುದು ರೂಢಿ. ಹರಟೆಯ ಲಘುತ್ವವಿರುವುದು ಅದರ Non-chalance (ಅನುದ್ರೇಕ, ಅಕ್ಷೋಭ ಅಥವಾ) ಅಲಕ್ಷ್ಯ ಭಾವದಲ್ಲಿ. ಯಾವುದರ ಬಗ್ಗೆ ಅಲಕ್ಷ್ಯ ? ಮಾತಿನ ವರಸೆಗಳ ವಾಚ್ಯ ಪರಿಣಾಮಕತೆಯ ಬಗ್ಗೆ ಹರಟೆಗಾರ ಹೆಚ್ಚು ಲಕ್ಷ್ಯ ಹಾಕದಿರುವುದು ಸಾಮಾನ್ಯ – ಎಂದು. ಆದರೆ ಗುರಿಯಿಟ್ಟು ಹರಟೆ ಹೊಡೆಯುವ ತಂತ್ರಜ್ಞ ಅಥವಾ ಸಾಹಿತಿ ಏನು ಮಾಡುತ್ತಾನೆ ? ಅಲಕ್ಷ್ಯವನ್ನು ನಟಿಸುತ್ತಾನೆ - ಅಷ್ಟೆ.

ವಾಸ್ತವಿಕ ಜೀವನದ ಎಲ್ಲ ಹರಟೆಗಳಲ್ಲೂ ಸಾಹಿತ್ಯಿಕ ಗುಣವಿದೆಯೆಂದು ಹೇಳಲು ಸಾಧ್ಯವಿಲ್ಲ. ಅವುಗಳಲ್ಲಿ ಹಲವು ಗ್ರಾಮ್ಯ (Unliterary) ವಾಗಿರುತ್ತವೆ. ಸಾಹಿತ್ಯವೆಂದಾದರೂ ಜೀವನದ "ನೊಣಪ್ರತಿ" ಎನ್ನಿಸೀತೇ? ಹಾಗೆ ನೊಣಪ್ರತಿಗಳೆನ್ನಿಸುವ ಹರಟೆಗಳನ್ನು ಹರಟೆ, ನಾಟ್ಯಚ್ಛಟ, ಸಾಮಾಜಿಕ ನಾಟಕಗತವಾದ ಸಂವಾದ, ಭಾಷಣ, ಮುನ್ನುಡಿ, ವಿಮರ್ಶೆ, ಪರಿಚಯ. ನವ್ಯಕಾವ್ಯ ಮುಂತಾದ ಹೆಸರುಗಳಲ್ಲಿ ಹೊರಬಿದ್ದ ಕೆಲ ಹೊತ್ತಿಗೆಗಳಲ್ಲಿಂದು ಕಾಣಬಹುದು. ಪ್ರಸಾದ, ಮಾಧುರ್ಯ, ಓಜಸ್ಸುಗಳಲ್ಲಿ ಒಂದೂ ಇಲ್ಲದ ಬರಹದಲ್ಲಿ ಕಾವ್ಯಗುಣ ವಿನ್ನಾವುದಿರಲು ಸಾಧ್ಯ?

"ಹಳೆ ಹರಟೆಯು ಮನೆತನ ದೊಡ್ಡದು. ರಾಜರ ಸುಖಸಂಕಥಾವಿನೋದದಲ್ಲಿ ಮೊಳೆತು, ಪಂಡಿತರ ಕಾವ್ಯಶಾಸ್ತ್ರವಿನೋದದಲ್ಲಿ ಚಿಗಿತು. ಕವಿಗಳ ಅಕ್ಕರ ಗೊಟ್ಟಿಯಲ್ಲಿ ಬೆಳೆದು ವೇಶ್ಯಾವಾಟದ ವಿಟವಿದೂಷಕರಲ್ಲಿ ಶಾಖೋಪಶಾಖೆಯಾಗಿ, ಚದುರೆಯರ ಮಾತಿನಲ್ಲಿ ಹೂತು, ವಿಲಾಸವಿಲಾಸವಾಗಿ ಅದು ನಾಟ್ಯವಾಡಿದೆ. ಇಂದು ಇನ್ನೊಂದು ಮನ್ವಂತರಕ್ಕೆ ಮೊದಲಾಯಿತು;" ಮತ್ತು "ಸಾಮಾನ್ಯ ಜನರು ಗಂಭೀರ ವಿಷಯಗಳಿಗೆ ಬೇಸರಿಸುವುದರಿಂದಲೂ ಹಾಸ್ಯವು ಎಲ್ಲರಿಗೂ ಬೇಕಾಗುವುದರಿಂದಲೂ ಅಕುಟಿಲ ಹಾಸ್ಯವು ಹಿರಿಯರಿಗೂ ರಂಜಿಸುವುದರಿಂದಲೂ ಕೊಂಕುವೆತ್ತ ಹೊಸನುಡಿಯು ನೇರವಾಗಿ ಎದೆಯನ್ನು ಸೇರುವುದರಿಂದಲೂ ಹರಟೆಯು ಜಡಾನ್ನವಾಗದೆ, ವ್ಯಂಜನಪದಾರ್ಥ ಮಿಶ್ರವಾದ ಅಲ್ಪಾಹಾರದಂತೆ ಸೊಗಸಾಗುವುದರಿಂದಲೂ ದಿನಾಲು ವಿರಾಮ ಕಾಲಕ್ಕೆ ವಿನೋದವಾಗಿ ಏನಾದರೂ ಓದಲು ದೊರೆಯಬೇಕೆಂಬ ಜನರ ಸಂಖ್ಯೆಯು ಬೆಳೆಯುತ್ತಿರುವುದರಿಂದಲೂ ಈ ಸಾಹಿತ್ಯ ಪ್ರಕಾರಕ್ಕೆ ಒಂದು ಕಳೆ ಬರಲಿದೆ. ಹಾಗೆ ಕಲೆಗೆ ಯುಕ್ತವಾದ ಕಳೆಯು ಇದಕ್ಕೂ ಬಂದರೆ ಇದೂ ಉಳಿಯಬಹುದು—ಇಲ್ಲದಿದ್ದರೆ ಅಳಿಯಬಹುದು."

—ದ. ರಾ. ಬೇ.

ಹಾಸ್ಯ ಅವಿನಾಭಾವಿಯಾದ ಹರಟೆಯಲ್ಲಿ ಹಾಸ್ಯಪ್ರಕಾರಗಳೆಷ್ಟಿವೆಯೋ ಅಷ್ಟು ವಿಭಾಗಗಳನ್ನು ಮಾಡಬಹುದು. ಆದರೆ ಹಾಸ್ಯವನ್ನು ರೀತಿಯ ಸಾಧನದಲ್ಲಿಟ್ಟುಕೊಂಡು ರತಿ, ಕ್ರೋಧ, ಭಯ, ಉತ್ಸಾಹ, ಜುಗುಪ್ಸೆ, ಶಮ, ಶೋಕ, ವಿಸ್ಮಯಗಳನ್ನು ಮೂಡಿಸುವ ಚಾತುರ್ಯವುಳ್ಳ ಹರಟೆ, ಪ್ರಬಂಧಗಳು [illegible] ಭೂತವಾದ ಒಂಭತ್ತರಲ್ಲಿ ಎಣಿಸಬಹುದು: ಹಾಸ್ಯವನ್ನು ಮೂಡಿಸುವವು

ಹರಟೆಯು ಒಂಭತ್ತನೆಯ ಮೂಲಭೂತವರ್ಗ. ಅದರ ಕುರಿತಾಗಿಯೇ ಮೇಲೆ ಶ್ರೀ. ದ. ರಾ. ಬೇ. ಅವರ ಮಾತುಗಳನ್ನು ಉದ್ಧರಿಸಿ ಹೇಳಲಾಗಿದೆ."

"ನಾ ಹಗಲ ಬೆಳಕಿನಲ್ಲಿ ಕಾಣುತ್ತಲೇ ಇರಲಿಲ್ಲ. ಹೀಗಾಗಿ ಎಷ್ಟೋ ರಾತ್ರಿ ನನಗೆ ಕುಂಟು ಇಂಜಿನಿಯರಿನ ಸವಿ ನೆನಪು ಮರುಕಳಿಸಿ ಮರುಕಳಿಸಿ ಬರುತ್ತಿತ್ತು."

"ಇನ್ನೆರಡು ವರ್ಷಗಳಾದುವು. ಮೂರನೆಯ ಗಂಡುಮಗನನ್ನು ಹೆತ್ತಾಗ ಇವರು ಕೇಂದ್ರ ಕಾರ್ಮಿಕ ಸಚಿವರ ಆಹ್ವಾನದ ಮೇಲೆ ದಿಲ್ಲಿಗೆ ಹೋಗಿದ್ದರು. ಹಿಂತಿರುಗಿ ಹಾರಿಬಂದು ಮೂರನೆ ಮಗನ ಪುಠಾಣಿಗಲ್ಲದ ಮೇಲಿದ್ದ ಸಣ್ಣ ಗುಳಿಯಲ್ಲಿ ತಮ್ಮ ಬೆರಳ ತುದಿ ಇರಿಸಿ ಆಡಿಸುತ್ತಾ "ಅಚ್ಚಿನಲ್ಲಿ ತೆಗೆದ ಬೆಲ್ಲದ ಅಚ್ಚುಗಳು ಕೂಡ ಈ ಮೂರು ಮಕ್ಕಳ ತರಹ ಅಚ್ಚು ಅಚ್ಚಾಗಿ ಬರುಲ್ಲವಲ್ಲೇ" ಅಂತ ಆದರದ ಹೆಮ್ಮೆಯ ಉದ್ಗಾರ ತೆಗೆದರು. ಈ ಮಕ್ಕಳಿಗೆಲ್ಲಾ ಸರಿಯಾದ ವ್ಯವಸ್ಥೆಯನ್ನು ಈಗಿನಿಂದಲೇ ಅಣಿಮಾಡಬೇಕು ಕಣೆ ಎಂದು ನನ್ನ ಕಡೆ ನೋಡಿ ಹೇಳಿದರು. ಮೂರು ತಿಂಗಳಲ್ಲಿ ಅವತ್ತೇ ಅವರು ನನ್ನ ಮುಖಾನ ಪೂರ್ತಿ ಒಂದು ನಿಮಿಷ ಹಗಲ ಬೆಳಕಲ್ಲಿ ನೋಡಿದ್ದು. ಆ ಮೇಲೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಾರ್ಮಿಕ ಸಂಘದ ಕೆಲಸಕ್ಕೆ ಟೊಂಕಕಟ್ಟಿ ನಿಂತದ್ದು.

*   *   *   *   *

'ಬಯಕೆ ಬಸಿರು ಬಾಣಂತನದ ಈ ಗಲಾಟೆಯಲ್ಲಿ ಸರೋಜನ ಜ್ಞಾಪಕವೇ ಮರೆತುಹೋಗಿತ್ತು.

ಒಂದು ಸಂಜೆ ಬಾಗಿಲು ತಟ್ಟಿ, "ಯಜಮಾನ್ರು ಇದಾರಾ ?" ಅಂತ ಬಾಗಿಲಾಚೆ ಕೂಗು ಕೇಳಿಸಿತು. ಬಾಗಿಲು ತೆಗೆದು ನೋಡ್ತೀನಿ ! ಬಿಳಿ ಸಮವಸ್ತ್ರ ಧರಿಸಿದ್ದ ಜವಾನ. ರಸ್ತೆಯಲ್ಲಿ ಬಾವುಟ ಏರಿಸಿದ್ದ ದೊಡ್ಡ ಮೋಟಾರೊಂದು ನಿಂತಿದೆ, ಅದರಲ್ಲಿ ಯಾರೋ ಹೆಂಗಸರು ಕೂತಿದ್ದಾರೆ. "ಯಜಮಾನ್ರು ಇಲ್ಲಪ್ಪಾ ! ಯಾರು ಬಂದಿದ್ರು ಅಂತ ಹೇಳಲಿ ಅವರು ಬಂದ ಮೇಲೆ ?" ಎಂದೆ.

ಮೋಟಾರಿನಿಂದ ಒಳಗಿದ್ದಾಕೆ ಇಳಿದುಬಂದಳು. ಧಸ ಧಸ ಓಡಿಬಂದಳು. "ನಿನ್ನ ಧ್ವನಿ ಗುರುತು ಹಿಡಿದು ಬಂದೆ ಕಣೆ. ವಿಶಾಲು ! ಇಲ್ಲಿದ್ದೀಯೇನೇ ! ಎಷ್ಟು ದಿವಸ ಆಯಿತೇ ನಿನ್ನ ನೋಡಿ !" ಎಂದು ಏದುಸಿರು ಬಿಡುತ್ತಾ ಆ ದುಡುಮಿ ಹೇಳಿದಳು.

ಅವಳ ತೋಳು ಹಿಡಿದು ಅವಳನ್ನು ಕುಲುಕಿ "ಸರೋಜನೇನೇ ನೀನು?" "ಎಷ್ಟು ತಿಂಗಳೇ ಈಗ ?" ಎಂದೆ.

"ತಿಂಗಳೂ ಇಲ್ಲ, ಮಂಗಳೂ ಇಲ್ಲ. ಬಂಜೆ ಬೆಳೆದು ಇರೋದೇ ಹಾಗೆ" ಅಂದಳು ಸರೋಜ. "ಇದೇನೇ ಜಾವ್ರಟದ ಮೋಟಾರು! ನಿಮ್ಮ ಯಜಮಾನರು ಮಂತ್ರಿಗಳಾದರೇನೇ?" ಎಂದೆ. "ಅವರು ಹೇಗೆ ಮಂತ್ರಿಗಳಾದಾರು, ಮಾತೇ ಬರುಲ್ಲ. ನಾನೇ ಮಂತ್ರಿಣಿ ಕಣೆ" ಎಂದಳು ಸರೋಜ.

"ಮತ್ತೆ ನಮ್ಮನೇಗೆ.....ನೀನು.....ಯಾಕೆ ಬಂದೆ. ನಾನಿರೋದೂ ತಿಳಿಯುದು ನಿನಗೆ" ಎಂದು ತಡವರಿಸುತ್ತಾ ಹೇಳಿದೆ.

"ನಿಮ್ಮ ಯಜಮಾನ್ರನ್ನ ನೋಡುಕ್ಕೆ ಅಂತ ಬಂದೆ. ಒಳಗೆ ಹೋಗೋಣ ಬಾ. ಅಲ್ಲಿ ಹೇಳ್ತೀನಿ" ಅಂತ ಅವಳೇ ನನ್ನನ್ನು ನನ್ನ ಮನೆಯೊಳಕ್ಕೆ ಕರೆದು ಕೊಂಡು ಹೋದಳು. ಅಲ್ಲಿ ಕೂತುಕೊಂಡು, ನನ್ನ ಮೂರನೇ ಪುಟ್ಟಾಣಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಆಡಿಸುತ್ತಾ ಹೇಳಿದಳು.

"ಉತ್ಸಾಹಿ ಯುವಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು, ಎಂದು ದಿಲ್ಲಿಯಿಂದ ಸಲಹೆ ಬಂದಿದೆ. ನಿಮ್ಮ ಯಜಮಾನರನ್ನು ನಮ್ಮ ಮುಖ್ಯಮಂತ್ರಿ ಗಳು ಮೆಚ್ಚಿಕೊಂಡಿದ್ದಾರೆ. ನಮ್ಮ ಜತೆ ಸೇರಿಕೊಳ್ಳುತ್ತಾರೆಯೋ ಅಂತ ಕೇಳುಕ್ಕೆ ಬಂದಿದ್ದೀನಿ ಕಣೆ. ನಿನ್ನ ಗಂಡ ಅಂತ ಈಗ ತಿಳಿದ ಮೇಲೆ ಒತ್ತಾಯ ಪಡಿಸ್ತೀನಿ ಕಣೆ. ಮುಂದಕ್ಕೆ ಅವರು ಮುಖ್ಯಮಂತ್ರಿಗಳಾಗೋ ಅವಕಾಶ ಇದೆ ಕಣೆ" ಎಂದು ಸರೋಜ ಹೇಳಿದಳು.

"ಇವರೇನಾದ್ರೂ ಮಂತ್ರಿಯಾಗುಕ್ಕೆ ಒಪ್ಪಿಕೊಂಡರೆ, ಆ ಮೇಲೆ ನಾವು ಸಚಿವ ಗೃಹಗಳಲ್ಲೇ ಇರಬೇಕು ಅಲ್ಲವೇನೆ" ಎಂದೆ.

"ಹ್ಞೂ ಕಣೆ, ಎಲ್ಲಾ ಸೌಕರ್ಯಗಳೂ ಇವೆ" ಅಂದಳು ಸರೋಜ.

"ಇರಬಹುದು, ಆದರೆ ಪ್ರಸವಕ್ಕೆ ಅನುಕೂಲಗಳಿವೆಯೇನೆ! ಆ ಪ್ರಶ್ನೇನ ನಿನ್ನ ಹತ್ತಿರ ಕೇಳಿದರೆ ಏನು ಪ್ರಯೋಜನ" ಅಂದೆ.

"ಅಯ್ಯೋ! ಅದಕ್ಯಾಕೆ ಹೆದರತಿ. ಅವಳಿ ಮಕ್ಕಳನ್ನೂ ಬೇಕಾದರೆ ಹೆರು. ನಾನೆಲ್ಲ ಅಣಿಯಾಗಿ ನೋಡಿಕೋತೀನಿ" ಅಂದಳು ಸರೋಜ.

"ನಿನ್ನ ಗಂಡನಿಗೆ ಹೇಳಿ ಒಪ್ಪಿಸು. ತಿರುಗಿ ನಾವೆಲ್ಲಾ ಬಂದು ಮಾತಾಡ್ತೀವಿ" ಅಂತ ಹೇಳಿ ಸರೋಜ ಹೊರಟುಹೋದಳು.

* * * * *

"ಹಳಗಿದ ಮನೆ, ಇಲ್ಲೇ ಇದ್ದು ಎಲ್ಲಾ ಮುಗಿಸಿಕೊಂಡು ಬಾಣಂತನಕ್ಕೆ ಸಚಿವ ಗೃಹಕ್ಕೆ ಹೋಗಲಿ? ಅಥವಾ ಈಗಲೇ ಹೋಗಿ ಅಲ್ಲೇ ಎಲ್ಲವನ್ನೂ ಮಾಡಿಕೊಳ್ಳಲೇ

ಈಗ ನಾನೇನ್ಮಾಡಲಿ ಮಾವಯ್ಯ ಅಂತ ನನ್ನ ವಿಶಾಲು ಕೇಳಿದಳು. ಆ ದಿನವೇ ಸೊರಬದಿಂದ ಅವಳ ಮನೆಗೆ ಬಂದಿದ್ದೆ.

ಈ ವಿಷಯವೆಲ್ಲಾ ನನಗೇನು ತಿಳಿಯೋದಂ? ಜೇಗ ಬೇಗ ಬಸುರಾಗಿ ಹೆರುಕ್ಕೆ ಸಜಿವಗೃಹಕ್ಕೆ ಹೋಗೋದು ತಪ್ಪಲ್ಲ ಎಂದು ಹೇಳಿದೆ."

ಹಾಸ್ಯದ ಮೂಲಕವಾಗಿ ಕರುಣವನ್ನು ಪ್ರಚೋದಿಸುವ ಕಠಿನ ಕರ್ಮವನ್ನು ಷೇಕ್ಸ್‌ಪಿಯರನು "ಕಿಂಗ್‌ಲಿಯರ್" ಎಂಬ ಅವಿದ್ಧ ಪ್ರಯೋಗದಲ್ಲಿ ಯಶಸ್ವಿಯಾಗಿ ಮಾಡಿತೋರಿಸಿದ್ದಾನೆ. ಜೀವನದ ಎಷ್ಟೋ ಸಂವಾದಗಳಲ್ಲಿ ಅಂಥ ದುಃಖವ್ಯಂಜಕ ಹಾಸ್ಯೋಕ್ತಿಗಳ ರಸನಿಮಿಷಗಳನ್ನು ನಾವು ಅನುಭವಿಸ ಬಲ್ಲೆವು.

ಹಾಸ್ಯವು ಶೃಂಗಾರಕ್ಕೆ ಮಿತ್ರರಸ ಎಂದಿರುವಲ್ಲಿ "ನಗೆಯು ಪ್ರೇಮಪ್ರವೇಶಕ್ಕಾಗಿ ಎದೆ ತೆರೆದುಕೊಡುತ್ತದೆ" ಎಂಬ ಮೆರಿಡಿತ್ ಮಹಾಶಯನ ಮಾತು ಸ್ಮರಣೀಯ. ಹೀಗೇ ಚಾಟು – ಕಟು – ಚತುರೋಕ್ತಿಗಳಿಂದ ಕೂಡಿದ ಕಥನ - ವರ್ಣನ - ವಿವರಣ - ವಿವೇಚನಾಂಶಗಳನ್ನೊಳಗೊಂಡ, ವಾಚ್ಯ–ಲಕ್ಷ್ಯ–ವ್ಯಂಗ್ಯಗಳೆಂಬ ಶಕ್ತಿತ್ರಯದಲ್ಲಿ ಒಂದರ ಮೂಲಕ ಲಘುತ್ವದ ಅಥವಾ ಶಿಥಿಲತ್ವದ (ಹರಟೆಗಾರನ) ದೃಷ್ಟಿಕೋನವನ್ನು ಬಿಂಬಿಸುವ ಗದ್ಯದ ಅಥವಾ ಪದ್ಯದ ರೂಪವುಳ್ಳ ಪ್ರಬಂಧವೇ ಲಘುಪ್ರಬಂಧ ಅಥವಾ ಹರಟೆ. ಆದುದರಿಂದ ಹರಟೆಯ ಅವಚ್ಛೇದಕ (Differential) ಇರುವುದು ನಿಜವಾದ ಅಥವಾ ತೋರಿಕೆಯ ಲಘುತ್ವದ ಮನಃಪ್ರಣಾಲಿಯ ಪ್ರದರ್ಶನದಲ್ಲಿ. ಹರಟೆಯು ಅತಿ ಘನೋಕ್ತಿಗಳ ಅಥವಾ ಅತಿ ಹುಲುನುಡಿಗಳ ಮೂಲಕ ಉಕ್ತ (ಗ್ರಂಥಕರ್ತೃಗತ) ಲಘುಮನೋಧರ್ಮಾಂಶವನ್ನು ಪ್ರಕಟಿಸುತ್ತದೆ. ಆ ಧರ್ಮಾಂಶವೊಂದು ಸಂಚಾರಿಭಾವ. ಅದು ಪ್ರಬಂಧದ ಆದಿ–ಮಧ್ಯ–ಅಂತ್ಯಗಳ ಉದ್ದಕ್ಕೂ ಹಿನ್ನೆಲೆಯಾಗಿರುತ್ತದೆ; ಅದೊಂದು ಹರಟೆಗಾರಿಕೆಯ Assumed or Real ಕೃತಕ ಅಥವಾ ನಿಜವಾದ ಮನೋಭೂಮಿಕೆ ಎಂಬುದು ಪ್ರತಿಯೊಬ್ಬ (ಹರಟೆಯ) ಓದುಗನಿಗೂ ಗೊತ್ತಾಗುವಂತಿರುತ್ತದೆ. ಆದರೆ ಆ ಲಘುತ್ವದ ಪ್ರವೃತ್ತಿಯ ದೆಸೆಯಿಂದ ಹರಟೆಯಲ್ಲಿ ಗ್ರಾಮ್ಯತ್ವ ಬರಬಾರದು; ಅದರ ಆಭಾಸ ಒಮ್ಮೆ ಬಂದರೆ ಕ್ಷಮ್ಯ. ಗ್ರಾಮ್ಯತ್ವವು ಅರಸಿಕತೆ, ಅಸಾಹಿತ್ಯಿಕತೆ (unliterariness), ಅಸಭ್ಯತೆ (Indecency)—ಸಾಹಿತ್ಯಿಕವಾದ ಅಸಭ್ಯತೆ. ಅದರ ನಿರ್ಣಯವು ವಕ್ತೃ–ಶ್ರೋತೃಗಳ ಸಾಹಿತ್ಯ–ಸಂಸ್ಕಾರದ ಮಟ್ಟವನ್ನು ಅವಲಂಬಿಸಿರುತ್ತದೆ. ಏಕೆಂದರೆ ಒಬ್ಬರಿಗೆ ಉದ್ವೇಗ

ಜನಕವಾದುದು ಇನ್ನೊಬ್ಬರಿಗೆ ಯಾವಾಗಲೂ ಉದ್ವೇಗಜನಕವಾದೀತೆಂದು ಹೇಳಲು ಸಾಧ್ಯವಿಲ್ಲ.

ಕೆಲವೊಮ್ಮೆ ಹರಟೆಗಿರುವ Nonsense ವ್ಯರ್ಥಾಲಾಪಕ್ಕಿರುವಂತಹ ಅಸಾಂಗತ್ಯದ ಹೊದಿಕೆ. ಅದರ ಹೂರಣ (Content) ಎಂದೂ ಅಸಂಗತವಲ್ಲ; ಒಮ್ಮೆ ಹೂರಣ ಅಸಾಂಗತ್ಯಮಿಶ್ರವಾಗಿದ್ದರೂ ತಾತ್ಪರ್ಯ ಅಸಂಗತವಾಗಿರದು. ಅತ್ಯುತ್ತಮವಾದ ಹರಟೆಯ ಶೈಲಿ ಅಥವಾ ರೂಪರೇಖೆ (Form) ಅತಿಶಿಥಿಲ. ಹೂರಣ ಅತಿಶ್ಲಿಷ್ಟ. Seriocomic (1) ಪ್ರಚ್ಛನ್ನಗಂಭೀರತಾತ್ಪರ್ಯ ಮತ್ತು ಪ್ರಕಟವಾದ ಲಘೂಕ್ತಿಗಳು ಬಂದಿರುವುದೊಂದು: (2) ಪ್ರಕಟಗಂಭೀರಪದಬಂಧ ಮತ್ತು ಪ್ರಚ್ಛನ್ನ ಲಘು ತಾತ್ಪರ್ಯ ಬಂದಿರುವುದಿನ್ನೊಂದು—ಹೀಗೆ ಅದರ ಶೈಲಿ ಇಬ್ಬಗೆಯದಾಗಿರಬಲ್ಲದು. ಇಂಗ್ಲೀಷ್ ಸಾಹಿತ್ಯದಲ್ಲಿರುವ "ಗಲಿವರ್ಸ್ ಟ್ರಾವಲ್ಸ್", ಡಾನ್‌ಕ್ವಿಕ್ಸೋಟನ ಸಾಹಸ ಕತೆಗಳು ಮುಂತಾದವು ಗಂಭೀರ ತಾತ್ಪರ್ಯವುಳ್ಳ ಲಘುಪ್ರಬಂಧದ ಜಾತಿಗೆ ಸೇರಿದಂಥವೆಂದು ಒಂದು ದೃಷ್ಟಿಯಿಂದ ಸ್ಥೂಲವಾಗಿ ಹೇಳಬಹುದು. ಮೇಲಿನ ಎರಡು ವಿಭಜನೆಗಳನ್ನು ನಿಂದಾವ್ಯಾಜದಿಂದ ಮಾಡುವ ಸ್ತುತಿಗೂ ಸ್ತುತಿವ್ಯಾಜದಿಂದ ಮಾಡುವ ನಿಂದೆಗೂ ಹೋಲಿಸಬಹುದು. ಗಂಭೀರ ಪದಬಂಧವೂ ಲಘು ತಾತ್ಪರ್ಯವೂ ಉಳ್ಳ ಹರಟೆಯ ಕ್ರಮ ಆಂಗ್ಲ ಗ್ರಂಥವಾದ "ಪಿಕ್‌ವಿಕ್ ಪೇಪರ್ಸ್"ನಲ್ಲಿ ಬಂದಿದೆ ಎನ್ನಬಹುದು. ಈ ಸಂದರ್ಭದಲ್ಲಿ ಚಾಟೂಕ್ತಿಗಳಿಗವಕಾಶ ಹೆಚ್ಚು.

ಮತ್ತೆ ಕೆಲವೊಮ್ಮೆ ಹರಟೆಯು ಕಟೂಕ್ತಿ ನಿಬದ್ಧವಾಗಿರಬಹುದು. ಇಲ್ಲಿ ವಿಪರೀತ ಲಕ್ಷಣೆಯುಳ್ಳ ವಿಡಂಬನೆ (Satire) ಹೆಚ್ಚು: ಗೇಲಿ. ಲೇವಡಿ. ಕುಚೇಷ್ಟೆಗಾರಿಕೆಗಳು ಕಡಿಮೆ - ತಾತ್ಪರ್ಯದ ಗಾಂಭೀರ್ಯ ಉಗ್ರ. ಇವರದು ಪುಚ್ಛದಲ್ಲಿ ವಿಷವುಳ್ಳ ಹಾಸ್ಯವಾಗಲೂ ಬಹುದು. ಇದರ ಬಿಂಕ ಇವರದೇ ಸರಿ.

ಈ ಉಭಯಸಂದರ್ಭದ ಹರಟೆಗಳಲ್ಲಿ "ವಕ್ರೋಕ್ತಿಯ ರೀತಿ. ಸುಭಾಷಿತಗಳ ಚಮತ್ಕಾರ, ಅನ್ಯೋಕ್ತಿಯ ಬೆಡಗು. ಕಿರಿಮಾತು - ಕುಸುರಿಮಾತು - ಶ್ಲೇಷೋಕ್ತಿ - ವ್ಯಾಜೋಕ್ತಿ ಮೊದಲಾದ ಉಕ್ತಿಪ್ರಕಾರಗಳು. ಹಾಸ್ಯದಲ್ಲಿದ್ದ ಉಪಮೆ - ರೂಪಕಾದಿಗಳು. ಮಾತಿನ ಜಾಣರ ಮುಂಗಾಲುಪುಟಿಕೆಯ ಮಾತು. ಮರಿಕಥೆಯವರ ಅಡ್ಡಕಥೆ. ಅಡ್ಡಮಾತು, ಅಡ್ಡನಗೆ" ಇವೆಲ್ಲವೂ ಬಂದದ್ದುಂಟು. ಕೊಂಕು-ಅಂಕುಗಳು ಬರಬಹುದು; ಆದರೆ ಕೊಳಕು ಮಾತು ಬರಬಾರದು. ಹರಟೆ ಯಾವಾಗಲೂ ಹುಡುಗಾಟಿಕೆಯದಲ್ಲ. ಹುಡುಗಾಟದ ಹರಟೆಯು ಕೇವಲ ಭಾವಾತ್ಮಕವಾದುದಾದರೆ ಹುರುಳುಳ್ಳ ಹರಟೆಯು ಭಾವೋತ್ತರ ತತ್ತ್ವಜ್ಞಾನಿಯುಳ್ಳದ್ದು.

ಮೇಲಿನ ವಿಶ್ಲೇಷ - ವಿವರಣೆಗಳಿಂದ ಹರಟೆ ಮತ್ತು ಹಾಸ್ಯ ಲೇಖನಗಳ ಭೇದವು ಸಾಮಾನ್ಯರ ತಿಳುವಳಿಕೆಯಂತೆ ಅನಿರ್ದಿಷ್ಟವಾಗಿರುವುದು ಸ್ಪಷ್ಟವಾಗುತ್ತದೆ. ಹಾಸ್ಯ - ಪ್ರಧಾನವಾದ ಹರಟೆಯೇ ಹರಟೆಯೆಂಬ ಸಾಮಾನ್ಯ ತಿಳಿವಳಿಕೆಯ ಪಾಕ್ಷಿಕ ಸತ್ಯವನ್ನು ಈ ದೃಷ್ಟಿಕೋನವು ಆಧರಿಸಿರುವುದು ಕಂಡು ಬರುತ್ತದೆ. ಅದರಿಂದಲೇ ಬಹುಶಃ ಇಂದಿನ ಅನೇಕ ಮಿಶ್ರಶ್ರಾವಕರು (Mixed audience) ಹರಟೆಯ ರೂಪದ ಭಾಷಣವನ್ನು ಹೆಚ್ಚಾಗಿ ಮೆಚ್ಚುತ್ತಾರೆ. ಸಂಪೂರ್ಣ ಸೈನಿಕ ಶಿಸ್ತಿನ ವಿಚಾರ ನಿಯಮಬದ್ಧವಾದ ಉಪನ್ಯಾಸಕ್ಕಿಂತಲೂ ಈ ಬಗೆಯ ಸಂಬಧ್ಧಾ ಸಂಬದ್ಧ ವಿಷಯಗಳ ಮಾನಸ ಶಾಸ್ತ್ರೀಯ ಮಿಶ್ರಣದಿಂದೊಡಗೂಡಿದ ಅಸ್ಫುಟ, ಪರೋಕ್ಷ - ವ್ಯವಸ್ಥೆಯುಳ್ಳ ವಿಚಾರ - ಸಂಗತಿಗಳನ್ನುಳ್ಳ Free Talk ಮುಕ್ತ ಛಂದವು ಸಾಮಾನ್ಯ ಜನರಿಗೆ ಈಗ ಪ್ರಿಯವಾಗುತ್ತ ಹೋಗಿದೆ—ಓದಲು ಅಲ್ಲದಿದ್ದರೂ ಕೇಳಲು; ಅಸಂಬದ್ಧ ಪ್ರಲಾಪವನ್ನು ಮೆಚ್ಚುವವರೂ ಇರಬಹುದು— ಆದರೆ ಅವರು ವಿಮರ್ಶಾಬಾಹಿರರು.

Light Essay ಅಥವಾ ಲಘುಪ್ರಬಂಧ, ಹರಟೆ, ಹಾಸ್ಯಲೇಖನ, ವಿಡಂಬನೆ, ನಗೆಬರಹ, ಚುಟುಕು, ಹಾಸ್ಯದ ಹನಿ, ನಗೆಬುಗ್ಗೆ ಮುಂತಾದ ಹೆಸರುಗಳಲ್ಲಿ ಅಚ್ಚಾದವುಗಳನ್ನು ಮೇಲಿನ ವಿಚಾರದ ಪ್ರಕಾರ ಹರಟೆಯ ವರ್ಗಕ್ಕೆ ಸೇರಿಸಬಹುದು. ಹರಟೆಯೊಮ್ಮೆ Monologue ಏಕಪಾತ್ರದ ಅಂತಶ್ಚಿಂತನದ ಉದ್ಗಾರವಾಗಿರಬಹುದು. ಬಹುಪಾತ್ರಗಳ ಸಂವಾದವಾಗಿಯೂ ಇರಬಹುದು - ಆದರೆ ಆ ಸಂವಾದವು ಕಾರ್ಯ (Action) ಪ್ರಧಾನವಾದ ನಾಟಕದ ಸಂವಾದವಲ್ಲ. (ಕಾರ್ಯಪ್ರಧಾನವಲ್ಲದ ನಾಟಕಾಭಾಸಗಳ ಮಾತು ಬೇರೆ!) ಪುರಂಷತ್ರಯದ ಯಾವ ಭಂಗಿ - ಭಣಿತಿಯಲ್ಲಿ ಬೇಕಾದರೂ ಹರಟಬಹುದು. "ಕರ್ಮವೀರ" ಪತ್ರಿಕೆಯಲ್ಲಿ ಪ್ರತಿವಾರವೂ ಬರುವ "ಓದುಗರೊಡನೆ ಹರಟೆ" ಎಂಬವುಗಳಲ್ಲಿ ಹರಟೆಯ ಅನೇಕ ಮಾದರಿಗಳನ್ನು ಗುರುತಿಸಬಹುದು. ಅವೆಲ್ಲಾ ಶಾಸ್ತ್ರೀಯವಾದ ಹರಟೆಗಳು: ಮೇಲೆ ಹೇಳಿದ ಹಲವಾರು ತರಹಗಳ ಶೈಲಿ - ರೀತಿ - ವೃತಿಗಳ ಶುದ್ಧ - ಮಿಶ್ರ ಉದಾಹರಣೆಗಳನ್ನಲ್ಲಿ ಕಾಣಬಹುದು.

ಹರಟೆಗಳು ಅಥವಾ ಲಘುಪ್ರಬಂಧಗಳು ಭಾರತದ ನವನಾಗರಿಕತೆಯ ನಿರ್ಮಾಣದ ಸಂದರ್ಭದಲ್ಲಿ ಉದ್ಭವಿಸುತ್ತಿರುವ ಹಲವಾರು ಲೋಪದೋಷಗಳನ್ನು ಉದ್ಘಾಟಿಸಿ, ಅವಕ್ಕೆ ತಕ್ಕ ಪರಿಹಾರವನ್ನೂ (ಬೇಕಾದರೆ) ಸೂಚಿಸಿ ಕಾವ್ಯಗುಣವಿಮುಖವಾಗದೆ ನಡೆದರೆ, ಅವು ಸದ್ಯದ ಐತಿಹಾಸಿಕ ಸಂದರ್ಭದಲ್ಲಿ ತಕ್ಕ ಶಿಕ್ಷಣ ಮಾಧ್ಯಮದ ಕಾರ್ಯವನ್ನು ಮಾಡಿದಂತಾಗುವುದು. ಆದರೆ ಓದು

ಗರು ಮಾತ್ರ ಪತ್ತೇದಾರಿ ಕಾದಂಬರಿಯ ಮಟ್ಟದಿಂದ ಮೇಲಕ್ಕೆ ಏರಬೇಕು.
ಇತ್ತೀಚೆಗೆ ಇಲ್ಲಿ ಒಂದು ಪುಸ್ತಕ ಭಂಡಾರಕ್ಕಾಗಿ ಬಂದ ಬೇಡಿಕೆಯಲ್ಲಿ ನೂರು
ರೂಪಾಯಿಗಳ ಬೆಲೆಯ ಪತ್ತೇದಾರಿ ಕಾದಂಬರಿಗಳನ್ನೇ ಕಳಿಸಬೇಕೆಂದಿದ್ದುದು
ನಮ್ಮ ಗ್ರಾಮೀಣ ವಾಚಕರ ಸಂಸ್ಕಾರ ದಾರಿದ್ರ್ಯವನ್ನು ಬೊಟ್ಟುಮಾಡಿ
ತೋರಿಸುತ್ತದೆ. ಕುಲ ಕುಟುಂಬಗಳ ದುರಭಿಮಾನಗಳಿನ್ನೂ ಉಜ್ವಲವಾಗಿ
ಉಳಿದಿರುವ ಹಳ್ಳಿಗಳ ಮನೆತನದವರ ಅರುಚಿ ಬಹಳ ಸಲ ಈ ಮಟ್ಟದಿಂದ
ಮೇಲಕ್ಕೇರಿಲ್ಲ. ಅದನ್ನು ಏರಿಸುವುದು ಪ್ರಾಥಮಿಕ ಹಾಗೂ ಮಾಧ್ಯಮಿಕ
ಶಿಕ್ಷಕರ ಕರ್ತವ್ಯ. ಆ ಪ್ರಕಾರ ಏರ್ಪಡಿಸುವುದು ಗ್ರಾಮ—ಪಟ್ಟಣಗಳಲ್ಲಿಯ
ಮುಖಂಡರ ಪಾಲಿನ ಹೊಣೆ.

ತತ್ತ್ವೋಪದೇಶಕ್ಕಾಗಿ ಹೊರಟ ಮುದ್ದಾಂ ಕೃತಿಗಳಲ್ಲಿ ಇಂದು ಕತೆ,
ಕಾದಂಬರಿ, ಕವಿತೆ, ನಾಟಕಗಳು ಮಾಡಿದಷ್ಟು ಕಾವ್ಯವಿಮುಖತೆಯ ಅಪರಾಧ
ವನ್ನು ಹರಟೆಗಳು ಮಾಡಿಲ್ಲ. ಕಾವ್ಯಗುಣವನ್ನು ಕಡೆಗಣಿಸಿ ಬರೆದ ಪ್ರಚಾರ
ಸಾಹಿತ್ಯವು ತ್ಯಾಜ್ಯ; ಅದು ಕಾವ್ಯ ಸಂಪತ್ತನ್ನೂ ಹೆಚ್ಚಿಸದು, ಪ್ರಚಾರ ಕಾವ್ಯ
ವನ್ನೂ ಸಮರ್ಥವಾಗಿ (ಶುದ್ಧವಾದ ನೇರ ಪ್ರಚಾರಕ್ಕಿಳಿವ ಕೃತಿಗಳಂತೆ) ನೆರವೇರಿ
ಸದು. ಅದರ ಪಾತ್ರಗಳು ತಪ್ಪದೆ ಯಾಂತ್ರಿಕ, ನಿರ್ಜೀವ ಮತ್ತು ಅವೈಶಿಷ್ಟ್ಯ
ಪೂರ್ಣ. ಹರಟೆಯು ಅದಕ್ಕಿಂತ ಕಾವ್ಯಗುಣಸಾಂದ್ರತೆಯಲ್ಲಿ ಹೆಚ್ಚು ನಿರಂಕುಶ
ಎಂದು ಧಾರಾಳವಾಗಿ ಹೇಳಬಹುದು. ಅದರಲ್ಲೂ ಅದು ಗದ್ಯರೂಪದಲ್ಲಿರು
ವಾಗ; ಪ್ರಕಟ ನೀತಿಬೋಧದಲ್ಲಿ ಎಂದಿನಿಂದಲೂ ಕತೆ—ಕವಿತೆಗಳು ಯಶಸ್ವಿ
ಯಾಗಿ ಕಾರ್ಯ ಮಾಡುತ್ತ ಬಂದದ್ದು ಹೆಚ್ಚು. ಅವುಗಳ Didactism ನೀತಿ
ಬೋಧಪರತೆ ಜನರಿಗೆ ಎಂದಿನಿಂದಲೂ ಒಗ್ಗಿದ್ದು. ಆದರೆ ಕೃತಕವೆನ್ನಿಸುವ
ಪಾತ್ರಗಳುಳ್ಳ ಕಾದಂಬರಿ ನಾಟಕಗಳು ಸರ್ವಕಾಲದಲ್ಲಿ ಸರ್ವರಿಗೂ ಜುಗುಪ್ಸಾ
ವಹ. ಹರಟೆಯು ರಚನೆಯಲ್ಲಿ ಸ್ವಾಭಾವಿಕವಾದ ಸ್ವಾತಂತ್ರ್ಯಕ್ಕೆಡೆಯಿರುವುದ
ರಿಂದ ವಿಚಾರಪ್ರಚೋದಕ ಪ್ರಬಂಧದಲ್ಲಿಯ ಶಬ್ದದ ಅಥವಾ ಅರ್ಥದ (ಇಲ್ಲವೆ
ಎರಡರ) ಗಡಚುತನವನ್ನು ತಾರದೆ, ಮನೋರಂಜನೆಯ ಮೂಲಕವಾಗಿಯೇ
ಯಶಸ್ವಿಯಾಗಿ ಸಾಮಾನ್ಯರಲ್ಲಿ ವಿಚಾರ ಪ್ರಚೋದನದ ಪರಿಣಾಮವನ್ನು
ಅಪ್ರತ್ಯಕ್ಷವಾಗಿ ಉಂಟುಮಾಡಿಬಿಡಬಹುದು. ಆದರ್ಶದ ಮಾನದಿಂದ ಮಾತ
ನಾಡಿದರೆ ಉತ್ತಮ ಹರಟೆಯನ್ನು ಬರೆಯುವುದೂ ಅತಿ ಕಷ್ಟ: ಅದರ
ಸೂಕ್ಷ್ಮಾತಿಸೂಕ್ಷ್ಮ ಟೀಕಾಧ್ವನಿಗಳ ಅರ್ಥವನ್ನು ಕೂಲಂಕಷವಾಗಿ ತಿಳಿದುಕೊಳ್ಳ
ಬಲ್ಲ ಸಂಸ್ಕೃತರು ಸಿಗುವುದೂ ದುರ್ಲಭ.

ಈಗ ಹರಟೆಗಳ ಕೆಲ ಉದಾಹರಣೆಗಳನ್ನು ಪ್ರತ್ಯಕ್ಷ ಅವಲೋಕಿಸೋಣ:

(1) ಮಳೆ ಬಂದರೆ ಸಡಗರ: ಬರದಿದ್ದರೆ ದುಃಖ. ಜೋರಾಗಿ ಬಂದರೆ ಕೋಪ: ಮೆತ್ತಗೆ ಬಂದರೆ ತಾಪ. ಕೊಡೆ ಇಲ್ಲದಿದ್ದವರಿಗೆ ಬೇಸರ: ಕೊಡೆ ಇದ್ದವರಿಗೆ ಕಾತರ. ಬಟ್ಟೆ, ಮನೆ, ವಸ್ತುಗಳಿಗೆಲ್ಲ ತೊಂದರೆ; ರಸ್ತೆಗಳು, ಚರಂಡಿಗಳು ಇವುಗಳಿಗೆ ಆನಂದ!

(2) ಪುಟ್ಟಾಚಾರಿಯನ್ನು ನಾನು ನೋಡಿದ್ದೆ. ಎಷ್ಟೋ ಸಾರಿ ಅವನೊಡನೆ ಹರಟೆ ಹೊಡೆದಿದ್ದೆ. ಚಿಕ್ಕವನಾಗಿದ್ದ ನನಗೆ ಅವನ ಹರಟೆಗಳು ರಾಮಾಯಣ ಮಹಾಭಾರತಗಳಂತೆಯೇ ಮನೋಹರವಾಗಿದ್ದವು. ಅವನ ಹರಟೆ ಎಂದರೆ ಕಾಡು ಹರಟೆಗಳಲ್ಲ; ಕಾಡಿನ' ಹರಟೆಗಳು. ನಮ್ಮೂರಿನಲ್ಲಿ ಅವನೊಬ್ಬ ದೊಡ್ಡ ಬೇಟೆಗಾರನಾಗಿದ್ದ. ಅವನದು ಸುರಿತ ಕೈ. ಇಟ್ಟ ಗುರಿ ತಪ್ಪುತ್ತಿರಲಿಲ್ಲ. ಪ್ರಾಣಿ ಎಷ್ಟು ವೇಗವಾಗಿ ಹಳುವಿನ ನಡುನಡುವೆ ಮಿಂಚಿ ಬಂದರೂ ಪುಟ್ಟಾಚಾರಿಯ ಕೋವಿ ಅದರ ಭಾಗಕ್ಕೆ ಸಾವಿನೂರಿನ ಹೆಬ್ಬಾಗಿಲಾಗಿಯೇ ಬಿಡುತ್ತಿತ್ತು.

(3) ಗಣೇಶಚತುರ್ಥಿ ಅಂಬೋದು ನಮ್ಮ ರಾಷ್ಟ್ರೀಯ ಹಬ್ಬ—ಇದು ನಿಮಗೆಲ್ಲರಿಗೂ ಗೊತ್ತೇ ಇದೆ. ಅಂತ ದನಿ ತೆಗೆದರು ನಮ್ಮ ರಾಮಾಶಾಸ್ತ್ರಿಗಳು. ಅದೇನಪಾ ಅಂತ ಕೇಳಿದರೆ ಅವರದ್ದೊಂದು ಭಾಷಣ ಇತ್ತು ಕೊಪ್ಪಳದಲ್ಲಿ. ಜ್ಞಾನ ಹೆಚ್ಚು ಬೆಳೆಯಿರಿ. ಎನ್ನುವುದು ಭಾಷಣದ ವಿಷಯವಾಗಿತ್ತು. ಅದನ್ನು ಕೇಳಿದ ನಮ್ಮ ಆಶ್ರಮದ ಉಪಸಂಪಾದಕ ಮಹಾಶಯನು (ಉಪಸಂಪಾದಕನೆಂದರೆ ಬಹಳ ವಿಷಯಗಳ ಬಗ್ಗೆ ಸ್ವಲ್ಪ ಸ್ವಲ್ಪ ತಿಳಿದವನು ಎಂದು) ಉದ್ಗರಿಸಿದ: "ಅಂದರೆ ಹೆಚ್ಚು ಜ್ಞಾನ ಬೆಳೆಯಿಸೋದು ಪರಿಮಾಣದಂತೆಯೋ ಪ್ರಕಾರದಂತೆಯೋ?" ಎಂದು. 'ಈಗಿನ ಕಾಲದಲ್ಲಿ ಬಹಳ ತಿಳಿದರೆ ಏನೂ ಉಪಯೋಗವಿಲ್ಲ' ಎಂದ ಹಿರೇಮನಿ ಬೂದ್ಯ. 'ಅದೇಂಗಲೇ?' ಅಂತ ಎಲ್ಲರೂ ಕೇಳಿಬಿಟ್ಟರು. 'ಒಂದು ಬಹಳ ಬಟ್ಟೆ ಹೊತ್ತ ಕತ್ತೆ. ಇನ್ನೊಂದು ಸ್ವಲ್ಪ ವಸ್ತ್ರ ಉಟ್ಟ ಸಿನೆಮಾ ನಟಿ ಹೆಚ್ಚು ಕಲಿತವ - ಕಡಿಮೆ ಕಲಿತವ ಅಂದರೆ ಹೀಂಗೆ!' ಎಂದನವ.

(4) ವ್ಯಾಪಾರಿಗಳು ಲಾಭಬಡಿಕರಾಗಿದ್ದರು, ನೌಕರರು ಲಂಚಗುಳಿಗಳಾದರು, ಒಕ್ಕಲಿಗರು, ಹಾಲಿಗರು, ತರಕಾರಿಗರು. ದುಡ್ಡು ಹೀರುವ ತಗಣೆಗಳಾದರು. ಪೋಲೀಸರು ದುಷ್ಕೃತ್ಯಪ್ರೇಕ್ಷಕರಾದರು. ರೈಲಿನವರು ನಿದ್ರಾಮುದ್ರಿತರಾದರು. ಕೂಲಿಕಾರರು ಮುಷ್ಕರಕಾರರಾದರು. ಕಳ್ಳರು ಕುಬೇರರಾದರು. ಸಾತ್ವಿಕರು ಸಾಯದವರೂ ಬದುಕದವರೂ ಆದರು!

(5) ಅಮೇರಿಕದ ಗಂಡಸರಿಗೆ ರಶಿಯದ ಗ್ರಾಮಿಕೋ ಅವರನ್ನು ಕಂಡರೆ ಆಗುವುದಿಲ್ಲವಂತೆ. ಆದರೆ ಹೆಂಗಸರು ಅವರ ಗಂಡುತನವನ್ನು ನೋಡಿ ಮೆಚ್ಚಿಕೊಂಡಿರುವರಂತೆ. ಆದುದರಿಂದ ಅಮೇರಿಕಕ್ಕೆ ನಾಳೆ ಹೆಂಗಸೊಬ್ಬಳು ಅಧ್ಯಕ್ಷೆಯಾದರೆ ಉಭಯ ದೇಶಗಳಲ್ಲಿಯೂ ವೈಷಮ್ಯ ಹೋಗಿ ಸ್ನೇಹ ಬೆಳೆಯಬಹುದು.

(6) ಊರ ಮೇಲಿನ ಸಮಾಚಾರದೊಳಗೆ ನಮ್ಮ ಸ್ವಂತ ಸಮಾಚಾರ ಮುಳುಗಿಯೇ ಹೋಯಿತು. ಆದರೆ ಬಿಸಿಲ ಬೇಗೆಗೆ ಬಳಲಿ ಬೆಂಡಾಗಿ. ಬಾಯರ್ ಬತ್ತಿ ದಗೆ ಸುತ್ತಿ ಬಸವಳಿದ ಸಭೆಯಲ್ಲಿ ನಮ್ಮಲ್ಲಿಯ ಯಾರಿಗೂ ಯಾವ ರಾಜಕಾರಣವೂ ಬೇಡವಾಗಿ ಹೋಯಿತು. ಮೊನ್ನಿನ ಸಭೆ ಸಪ್ಪೆಯ ಸಾಮ್ರಾಜ್ಯವಾಗಿ ಹೋಯಿತು. ಸುಂಟರಗಾಳಿ ಸುಯ್ಯೆಂದು ಸುಳಿಸುಳಿಯುತ್ತ ಬಾರಿಗಾರ ಕಣ್ಮನಗಳಿಗೆ ಧೂಳಿನ ಕದಲಾರತಿಯೆತ್ತುತ್ತಿತ್ತು. ಧೂಳೀಸ್ನಾನ. ಧೂಳೀಪಾನವೂ ಆಯಿತು. "ನೀನು ಧೂಳು, ನಿನಗೆ ಧೂಳೀ ಗತಿ" ಎಂಬ ಮಹಾ ವಾಕ್ಯದ ಅರ್ಥದ ಸವಿ ನಮಗಾಯಿತು.

(7) ಹಳೆಯ ಗಾದೆಗಿಂತ ಹೊಸದಾದ ಹೊಸ ಗಾದೆಯಿಲ್ಲ. ಹೊಸ ನಾಗರಿಕತೆಗಿಂತ ಹಳೆಯದಾದ ನಾಗರಿಕತೆ ಇಲ್ಲ. ನಾಡಾಡಿಗಿಂತ ಹೆಚ್ಚು ಕಾಡಾಡಿ ಇಂದಿಲ್ಲ. ಸೌಂದರ್ಯಕ್ಕಿಂತ ಹೆಚ್ಚಿನ ಕುರೂಪವಿಂದು ಸಿಗಲಾರದು. ಧೀರರಿಗಿಂತ ಹೆಚ್ಚಿನ ಹೇಡಿಗಳು ಭಾರತದಲ್ಲಿಲ್ಲ. ಅಹಿಂಸಕರಿಗಿಂತ ಹೆಚ್ಚಿನ ಹಿಂಸಕರು ಹುಡುಕಿದರೆ ಸಿಗಬಹುದೇ? ದರ್ ಸಮಿತಿಗಿಂತ ಹೆಚ್ಚಿನ ಕುಶಾಗ್ರಬುದ್ಧಿಯ ರಾಜಕೀಯ ಸಮಿತಿಯುಂಟೇ ?

(8) ನಾಯಿಗೆ ಕೋಲು
ಕಾಗೆಗೆ ಕಲ್ಲು,
ಎಮ್ಮೆಗೆ ಹಗ್ಗ
ಹತ್ತಿಗೆ ಮಗ್ಗ !
ದುಡಿಯದೆ ಪಾಲಿಗೆ
ಬರುವ ಹಮಾಲಿಗೆ
ಹೋಗೋ ಹೋಗೆಂ
ದಿಡು ಬರೆ ಕಾಲಿಗೆ !

ಈ ಎಂಟು ಮಾದರಿಗಳು ಪ್ರಸಿದ್ಧವಾದ ಹರಟೆಗಳ ಒಂದೊಂದು ತುಂಡುಗಳು. 'ಗದ್ಯಮಣಿದರ್ಪಣ' ಮತ್ತು 'ಬೇತಾಳಗಳ ಕೂಟ' ಎಂಬ ಪುಸ್ತಕಗಳಲ್ಲಿ ಇವುಗಳ ಪೂರ್ಣ ಪಾಠಗಳನ್ನು ಪರಾಂಬರಿಸಬಹುದು. ಶ್ರೀ ಸಿ. ಜಿ. ಧ್ಯಾರ

'ಬುರುಕಿ' ಯಲ್ಲಿ ವಿಡಂಬನಾತ್ಮಕ ಚುಟುಕು ಕತೆಗಳ ಚುರುಕನ್ನು ಕಾಣಬಹುದು. ಪಿ. ರಮಾನಂದರಾಯರ 'ಹುಚ್ಚು ಬೆಳದಿಂಗಳಿನ ಹೂಬಾಣಗಳು' ಪು. ತಿ. ನ. ಅವರ 'ಈಚಲಮರದಡಿಯಲ್ಲಿ', ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರ 'ನಮ್ಮ ಊರಿನ ರಸಿಕರು', ಎ. ಎನ್. ಮೂರ್ತಿರಾಯರ 'ಹಗಲುಗನಸುಗಳು' ನಾ. ಕಸ್ತೂರಿಯವರ 'ಅಲ್ಲೋಲ-ಕಲ್ಲೋಲ', ಬೀಚಿಯವರ 'ತಿಮ್ಮನ ತಲೆ' ಮುಂತಾದ ಎಷ್ಟೋ ಪುಸ್ತಕಗಳಲ್ಲಿ ಹರಟೆಯ ಒಳ್ಳೆಯ ಮಾದರಿಗಳನ್ನು ಕಾಣಬಹುದು.

ಹರಟೆಗಳು ಸುಂದರವಾಗಿ ಹೊರಡಲು ಮತ್ತು ತೋರಲು ಲೇಖಕ-ವಾಚಕರಲ್ಲಿ (1) ಭಾಷಾಜ್ಞಾನ, (2) ಶ್ರೋತ್ರ್ಯಶಿಕ್ಷೆ, (3) ಊಹನಪ್ರತಿಭೆ, (4) ಪೂರ್ವಭೂಮಿಕೆಯ ಜ್ಞಾನ, (5) ತಾರತಮ್ಯವಿವೇಕ, (6) ಮಾನುಷ್ಯಾಸಕ್ತಿ, (7) ಮತತಾಟಸ್ಥ್ಯ, (8) ವಿಶ್ವವಿಸ್ತಾರದೃಷ್ಟಿ ಇರುವುದು ಅಗತ್ಯ. ಈ ಸಂದರ್ಭದಲ್ಲಿ ಶ್ರೀ. ಡಿ. ವಿ. ಜಿ. ಅವರಿಂದ ಕೆಲ ಮಾತುಗಳನ್ನು ಹರಟೆಗಾರರ ನೆನಪಿಗೆ ತಂದುಕೊಡಬಹುದು:

'ಜಗತ್ಸೃಷ್ಟಿಯಲ್ಲಿ ಭಾಷೆಯ ಶಕ್ತಿ ಒಂದು ಅದ್ಭುತ. ಆ ಶಕ್ತಿಯಲ್ಲಿ ಸಹಜ ಭಾಗಕ್ಕಿಂತ ಕವಿಗಳು ಅದಕ್ಕೆ ಸಂಪಾದಿಸಿಕೊಟ್ಟಿರುವ ಕೃತಕ ಭಾಗವು ಕಡಿಮೆಯಾದದ್ದೇನೂ ಅಲ್ಲ. ಭೂಗರ್ಭದೊಳಗಿನಿಂದ ಅಯಶ್ಶಿಲೆಯನ್ನೆತ್ತಿ ತೆಗೆದು, ಅದರಿಂದ ಕಬ್ಬಿಣ, ಉಕ್ಕುಗಳನ್ನೂ ಕೊಡಲಿ, ಸೂಜಿಗಳನ್ನೂ ನಿರ್ಮಿಸಿ ಕೊಂಡಿರುವುದು ಎಂಥ ಪೌರುಷಸಿದ್ಧಿಯೋ—ನದೀವೇಗದಿಂದ ವಿದ್ಯುಚ್ಛಕ್ತಿ ಯನ್ನು ಹೊರಡಿಸಿ ಮನೆಗೆ ಬೆಳಕನ್ನೂ ಒಲೆಗೆ ಕಾವನ್ನೂ ತಂದುಕೊಂಡಿರುವುದು ಎಂಥ ಪೌರುಷಾದ್ಭುತವೋ—ಭಾಷೆಯನ್ನು ಕಾವ್ಯ-ಶಾಸ್ತ್ರ-ಪ್ರಬಂಧರೂಪಗಳಿಗೆ ತಿರುಗಿಸಿ ಮನೋಬುದ್ಧಿಗಳ ವಿಕಾಸಕ್ಕೂ ಜೀವನೋನ್ನತಿಗೂ ಸಾಧನಗಳನ್ನಾದ ಗಿಸಿಕೊಂಡಿರುವುದು ಅಂಥಾ ಪೌರುಷ ವಿಜೃಂಭಿತ. ಇದನ್ನು ಭಾಷಾವ್ಯವಹಾರಿ ಗಳೆಲ್ಲ-ವಾಚಕರೂ-ಲೇಖಕರು ಸಹ-ಸಂತತವಾಗಿ ದೃಷ್ಟಿಯಲ್ಲಿಟ್ಟುಕೊಂಡಿರಬೇಕು.'

ಶ್ರೀ ಡಿ. ಎಲ್. ನರಸಿಂಹಾಚಾರ್ಯರೆಂದಿರುವಂತೆ ಹೊಸಗನ್ನಡ ಸಾಹಿತ್ಯ ಪ್ರಪಂಚದಲ್ಲಿ ಕವಿತೆ, ಕಾದಂಬರಿ, ಸಣ್ಣ ಕತೆಗಳಲ್ಲಿ ಉಂಟಾಗಿರುವಷ್ಟು ಪ್ರಗತಿ ಇತರ ಸಾಹಿತ್ಯ ರೂಪಗಳಲ್ಲಿ ಕಾಣುವುದಿಲ್ಲ. ಉತ್ತಮ ಹರಟೆಯ ಸಂಗ್ರಹಗಳ ಸಂಖ್ಯೆ ಅತ್ಯಲ್ಪವೆನ್ನಬಹುದು. ಜನರಲ್ಲಿ ಜಾಣ್ನುಡಿ, ಚುರುಕುಮಾತು, ಸೂಕ್ಷ್ಮ ಜ್ಞಾನದ ಬಗ್ಗೆ ಕುತೂಹಲ, ನಿರ್ಮಲವಾದ ವಿನೋದ ಬುದ್ಧಿ, ನ್ಯಾಯ ಪಕ್ಷಪಾತ, ದೋಷ ನಿರ್ಮೂಲನಕ್ಕಾಗಿ ದೋಷೋಚ್ಚಾಟನ ಮಾಡುವ ತೀವ್ರಾಸಕ್ತಿ,

ರಸವಿಲಾಸಪರತೆ ಮುಂತಾದ ಆರೋಗ್ಯ ಸೌಂದರ್ಯವರ್ಧಕ ವಸ್ತು-ಗುಣಗಳ ಸಂಗ್ರಹ ಜೇರೂರಿ ಬೆಳೆಯಬೇಕಾದರೆ ಪ್ರತಿಭಾವಂತರ ಲೇಖನಿಯಿಂದ ಹೆಚ್ಚು ಹೆಚ್ಚಾಗಿ ರಸವತ್ತಾದ ಲಘು ಪ್ರಬಂಧಗಳು ಹೊರಬೀಳಬೇಕಾಗಿದೆ. ಇಂದಿನ ಮುದ್ರಣ ಯುಗದಲ್ಲಿ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಕಾಶಕರ ಪಾತ್ರ ಕಡಿಮೆ ಪ್ರಾಧಾನ್ಯವುಳ್ಳದ್ದಲ್ಲ. ಕನ್ನಡ ಪ್ರಕಾಶಕರು ಸಾಹಿತ್ಯ ಸರಸ್ವತಿಯ ಸೇವೆಯಲ್ಲಿ ಈ ವರೆಗೆ ಎಷ್ಟೋ ಸಲ ಒಳ್ಳೆಯ ದೃಷ್ಟಿಯನ್ನು ತಳೆದು ಉತ್ತಮ ಗ್ರಂಥಗಳನ್ನು ಪ್ರಕಾಶಕ್ಕೆ ತಂದಿದ್ದಾರೆ. ಅವರ ಲಕ್ಷ್ಯವು ಹರಟೆಯ ಕಡೆಗೆ ಇನ್ನೂ ಹೆಚ್ಚಾಗಿ ಹರಿಯುವುದು ಕ್ರಮಪ್ರಾಪ್ತ. ಅವರು ಉತ್ತಮ ಹರಟೆಗಾರರಿಂದ ಹರಟೆ ಗಳನ್ನು ಬರೆಯಿಸಿ ಪ್ರಸಿದ್ಧಿಗೆ ತರಬೇಕು. ಪತ್ರಿಕಾಕರ್ತರಾದವರೂ ಕೇವಲ 'ವಾರದ ಕತೆ' ಯನ್ನಷ್ಟೇ ಪ್ರೋತ್ಸಾಹಿಸದೆ, ಆಕರ್ಷಕವೂ ಜ್ಞಾನನೇತ್ರೋನ್ಮೀಲನ ಪರವೂ ಆದ ಲಘುಪ್ರಬಂಧಗಳಿಗೀಗ ಹೆಚ್ಚುಹೆಚ್ಚಾಗಿ ಸ್ಥಳವನ್ನು (ಪುರಸ್ಕಾರ ಪೂರ್ವಕವಾಗಿ) ಮೀಸಲಿಡಬೇಕು. ಆಗ ಕನ್ನಡದ ಹೊಸ ಸಾಹಿತ್ಯ-ವಾಹಿನಿಯು ವರ್ಣರಂಜಿತವಾದೀತು; ಜನರ ರಸದೃಷ್ಟಿ ಇನ್ನಷ್ಟು ಚೆನ್ನಾಗಿ ಪರಿಷ್ಕೃತವಾದೀತು.

"ಓಂ ನಲ್"

ಅನುಬಂಧ

ಪ್ರೌಢ ಪ್ರಬಂಧಗಳು:

ಆರ್. ಆರ್. ದಿವಾಕರ	... ಉಪನಿಷತ್ಪ್ರಕಾಶ
ಆಲೂರು ವೆಂಕಟರಾಯ	... ಕನ್ನಡ ದಶೋಪನಿಷತ್ತುಗಳು
ಶ್ರೀರಂಗ	... ಗೀತಾಗಾಂಭೀರ್ಯ
ಹೊಸಕೆರೆ ಚಿದಂಬರಯ್ಯ	... ಪಂಚದಶೀ ತತ್ವಾರ್ಥ
ಎಫ್. ಜಿ. ಹಳಕಟ್ಟಿ	... ಲಿಂಗಪೂಜೆಯ ತತ್ವಗಳು
ಎನ್. ಆರ್. ಕುಲಕರ್ಣಿ	... ವಿಕಾಸವಾದ
ಡಿ. ವಿ. ಗುಂಡಪ್ಪ	... ಬಾಳಿಗೊಂದು ಬೆಳಕು
ಕಾರಂತ	... ಬಾಳ್ವೆಯೇ ಬೆಳಕು
ಅ. ನ. ಕೃ.	... ಹೊಸಹುಟ್ಟು
ಸಿಂಪಿ ಲಿಂಗಣ್ಣ	... ಪವಿತ್ರಜೀವನ
ಗೌರೀಶ ಕಾಯ್ಕಿಣಿ	... ಮಾರ್ಕ್ಸ್‌ವಾದ
ಎಚ್. ಕೃಷ್ಣರಾವ್	... ರಾಜನೀತಿ
ಶಂ. ಬಾ. ಜೋಶಿ	... ಯಕ್ಷಪ್ರಶ್ನೆ
ದ. ರಾ. ಬೇಂದ್ರೆ	... ವಿಚಾರಮಂಜರಿ
ಸಿದ್ದವ್ವನಹಳ್ಳಿ ಕೃ. ಶರ್ಮ	... ಗಾಂಧೀ ಯೋಜನೆ
ನಾ. ಕಸ್ತೂರಿ	... ಮದುವೆ
ಜಿ. ಪಿ. ರಾಜರತ್ನಂ	... ರಾಮರಾಜ್ಯ
ಕು. ಶಿ. ಹರಿದಾಸ ಭಟ್ಟ	... ಅರ್ಥಶಾಸ್ತ್ರ
ದೇವುಡು ನರಸಿಂಹ ಶಾಸ್ತ್ರಿ	... ಮೀಮಾಂಸಾದರ್ಪಣ
ವೆಂಕಟರಾವಂಪ್ಪ	... ಆದರ್ಶರಾಜ್ಯ
ಶ್ರೀನಿವಾಸ	... ಪ್ರಸಂಗ
ರಾ. ಭ. ಹಾಸಣಗಿ	... ವೈದಿಕ ವಾಙ್ಮಯ ಪರಿಚಯ
ಶ್ರೀನಿವಾಸಾಚಾರ್ಯ	... ಹಿಂದೂದರ್ಶನಸಾರ
ಶ್ರೀನಿವಾಸ ಹಾವನೂರ	... ಅವಿವಾಹಿತೆ
ಎಂ. ವಿ. ಕೃಷ್ಣರಾವ್	... ಕಾರ್ಲ್ ಮಾರ್ಕ್ಸ್ ಮತ್ತು ಸಮತಾವಾದ

ಎಚ್. ಎನ್. ರಾಘವೇಂದ್ರಾಚಾರ್ ... ದ್ವೈತ ವೇದಾಂತ
ಬಿ. ಎಚ್. ಶ್ರೀ. ... ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ
ಜಿ. ಹನುಮಂತ ರಾವ್ ... ತರ್ಕಶಾಸ್ತ್ರ
ಎನ್. ಎ. ಎಚ್. ರಾವ್ ಮತ್ತು ಬಿ. ಎಚ್. ಶ್ರೀ. ... ಮಾನಸದರ್ಪಣ
ಜಿ. ಎಸ್. ಹಾಲಪ್ಪ ... ಸಾರ್ವಜನಿಕ ಆಡಳಿತ
ಬಡೇಕಿಲ್ ಕೃಷ್ಣ ಭಟ್ಟ ... ನಾಗರಿಕತೆ
ಕೆ. ಎನ್. ವೆಂಕಟರಾಮಪ್ಪ ... ಮಾನವ ಶಾಸ್ತ್ರ
ಎನ್. ಎಸ್. ಸುಬ್ಬರಾವ್ ... ಹಣ ಪ್ರಪಂಚ

—ಇತ್ಯಾದಿ

ಲಘು ಪ್ರಬಂಧಗಳು:

ಎಸ್. ಮಂಜುನಾಥ ... ಇಂಗ್ಲೀಷ್ ಪ್ರಬಂಧಗಳು
ವಿ. ಸೀ. ... ಪಂಪಾಯಾತ್ರೆ
ಪು. ತಿ. ನ. ... ರಥ ಸಪ್ತಮಿ ಮತ್ತು ಇತರ ಚಿತ್ರಗಳು
ಎ. ಎನ್. ಮೂರ್ತಿರಾವ್ ... ಹಗಲುಗನಸುಗಳು
ಗೊ. ರಾ. ಅಯ್ಯಂಗಾರ್ ... ನಮ್ಮ ಊರಿನ ಕವಿಗಳು
ಪ. ರಮಾನಂದ ... ಹುಚ್ಚು ಬೆಳದಿಂಗಳಿನ ಹೂ ಬಾಣಗಳು
ಎನ್. ಕೆ. ಕುಲಕರ್ಣಿ ... ಮುಂಗಾಲ್ ಪುಟಿಗೆ
ಅ. ನ. ಕೃ. ... ಪೊರಕೆ
ಪರಮೇಶ್ವರ ಭಟ್ಟ ... ಕೆಲವು ಇಂಗ್ಲೀಷ್ ಪ್ರಬಂಧಗಳು
ಕೋ. ಶಿ. ಕಾರಂತ ... ಗ್ನಾಸ
ಶ್ರೀರಂಗ ... ಮುಕ್ಕಣ್ಣನ ಯಾತ್ರೆ
ಎನ್. ಎಸ್. ಗದಗಕರ್ ... ಗೋವಾಯಾತ್ರೆ ಮತ್ತು ಇತರ ಕಥೆಗಳು
ನಾಡಿಗೇರ ಕೃಷ್ಣರಾಯ ... ತಲೆಹರಟೆ
ಬಳ್ಳಾರಿ ಬೀಚಿ ... ತಿಮ್ಮನ ತಲೆ
ವಿ. ಜಿ. ಭಟ್ಟ ... ಬುರುಕಿ

ಬಿ. ಎಚ್. ಶ್ರೀ.	... ಬೇತಾಳಗಳ ಕುಣಿತ
ದಾಶರಥಿ ದೀಕ್ಷಿತ	... ಪ್ರೇತಸಂಹಾರ
ನಾ. ಕಸ್ತೂರಿ	... ಕಲ್ಲೋಲ
ರಾ. ಶಿ.	... ತುಟಿಮೀರಿದುದು
ದ. ರಾ. ಬೇಂದ್ರೆ	... ನಿರಾಭರಣ ಸುಂದರಿ
ಅಷ್ಟಾವಕ್ರ	... ರಸಿಕರಸಾಯನ
ರಾಮರಾವ್	... ನಮ್ಮ ಅರಣ್ಯಯಾತ್ರೆ
ಠಾಕೂರ	... ಶಿಶು ಅಥವಾ ಬಿದಿಗೆ ಚಂದ್ರ
ಅನಂತನಾರಾಯಣ	... ಮುತ್ತು ಹವಳ
ಭಾರದ್ವಾಜ	... ಕಮಲಾಕಾಂತನ ಕಡತ

—ಇತ್ಯಾದಿ

ಚಾರಿತ್ರಿಕ ಪ್ರಬಂಧಗಳು:

ಎಂ. ಆರ್. ಶ್ರೀ.	... ಬಸವಣ್ಣನವರು
ಒ. ಎಸ್. ಲಿಂಗಣ್ಣಯ್ಯ	... ಆತ್ಮಜ್ಞಾನಿ, ಅಲ್ಲಮಪ್ರಭು
ನೆರಂಗ	... ಶ್ರೀರಂಗ
ಅ. ನ. ಕೃ.	... ಕರ್ಣಾಟಕದ ಕಲಾವಿದರು
ಕುವೆಂಪು	... ರಾಮಕೃಷ್ಣಪರಮಹಂಸ
ಡಿ. ವಿ. ಗುಂಡಪ್ಪ	... ಗೋಪಾಲಕೃಷ್ಣ ಗೋಖಲೆ
ಶಿವರಾಮ ಕಾರಂತ	... ಹುಚ್ಚು ಮನಸ್ಸಿನ ಹತ್ತು ಮುಖಗಳು
ರಾಮಸ್ವಾಮಿ ಅಯ್ಯಂಗಾರ	... ಜೀವ ಜ್ಯೋತಿಗಳು
ಆನಂದಕಂದ	... ಬಾಬುರಾಜೇಂದ್ರ ಪ್ರಸಾದ
ಟಿ. ಟಿ. ಶರ್ಮ	... ಜೂಲಿಯಸ್ ಸೀಸರ್
ಬಿ. ಪಿ. ರಾಜರತ್ನಂ	... ಭಗವಾನ್ ಮಹಾವೀರ
ಸಂಪದ್ಗಿರಿರಾಯ	... ಸಾಕ್ರೆಟೀಸ್
ಸಿ. ಕೆ. ವೆಂಕಟರಾಮಯ್ಯ	... ಎಬ್ರಹಾಂ ಲಿಂಕನ್
ಸಿದ್ಧವ್ವನಹಳ್ಳಿ ಕೃಷ್ಣಶರ್ಮ	... ಸರದಾರ ವಲ್ಲಭಭಾಯಿ
ಗೌರೀಶ ಕಾಯ್ಕಿಣಿ	... ಪಶ್ಚಿಮದ ಪ್ರತಿಭೆ
ಎಂ ಹರಿದಾಸ ರಾವ್	... ಉಕ್ಕಿನ ಮನುಷ್ಯ

ಚಿದಂಬರಯ್ಯ ... ಭರತಖಂಡದ ಜೀವಜ್ಯೋತಿಗಳು
ನಾ. ಕಸ್ತೂರಿ ... ಅಶೋಕ
ಮಾಸ್ತಿ ವೆಂಕಟೇಶ ಅಯ್ಯಂಗಾರ್ ... ಶ್ರೀ ರಾಮಕೃಷ್ಣ
ಎ. ಆರ್. ಕೃಷ್ಣ ಶಾಸ್ತ್ರಿ ... ನಾಗಮಹಾಶಯ
ಆಲೂರು ವೆಂಕಟರಾಯ ... ನನ್ನ ಜೀವನ ಸ್ಮೃತಿಗಳು
ತ. ರಾ. ಸು. ... ರೇಖಾಚಿತ್ರಗಳು
ಠಾಕೂರ ... ನನ್ನ ಬಾಲ್ಯದ ದಿನಗಳು
ಕಿಲ್ಲೆ ಹೆಗಡೆ ... ಪ್ರಾಚೀನ ತುಳುನಾಡು
ಶಿವಮೂರ್ತಿ ಶಾಸ್ತ್ರಿ ... ವೀರಶೈವ ಮಹಾಪುರುಷರು
ಪಂಚಮುಖಿ ... ಪುರಂದರದಾಸರ ಜೀವನ ಚರಿತ್ರೆ
ಪುಟ್ಟರಾಮು ... ಜವಾಹರಲಾಲ ನೆಹರು
ಎಂ. ಎಸ್. ಪುಟ್ಟಣ್ಣ ... ಕುಣಿಗಲ್ ರಾಮಶಾಸ್ತ್ರಿಯವರ ಚರಿತ್ರೆ
ನಾರಾಯಣರಾವ್ ... ಮೋಕ್ಷಗುಂಡಂ ವಿಶ್ವೇಶ್ವರಯ್ಯ
ಅರ್ಚಿಕ ಮತ್ತು ಪ್ರಸಾದ ... ಶ್ರೀ ರಮಣ ಮಹರ್ಷಿ
ದಿವಾಕರ ... ಮಹಾಯೋಗಿ
ಶ್ರೀಮತಿ ಶ್ರೀಕಂಠಯ್ಯ ... ಜೋಸೆಫ್ ಸ್ಟಾಲಿನ್
ನಾಡಿಗ ಕೃಷ್ಣಮೂರ್ತಿ ... ಭಾರತದ ವೀರ ರಮಣಿಯರು
ಎನ್. ಎಸ್. ವೀರಪ್ಪ ... ಲೆನಿನ್

—ಇತ್ಯಾದಿ

ವಿಮರ್ಶಾತ್ಮಕ ಪ್ರಬಂಧಗಳು:

ಎ. ಎನ್. ನರಸಿಂಹಯ್ಯ ... ಸಾಹಿತ್ಯ
ಮಾಸ್ತಿ ವೆಂಕಟೇಶ ಅಯ್ಯಂಗಾರ ... ಸಾಹಿತ್ಯ
ದ. ರಾ. ಬೇಂದ್ರೆ ... ಸಾಹಿತ್ಯ ಮತ್ತು ವಿಮರ್ಶೆ
ಅ. ನ. ಕೃ. ... ಸಾಹಿತ್ಯ ಮತ್ತು ಜೀವನ
ಡಿ. ವಿ. ಗುಂಡಪ್ಪ ... ಸಾಹಿತ್ಯ ಶಕ್ತಿ
ಕುವೆಂಪು ... ಸಾಹಿತ್ಯ ಪ್ರಚಾರ
ವಿ. ಕೆ. ಗೋಕಾಕ ... ಸಾಹಿತ್ಯ ಪ್ರಗತಿ

ಎಸ್. ವಿ. ರಂಗಣ್ಣ	.., ಶೈಲಿ
ಶ್ರೀರಂಗ	,.. ನಗೆ
ಜಿ. ಆರ್. ಪಾಂಡೇಶ್ವರ	... ರಾಧಸ್
ಬೆಟಗೇರಿ ಕೃಷ್ಣಶರ್ಮ	... ಕರ್ನಾಟಕ ಜೀವನ
ಬಿ. ಎಚ್. ಶ್ರೀ.	... ಹೊಸಗನ್ನಡ ಸಾಹಿತ್ಯ ಶೈಲಿ
ಎಸ್. ಎಸ್. ಮಾಳವಾಡ	... ಕರ್ನಾಟಕ ಸಾಹಿತ್ಯ–ಸಂಸ್ಕೃತಿ ದರ್ಶನ
ಮುಂಳಿಯು ತಿಮ್ಮಪ್ಪಯ್ಯ	... ಕವಿರಾಜ ಮಾರ್ಗವಿವೇಕ
ಶ್ರೀಕಂಠಯ್ಯ	.., ಪಂಪ
ಆರ್. ಎಸ್. ಮುಗಳಿ	... ರನ್ನನ ಕೃತಿರತ್ನ
ವಿ. ಸೀ.	... ಕರ್ನಾಟಕ ಕಾದಂಬರಿ
ಡಿ. ವಿ. ಶೇಷಗಿರಿರಾವ್	... ಕವಿ ನಾಗಚಂದ್ರನ ಕಾವ್ಯಗಳು
ಶ್ರೀನಿವಾಸಮೂರ್ತಿ	... ವಚನಧರ್ಮಸಾರ
ಕುಂದಣಗಾರ	... ಹರಿಹರ ದೇವ
ನರಸಿಂಹಾಚಾರ್	... ಹಂಪೆಯ ಹರಿಹರ
ಎ. ಆರ್. ಕೃಷ್ಣಶಾಸ್ತ್ರಿ	... ಸರ್ವಜ್ಞ ಕವಿ
ಜಿ. ಪಿ. ರಾಜರತ್ನಂ	... ಕವಿ ಗೋವಿಂದ ಪೈ
ಟಿ. ಎಸ್. ಶಾಮರಾವ್	... ಅ. ನ. ಕೃ.
ಅ. ನ. ಕೃ.	... ಕೈಲಾಸಂ
ಶ್ರೀ	... ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ
ಟಿ. ಎಸ್. ಶಾಮರಾವ್	... ರತ್ನಾಕರವರ್ಣಿ
ಟಿ. ಎಸ್. ವೆಂಕಣ್ಣಯ್ಯ	... ಪ್ರಾಚೀನ ಸಾಹಿತ್ಯ
ವೆಂಕಟರಾಮಯ್ಯ	... ಭಾಸ ಮಹಾ ಕವಿ
ಕೆ. ಶೇಷಾಚಾರ್ಯ	... ಅಲಂಕಾರ ಶಾಸ್ತ್ರ
ರಾಮರಾವ್	... ಮುದ್ದಣ
ಶಿವರಾಮ ಕಾರಂತ	... ಕಲೆಯ ದರ್ಶನ

—ಇತ್ಯಾದಿ

ಪ್ರಜಾಪ್ರಭುತ್ವದ ಇಂದಿನ ಅಗತ್ಯವು ಜನಶಿಕ್ಷಣವಾದುದರಿಂದ ಪ್ರೌಢ ವಿಚಾರ ಹಾಗೂ ಕಲ್ಪನೆಗಳನ್ನು ಜನಮನದಲ್ಲಿ ಬಿತ್ತಿ, ನಮ್ಮ ಸಾಂಸ್ಕೃತಿಕ,

ನೈತಿಕ, ರಾಜಕೀಯ, ಸಾಹಿತ್ಯಿಕ ಮತ್ತು ಸಾಮಾಜಿಕ ಪರಂಪರೆ ಹಾಗೂ ಪ್ರಯೋಗಗಳ ಜ್ಞಾನವನ್ನು ಪಡೆಯಲು ಸಿದ್ಧರನ್ನಾಗಿಯೂ ಆಸಕ್ತರನ್ನಾಗಿಯೂ ಮಾಡುವ ಸತ್ಕಾರ್ಯವನ್ನು ವಿವಿಧ ರೂಪ ಸೌಂದರ್ಯವುಳ್ಳ ಪ್ರಬಂಧ ಸಾಹಿತ್ಯವೊಂದೇ ಸಮರ್ಥವಾಗಿ ನೆರವೇರಿಸಬಲ್ಲುದು. ಪ್ರಬಂಧವು ದೇವಭಕ್ತರ ನಡುವಿನ ದೇವದೂತನಿದ್ದಂತೆ ಎನ್ನಬಹುದು, ಅಥವಾ ಪ್ರಿಯ ಪ್ರೇಯಸಿಯರ ನಡುವಿನ ಪ್ರೇಮದೂತಿಯಂತೆ ಎನ್ನಬಹುದು. ಏಕೆಂದರೆ ಅರಿಯಬೇಕಾದ ಅಥವಾ ಸವಿಯಬೇಕಾದ ಪ್ರೌಢ ವ್ಯಕ್ತಿ ಗುಣಗಳ, ವಿಷಯಗಳ ಹಾಗೂ ಕೃತಿಗಳ ಪರಿಚಯವನ್ನು ಪ್ರೌಢ ರೀತಿಯಿಂದ ಮಾಡಿಕೊಡುವ ವಾಚ್ಯಪ್ರಧಾನ ಗದ್ಯ ಮಾಧ್ಯಮವೆಂದರೆ ಪ್ರಬಂಧವೇ. ವಿದ್ಯೆಗೂ ವಿದ್ಯಾರ್ಥಿಗೂ ನಡುವೆ ಶಿಕ್ಷಕನು ವಹಿಸುವ ಪಾತ್ರವನ್ನು ಪ್ರಬಂಧವು ಸಾಹಿತ್ಯ–ಕಲೆ–ವಿಜ್ಞಾನ–ತತ್ವಜ್ಞಾನಗಳಿಗೂ ವಾಚಕರಿಗೂ ನಡುವೆ ನಿಂತು ನಿರ್ವಹಿಸುತ್ತದೆ ಎಂದರೆ ಅದರ ಸ್ಥಾನವನ್ನು ಹೆಚ್ಚುಕಡಿಮೆ ಸರಿಯಾಗಿ ನಿರ್ದೇಶಿಸಿದಂತಾಗುತ್ತದೆ ಎನ್ನಬಹುದು. ತರ್ಕಶಾಸ್ತ್ರವನ್ನು ಕಲಿಸುವುದು ಶಿಷ್ಯಬುದ್ಧಿಯನ್ನು ವಿಶದಗೊಳಿಸಲು ಎಂದು ಹೇಳುತ್ತಾರೆ. ಅದೇ ಕಾರ್ಯವನ್ನು ಪ್ರಬಂಧವು ಇನ್ನೂ ವ್ಯಾಪಕವಾಗಿ ಜನಜೀವನಸಹಜವಾಗಿ ಜನತೆಗೆ ನೆರವೇರಿಸಿಕೊಡುತ್ತದೆ. ಪ್ರಬಂಧವು ಈ ದೃಷ್ಟಿಯಿಂದ ಶಾಸ್ತ್ರವೂ ಹೌದು, ಸಾಹಿತ್ಯವೂ ಹೌದು; ಅವೆರಡರಲ್ಲೂ ಪ್ರವೇಶಿಸುವ ಅರ್ಹತೆಯನ್ನು ದೊರಕಿಸಿಕೊಡುವ ಏಣಿಯೂ ಹೌದು; ಅರ್ಥಾತ್ ಶಾಸ್ತ್ರ ಅಥವಾ ಸಾಹಿತ್ಯವು ಸ್ಪಷ್ಟವಾಗಿ ನಿರ್ದೇಶಿಸಲಾರದ, ಆದರೆ ಅದರ ಅಥವಾ ಇದರ ಮುಂಗುರುಹುಗಳನ್ನು ತೋರುವ ಕೌಮಾರತೆಯ ಕಸುವುಳ್ಳ, ಕಥನ–ವರ್ಣನಗಳಲ್ಲಿ ಯಾವ ಒಂದನ್ನೂ ಪ್ರಧಾನವಾಗಿಟ್ಟುಕೊಳ್ಳದ, ವಿವರಣ ಅಥವಾ ವಿವೇಚನೆಯನ್ನು ಮುಖ್ಯವೆಂದಿಟ್ಟುಕೊಂಡ ಗದ್ಯಮಾರ್ಗವೆಂದರೆ ಪ್ರಬಂಧದ ಸಾಮಾನ್ಯ ಸ್ವರೂಪವನ್ನು ಊಹಿಸಿಕೊಳ್ಳಲು ಸಹಾಯಕವಾಗುತ್ತದೆ ಎನ್ನಬಹುದಲ್ಲವೆ? ಇವನ್ನು ಮೀರಿದ ವಿಶಿಷ್ಟ ಲಕ್ಷಣಗಳು ವಿಶಿಷ್ಟ ರೀತಿಯ ಪ್ರಬಂಧಗಳಲ್ಲಿ ಕಂಡುಬರಬಹುದು.

ಈ ಗ್ರಂಥಕರ್ತರ ಇತರ ಪ್ರಕಟನೆಗಳು

1. ಕಿನ್ನರಗೀತ — ಪದ್ಯ ಸಂಕಲನಗಳು
2. ಅಮೃತಬಿಂದು ,,
3. ಮಂಜುಗೀತ ,,
4. ಮೇಘನಾದ ,,
5. ರಸಯಜ್ಞ ,,
1. ಹೊಸಗನ್ನಡ ಸಾಹಿತ್ಯ ಶೈಲಿ — ವಿಮರ್ಶ ಗ್ರಂಥಗಳು
2. ಬೇಂದ್ರೆ ,,
3. ಟೀ. ಎಸ್. ಎಲಿಯಟ್ ,,
4. ಕವೀಂದ್ರ–ರವೀಂದ್ರ ,,
5. ಕಾವ್ಯಸೂತ್ರ ,,
1. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಪ್ರೌಢ ಪ್ರಬಂಧಗಳು
2. ಜ್ಞಾನಸೂತ್ರ (ತತ್ವಶಾಸ್ತ್ರ) ,,
3. ವಿದೇಶದ ತಿಳಿವಳಿಕೆಗಳು ,,
4. ಪಂಚಮುಖಿ ,,
5. ರಾಷ್ಟ್ರಸೂತ್ರ ,,
6. ಮಾನಸದರ್ಪಣ ,,
1. ಕುಂದಮಾಲೆ (ನಾಟಕ) — ಭಾಷಾಂತರ ಗ್ರಂಥಗಳು
2. ಸಂಸ್ಕೃತ ಸುಭಾಷಿತ ಸಂಗ್ರಹ ,,
3. ಮನುಸ್ಮೃತಿಯ 7ನೆಯ ಅಧ್ಯಾಯ ,,
4. ಭಾರತೀಯ ವಾಙ್ಮಯ ,,
5. ಭಾರತೀಯ ರಾಜ್ಯಶಾಸ್ತ್ರದ ಸತ್ವ ಮತ್ತು ಸ್ವರೂಪ ,,
6. ಸ್ವಾತಂತ್ರ್ಯ ಮೀಮಾಂಸೆ ,,
1. ರಮಣ ಮಹರ್ಷಿ — ಮಕ್ಕಳ ಸಾಹಿತ್ಯ
2. ಮುತ್ತುರತ್ನ ,,
3. ಕೌಶಿಕ ರಾಮಾಯಣ ,,
4. ಮಯೂರ ಶರ್ಮ ,,
1. ಭಾಷಣ ಭೈರವರ ಒಡ್ಡೋಲಗ — ವಿಡಂಬನ ಸಾಹಿತ್ಯ
2. ಮರುಳಸಿದ್ಧನ ಮಹಾವಚನಗಳು ,,
1. ಭಾನುಮತೀ ಕಲ್ಯಾಣ — ಸಂಪಾದಿತ ಯಕ್ಷಗಾನ ನಾಟಕ
1. ಬನವಾಸಿಯ ಕದಂಬರು — ಇತಿಹಾಸ ಗ್ರಂಥ
1. ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು — ಪ್ರವಾಸಿ ಸಾಹಿತ್ಯ
1. ನೆಹರು ಉವಾಚ — ಸೂಕ್ತಿ ಮುಕ್ತಾಫಲ

ಬೆಲೆ ರೂ. 5/-